Mr. SPEAKER.—All depends upon the date of the Judgement. I have requested the Law Department to furnish a copy of the Judgement. But it is unable to furnish a copy. Therefore, I have requested the Hon. Member to furnish a copy of the Judgement, so that I could go through the Judgement before giving my consent. I must have the date of the Judgement in the first place. Then only I can apply my mind and then decide whether to give my consent or not.

Sri M. NAGAPPA.—There is no obligation on the part of the member to furnish copies of the Judgement. He can only quote references. There are certain rules regarding this. It is not necessary for the Chair to get a copy from the Member to give its considered ruling.

Mr. SPEAKER.—Unless the member gives a copy, it may not be possible to have it otherwise. The Hon. Member may please meet me in my Chambers.

Sri M. NAGAPPA.—Then what is the use of my notices ?

Mr. SPEAKER.—Now Budget discussion will commence.

Budget Estimates for 1969-70

(General Discussion)

(Debate continued.)

ಶ್ರೀಮತಿ ಕೆ. ಲೀಲಾವತಿ ರೈ (ಬಂಟ್‌ವಾಳ).—ಮಾನ್ಯ ಅಧ್ಯಕ್ಷರೇ, ಈ ಸನ್ಮಾನ್ಯ ಸಭೆಯಲ್ಲಿ ಮಂಡಿಸಿದಂಥ ಬಡ್ಜೆಟ್ ಮೇಲೆ ಮಾತನಾಡಬೇಕಾದರೆ, ಒಂದೆರಡು ವಿಚಾರಗಳನ್ನು ಮೊನ್ನೆ ಇದೇ ಮಾನ್ಯ ಸಭೆಯಲ್ಲಿ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮತಿ ಫರ್ನಾಂಡಿಸ್ ಅವರು ಶಿವಸೇನೆಯ ಬಗ್ಗೆ ಖಂಡಿಸುತ್ತಾ ಕುಂದಾಪುರದಲ್ಲಿಯೂ ಸಹ ಶೆಟ್ಟಿ ಸೇನೆ, ಬಂಟರಸೇನೆಗಳು ಉದ್ಭವವಾಗಿವೆ ಯೆಂದು ಅವರು ಉದ್ರೇಕಕಾರಿಯಾಗಿ ಹೇಳಿದ್ದು ನನಗೆ ಆಶ್ಚರ್ಯವಾಯಿತು.

[Mr. Deputy Speaker in the Chair]

ಈ ರೀತಿ ಅವರು ಹೇಳಿದ್ದು ನಮ್ಮ ಜಿಲ್ಲೆಯ ದೌರ್ಭಾಗ್ಯವೆಂದು ಹೇಳಬಹುದು. ಈ ರೀತಿ ಹೇಳಿ ಅವರು ಅಲ್ಲಿಯ ಜನಜೀವನದ ಇತಿಹಾಸಕ್ಕೆ ಕಳಂಕ ತಂದಿರುತ್ತಾರೆ. ಸತ್ಯಕ್ಕೆ ದೂರವಾದ ಸಂಗತಿಯನ್ನು ಇಲ್ಲಿ ಅವರು ಹೇಳಿದ್ದಾರೆಂದು ನಾನು ನಿರ್ಭಯವಾಗಿ ಹೇಳಬಯಸುತ್ತೇನೆ. ಶ್ರೀಮತಿ ಫರ್ನಾಂಡಿಸ್ ಅವರು ಆರಿಸಿ ಬಂದಿರುವ ಕ್ಷೇತ್ರವಾದ ಕುಂದಾಪುರದಲ್ಲಿ ಬಂಟ ಜನರು ಬಹಳ ಇದ್ದಾರೆ.

Smt. WINNIFRED F. FERNANDES (Coondapur).—On a Point of Order Sir.........

ಶ್ರೀಮತಿ ಕೆ. ಲೀಲಾವತಿ ರೈ.—ನಾನು ಈಲ್ಡ್ ಆಗುವುದಿಲ್ಲ. ಕುಂದಾಪುರದಲ್ಲಿ ಬಂಟರು ಬಹುಸಂಖ್ಯಾತರು ಇದ್ದಾರೆ. ಕುಂದಾಪುರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸೋಲುವುದಕ್ಕೆ ಈ ಬಂಟರೇ ಕಾರಣ ಎಂಬುದನ್ನು ಇವರು ಮರೆತಂತೆ ಕಾಣುತ್ತದೆ. ನಾನು ಅಧ್ಯಕ್ಷರ ಮೂಲಕ ಅವರಲ್ಲಿ ಒಂದು ವಿಷಯವನ್ನು ಹೇಳಬಯಸುತ್ತೇನೆ, ಏನೆಂದರೆ ಅವರು ಹೇಳಿದಂತಹ ಮಾತು ಸತ್ಯವಿದ್ದರೆ, ಅವರು ಇನ್ನೊಮ್ಮೆ ಇದೇ ವಿಷಯವನ್ನು ಹೇಳುವುದಿದ್ದರೆ...

ಶ್ರೀ ವಾಟಾಳ್ ನಾಗರಾಜ್.—ಬಡ್ಜೆಟ್‌ನಲ್ಲಿ ಬಂಟರ ವಿಷಯ ಬರುತ್ತದೆಯೇ ?

ಶ್ರೀಮತಿ ಕೆ. ಲೀಲಾವತಿ ರೈ.—ಅದೇ ವಿಷಯವನ್ನು ಅವರು ಎದೆಮುಟ್ಟಿ ಈ ಮಾನ್ಯ ಸಭೆಯಲ್ಲಿ ಮತ್ತೆ ಹೇಳುವುದಾದರೆ ಅವರಲ್ಲಿ ಒಂದು ವಿಷಯವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

Smt. WINNIFRED F. FERNANDES.—On a Point of order. The Hon'ble Member is looking into something and reading.

ಶ್ರೀಮತಿ ಕೆ. ಲೀಲಾವತಿ ರೈ.—ಸ್ವಾಮಿ, ತಮ್ಮ ಮೂಲಕ ಅವರಲ್ಲಿ ಒಂದು ವಿಷಯವನ್ನು ವಿನಂತಿಮಾಡಿಕೊಳ್ಳುತ್ತೇನೆ.

* * * *

ಶ್ರೀ ಕೆ. ಹೆಚ್. ರಂಗನಾಥ.—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ.* * * * *

Mr. DEPUTY SPEAKER.—I order for expunction of those remarks.

Smt. K. LEELAVATHI RAI.—I don't want to go against your wishes. ನಾನು ತಮ್ಮ ಮೂಲಕ ಸೂಚನೆ ಮಾಡುವುದು ಇಂತಹ ವಿಚಾರಗಳನ್ನು ಇಲ್ಲಿ ಮಾತನಾಡಬಾರದು.

ಉಪಾಧ್ಯಕ್ಷರು :—ಮಾನ್ಯ ಸದಸ್ಯರು ಬಡ್ಜೆಟ್ ಮೇಲೆ ಮಾತನಾಡಬೇಕು.

ಶ್ರೀಮತಿ ಕೆ. ಲೀಲಾವತಿ ರೈ.—ನಾನು ಬಡ್ಜೆಟ್ ಮೇಲೇ ಮಾತಾಡುತ್ತಿದ್ದೇನೆ. ಕುಂದಾಪುರದಲ್ಲಿ ಚಿನ್ನದ ಕಳ್ಳಸಾಗಾಣಿಕೆ ನಡೆಯುತ್ತಿದೆ ಇದರ ಬಗ್ಗೆ ಸರಕಾರಕ್ಕೆ ಕೂಡ ಸೂಚನೆ ಕೊಡಬೇಕು. ಮುಖ್ಯ ಮಂತ್ರಿಗಳು ಇದರ ಬಗ್ಗೆ ಎನ್‌ಕ್ವೈರಿ ಮಾಡಬೇಕು ಮತ್ತು ಇದನ್ನು ಕೇಂದ್ರಕ್ಕೂ ತಿಳಿಸಬೇಕು ಎಂದು ನಾನು ಇಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ (ಕಾಪು).—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಸ್ವಾಮೀ, ಈ ಮಾನ್ಯ ಸಭೆಯ ಇಬ್ಬರು ಸದಸ್ಯರು ಇಲ್ಲಿ ಮಾತನಾಡುವಾಗ ಕುಂದಾಪುರದಲ್ಲಿ ಶೆಟ್ಟಿಸೇನೆ ಇದೆಯೆಂದು ಹೇಳಿದರು. ನಾವು ಮಾತನಾಡುವಾಗ ಇಲ್ಲಿ ಸ್ವಲ್ಪ ಜವಾಬುದಾರಿಯುತವಾಗಿ ಮಾತನಾಡಬೇಕು. ಹಿಂದೆ ಇಲ್ಲಿ ''ಶಿವಸೇನೆ'' ಬಗ್ಗೆ ಮಾತನಾಡುವಾಗ ಕೂಡ ಕೆಲವರು ನಮ್ಮ ಕಡೆಗೆ ಹೇಳುತ್ತಾ ಶಿವಸೇನೆಯಂತೆ ''ಶೆಟ್ಟಿ ಸೇನೆ'' ಕೂಡ ಆಗಿದೆ ಎಂದೂ ಹೇಳುವುದು ಸರಿಯಲ್ಲ. ಇಂತಹ ಒಂದು ವಾತಾವರಣ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಲ್ಲ. ಆದುದರಿಂದ ಇಬ್ಬರು ಮಾನ್ಯ ಸದಸ್ಯರೂ ಕೂಡ ಈ ಪ್ರಕರಣವನ್ನು ಇಲ್ಲಿಗೇ ಮುಕ್ತಾಯಗೊಳಿಸಿ ಇಲ್ಲಿ ಜಾತಿಯ ರೋಗವನ್ನು ಬೆಳೆಸುವುದು ಬೇಡ. ಜಾತ್ಯಾತೀತವಾದ ನಮ್ಮ ರಾಷ್ಟ್ರದಲ್ಲಿ ಇಂತಹ ವಾದವನ್ನು ಬೆಳೆಸುವುದು ಒಳ್ಳೆಯದಲ್ಲ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಉಪಾಧ್ಯಕ್ಷರು :—ಇದು ಪಾಯಿಂಟ್ ಆಫ್ ಆರ್ಡರಾಗುವುದಿಲ್ಲ.

ಶ್ರೀಮತಿ ಕೆ. ಲೀಲಾವತಿ ರೈ.—ಬಡ್ಜೆಟ್ಟಿನ ಮೇಲೆ ಮಾತನಾಡುವಾಗ ಸ್ಕೂಲುಗಳಲ್ಲಿ ಹುಡುಗರು ಗಲಾಟೆ ಮಾಡಿದ್ದನ್ನು ದೊಡ್ಡದ್ದುಮಾಡಿ. ಆದರೆ ಇಲ್ಲಿ ಇಂತಹ ಒಂದು ವಿಷ ಬೀಜವನ್ನು ಈ ಮಾನ್ಯ ಸದಸ್ಯರು ಹೇಳಿ ಮಾತಾಡುತ್ತಿರುವುದು ನಮ್ಮ ದೌರ್ಭಾಗ್ಯ. ಇಂತಹ ಜಾತೀಯ ವಾದ ನಮ್ಮ ಸರಕಾರದಲ್ಲಿ ಇಲ್ಲ ಎಂದು ಇಲ್ಲಿ ಮಾನ್ಯ ಮೆಂಬರ್‌ಗೆ ಹೇಳಬಯಸುತ್ತೇನೆ.

Sri M. NAGAPPA.—I rise to a point of order under rule 311 read with 292, under which a member is prohibited from making irrelevant observations and indulging in repetitions. The Hon'ble Member is persisting in irrelevances and repetitions on the floor of the House, and it is nothing but highly personal in character. She is not speaking on the Budget. I submit that the Hon. Speaker will give a ruling under 292 that she may discontinue her speech.

Mr. DEPUTY SPEAKER.—I have already directed her to discontinue that trend and speak on the Budget.

---

* * * * Expunged as ordered by the Chair.

* * * * Matter not recorded as ordered by the Chair.

Sri K. PUTTASWAMY (Minister for Law, Labour and Parliamentary Affairs).—Sir, it is surprising that the Hon'ble Member Sri M. Nagappa has raised this point of order. When the discussion on the Budget is opened, the scope of debate is very wide and a Member is entitled on the entire gamut of administration. If there is any SENA by whatever name it is called, it would come under maintenance of law and order in the State. Therefore, I feel that the Hon'ble Member is entitled to make a reference to that in her speech.

Sri S. SIVAPPA.— Sir, the Hon'ble Minister seems to be questioning the ruling of the Chair. I want to know whether he is questioning the ruling or whether he is making a suggestion. My feeling is, let her make reference to any SENA, but referring to caste and community is not advisable and it is not fair. To go on repeating the same thing which is done by the learned Member Smt. Rai is not befitting the dignity of this House.

Sri K. PUTTASWAMY.—I have made a suggestion.

Smt. K. LEELAVATHI RAI.—I thank the Hon. Leader of the Opposition for having said that. I am sorry that the Hon'ble Member Smt. Fernandes should not have raised it. Anyway, I will now continue my speceh on the Budget, Sir.

ಈಗ ಈ ಮಾನ್ಯ ಸಭೆಯಲ್ಲಿ ಮಂಡಿಸಿದಂಥ ಬಡ್ಜೆಟ ಬಗ್ಗೆ ಕೆಲವೊಂದು ವಿಷಯಗಳನ್ನು ಸೂಚಿಸಬಯಸುತ್ತೇನೆ. ಏನೆಂದರೆ ಈ ಸಾರಿ ಬಡ್ಜೆಟ್‌ನಲ್ಲಿ ನೀರಾವರಿಗೆ ತುಂಬಾ ಹಣವನ್ನು ಇಟ್ಟಿದ್ದಾರೆ, ಬಹಳ ಸಂತೋಷ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಅಗತ್ಯ ವಾದುದರಿಂದ ಆ ಒಂದು ಕೆಲಸವನ್ನು ಹೆಚ್ಚು ಹೆಚ್ಚಾಗಿ ತೆಗೆದುಕೊಳ್ಳಬೇಕು. ಏಕೆಂದರೆ ಅಲ್ಲಿ ನೆತ್ರಾವತಿ ಹೊಳೆ ಅಲ್ಲಿ ಹರಿಯುವುದರಿಂದ ಆ ನೀರನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನುಕೂಲ ವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ. ಇನ್ನು ರೈತರಿಗೆ ಅನುಕೂಲ ವಾಗುವುದಕ್ಕೆ ಫರ್ಟಿಲೈಸರ್ಸ್ ಫ್ಯಾಕ್ಟರಿ ನಮ್ಮ ಮಂಗಳೂರಿಗೆ ಬಂದಿದೆ. ನೇತ್ರಾವತಿ ನೀರಿನ ಸೌಲಭ್ಯ ನಮ್ಮ ಕಡೆಯ ರೈತರಿಗೆ ಸಿಕ್ಕುವುದರಿಂದ ಪಂಪುಸೆಟ್ಟುಗಳಿಗೆ ಒಪ್ಪಿಗೆ ಕೊಡಬೇಕು. ಇದರ ಬಗ್ಗೆ ಸರ್ಕಾರ ಒಂದು ಸರ್ಕ್ಯುಲರ್ ಕೂಡ ಹೊರಡಿಸಿದೆ. ಇದನ್ನು ಅಡ್ವಾನ್ಸ್ ಆಗಿ ಕೊಡಲು ಒಪ್ಪಿಕೊಂಡಿದ್ದಾರೆ. ಸರ್ಕಾರ ಇದನ್ನು ಪರಿಶೀಲಿಸಿ ಅವರಿಗೆ ಬೇಗ ಸಿಕ್ಕುವಂತೆ ಮಾಡ ಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ನಮ್ಮ ಪ್ರದೇಶ ಹೆಚ್ಚು ಎತ್ತು ತಗ್ಗು ಪ್ರದೇಶವಾಗಿರುವುದರಿಂದ ಅಲ್ಲಿಗೆ ಹೆಚ್ಚು ಹಣವನ್ನು ಲಿಫ್ಟ್ ಇರ್ರಿಗೇಷನ್ ಕೆಲಸಕ್ಕೆ ಇಡಬೇಕು ಮತ್ತು ಲಿಫ್ಟ್ ಇರ್ರಿಗೇಷನ್ ಸ್ಯಾಂಕ್ಷನ್ ಮಾಡಿ ಆ ಕೆಲಸವನ್ನು ತೆಗೆದುಕೊಳ್ಳಬೇಕು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ವಿಜ್ಞಾಪಿಸಿಕೊಳ್ಳುತ್ತೇನೆ.

ಗ್ರಾಮಾಂತರ ಮಾರ್ಗಗಳಲ್ಲಿ ಒಂದು ಮಾರ್ಗವನ್ನೂ ತೆಗೆದುಕೊಳ್ಳುವ ಯೋಚನೆ ಇಲ್ಲ ಎಂದು ಹೇಳಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಮಾರ್ಗಗಳು ಇನ್ನು ಒಂದೆರಡು ವರ್ಷ ಹೋದರೆ ಆ ಮಾರ್ಗಗಳ ಚಿಹ್ನೆಯೂ ಹೋಗುತ್ತದೆ. ಆದರಿಂದ ಮತ್ತಷ್ಟು ಹಣ ಖರ್ಚಾಗುತ್ತದೆ. ಏನಾದರೂ ಲಂಪ್‌ಸಂ ಗ್ರಾಂಟ್‌ನಲ್ಲಿ ಗ್ರಾಮಾಂತರ ರಸ್ತೆಗಳನ್ನು ಪಕ್ಕ ರಸ್ತೆಗಳನ್ನಾಗಿ ಮಾಡಿ ಜನತೆಗೆ ಆಹಾರ ಸಾಮಗ್ರಿಗಳನ್ನು ಸಾಗಿಸುವುದಕ್ಕೆ ಅನುಕೂಲತೆಯನ್ನು ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಷೆಡ್ಯೂಲ್ಡ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ನವರ ವಿಷಯ ಹೇಳಬೇಕಾಗಿದ್ದರೆ ಹೌಸಿಂಗ್ ಸೊಸೈಟಿ ಎಂದು ಕೊಟ್ಟಿರುವುದರಲ್ಲಿ ತುಂಬ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಮೂರು ಸಾವಿರ ರೂಪಾಯಿವರೆಗೂ ಸಾಲ ಕೊಡುತ್ತಾರೆ. 200 ರೂಪಾಯಿಗಳನ್ನು ಮರಕ್ಕೆ ಕೊಡಲಾಗು ತ್ತಿದೆ. ಮರವನ್ನು ಎಲ್ಲಿಂದಲೋ ತೆಗೆದುಕೊಂಡು ಬರಬೇಕು. ಅದಕ್ಕೆ ಅವರಿಗೆ ಬಹಳ ಖರ್ಚು ತಗಲುತ್ತದೆ. ಆದ್ದರಿಂದ 200 ರೂಪಾಯಿ ಮರವನ್ನು ಆಯಾ ತಾಲ್ಲೂಕಿನಲ್ಲಿರುವ ಅಥವಾ ಹತ್ತಿರ ದಲ್ಲಿರುವ ಮರ ಕುಯ್ಯುವ ಡಿಪೋಗಳಲ್ಲಿ ಅವರಿಗೆ ಕೊಡುವಂತೆ ಮಾಡಬೇಕೆಂದು ವಿನಂತಿ ಮಾಡಿ ಕೊಳ್ಳುತ್ತೇನೆ.

ಶಾಲೆಗಳಿಗೆ ರೆಕಗ್ನಿಷನ್ ಕೊಡುವುದು ಸರಿಯಲ್ಲ ಎಂದು ಮೊನ್ನೆ ಯಾರೋ ಈ ಸಭೆಯಲ್ಲಿ ಹೇಳಿದರು. ಯಾವ ತಾಲ್ಲೂಕು ಬೋರ್ಡಿಗೆ ಅದನ್ನು ನಡೆಸಲಿಕ್ಕೆ ಸಾಧ್ಯವಿದೆಯೋ ಅಲ್ಲಿ ಅವರು ಮಾಡಬೇಕು. ಮಲೆನಾಡು ಪ್ರಾಂತದಲ್ಲಿ ಅಲ್ಲಲ್ಲಿ ಹೈಸ್ಕೂಲುಗಳು ಬೇಕು ಎಂದರೆ ಅದಕ್ಕೆ ತಾಲ್ಲೂಕು ಬೋರ್ಡಿನವರು ಒಪ್ಪಿಗೆ ಕೊಡಬಹುದು. ಈ ಶಾಲೆಗಳಿಗೆ ಅಗುವ ವೆಚ್ಚದಲ್ಲಿ ಅರ್ಧ ಭಾಗವನ್ನು ಸರ್ಕಾರದವರು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ತಾಲ್ಲೂಕು ಬೋರ್ಡ್‌ಗಳಿಗೆ ಪೂರ್ತಿ ರೆವಿನ್ಯೂ ಹಣವನ್ನು ಕೊಡಲು ಸರ್ಕಾರ ನಿರ್ಧರಿಸಿದೆ. ಅದನ್ನು 1968ನೇ ಇಸವಿಯಿಂದಲೇ ತಾಲ್ಲೂಕು ಬೋರ್ಡ್‌ಗಳಿಗೆ ಕೊಡಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಆರೋಗ್ಯ ಇಲಾಖೆಯ ವಿಚಾರವಾಗಿ ಹೇಳುವುದಾದರೆ ಮೈಸೂರಿನಲ್ಲಿ ಪಾಸ್ ಮಾಡಿ ಕರ್ಣಾಟಕ ವಿಶ್ವವಿದ್ಯಾಲಯದಲ್ಲಿ ಹೌಸ್ ಸರ್ಜನ್ ಆಗಿ ಸೇರಿದರೆ ಸ್ಟೈಪೆಂಡ್ ಕೊಡುತ್ತಾರೆ, ಮೈಸೂರಿನಲ್ಲಿ ಪಾಸ್ ಮಾಡಿ ಮಂಗಳೂರಿನಲ್ಲಿ ಹೌಸ್ ಸರ್ಜನ್ ಆಗಿ ಕೆಲಸ ಮಾಡಿದರೆ ಅವರಿಗೆ ಸ್ಟೈಪೆಂಡ್ ಕೊಡುವುದಿಲ್ಲ. ಈ ತಾರತಮ್ಯ ಹೋಗಬೇಕು ಎಂದು ವಿನಂತಿ ಮಾಡಿಕೊಂಡು ಮಾತನಾಡಲು ಅವಕಾಶ ಕೊಟ್ಟದ್ದಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಪಾಟೀಲ್.—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥ ಸಚಿವರು ಮಂಡಿಸಿರುವ ಈ ಆಯವ್ಯಯ ಪಟ್ಟಿಯನ್ನು ವಿರೋಧಿಸುತ್ತ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಸಚಿವರು ಒಳ್ಳೆಯ ಸಮರ್ಥ ಆಡಳಿತಗಾರರಿರುವುದರಿಂದ ವಸ್ತುಸ್ಥಿತಿಯನ್ನು ಇದ್ದಕ್ಕಿದ್ದ ಸ್ವರೂಪದಲ್ಲಿ ಜನತೆಯ ಎದುರಿಗೆ, ಈ ಸಭೆಯ ಎದುರಿಗೆ ಇಡಲಾರದೆ ತೂತು ಬಿದ್ದ ಹಡಗನ್ನು ಸಹ ಒಳ್ಳೆಯ ಪ್ರತಿಭಾನ್ವಿತವಾಗಿ ನಡೆಸತಕ್ಕ ರೀತಿಯಲ್ಲಿ ಬುದ್ಧಿವಂತಿಕೆ ಮಾಡಿ ಈ ಬಜೆಟ್ಟನ್ನು ಮಂಡಿಸಿದ್ದಾರೆ. ಬಜೆಟ್ಟಿನಲ್ಲಿ ಅಲ್ಲಲ್ಲಿ ಉಳಿತಾಯವನ್ನು ತೋರಿಸಿರುವುದರ ಕಾರಣವನ್ನು ನೋಡಿದರೆ, ಅವರ ಭಾಷಣದ ವೈಖರಿ ಮತ್ತು ಬಜೆಟ್ಟನ್ನು ನೋಡಿದರೆ ಹೋದ ಸಲ ಬಜೆಟ್ಟಿನಲ್ಲಿ ಒದಗಿಸಿದ್ದ ಹಣವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಖರ್ಚು ಮಾಡಲಾರದೆ ಉಳಿಸಿಕೊಂಡು ಆ ಉಳಿದ ಹಣವನ್ನು ಉಳಿತಾಯದ ಬಜೆಟ್ ಎನ್ನುವ ರೀತಿಯಲ್ಲಿ ತೋರಿಸುವ ಮುತ್ಸದ್ದಿತನವನ್ನು ಬಿಟ್ಟರೆ ಈ ಬಜೆಟ್ ದೇಶಕ್ಕೆ ಹೊಸ ಕಲ್ಯಾಣ ತರಲಿಲ್ಲ, ಹೊಸ ರೂಪರೇಷೆಗಳು ಇದರಲ್ಲಿಲ್ಲ, ಜನತೆಗೆ ಸಮರ್ಪಕವಾದ ರೀತಿಯಲ್ಲಿ ಇದನ್ನು ತರಲಿಲ್ಲ ಎನ್ನುವ ಮಾತನ್ನು ಬಹಳ ವ್ಯಸನದಿಂದ ಹೇಳಬೇಕಾಗಿದೆ. ಒಕ್ಕಲುತನ ಬಹಳ ಪ್ರಾಧಾನ್ಯವಾಗಿ ನೋಡಬೇಕಾದಂಥ ನಾಡಿನಲ್ಲಿ ಒಕ್ಕಲುತನಕ್ಕಾಗಿ ಹೇರಳವಾದ ಹಣವನ್ನು ವ್ಯಯ ಮಾಡುತ್ತಿದ್ದೇವೆಂದು ಸರ್ಕಾರ ಹೇಳಿಕೊಳ್ಳುತ್ತಿದೆ. ಅನೇಕ ಯೋಜನೆಗಳನ್ನು ಒಕ್ಕಲಿಗರ ಕಲ್ಯಾಣಕ್ಕಾಗಿ ಮಾಡುತ್ತೇವೆಂದು ಹೇಳುತ್ತಿದೆ. ನಿಜ. ಒಕ್ಕಲುತನದ ಆಡಳಿತಗಾರರಲ್ಲಿ ತಜ್ಞರು ಮೈಸೂರು ದೇಶದಲ್ಲಿದ್ದಷ್ಟು ಉಳಿದ ಕಡೆ ಇರಲಾರರು. ಆಡಳಿತಗಾರರಲ್ಲಿ ಇರತಕ್ಕ ಕರ್ತೃತ್ವ ಶಕ್ತಿ ಮೈಸೂರು ದೇಶದಲ್ಲಿ ಹೆಚ್ಚಾಗಿದೆ ಎನ್ನುವ ಮಾತನ್ನು ಕೇಂದ್ರದವರೂ ಒಪ್ಪಿಕೊಳ್ಳುತ್ತಾರೆ. ಆದರೆ ಒಕ್ಕಲುತನದ ಇಲಾಖೆಯ ಡೈರೆಕ್ಟರವರ ರೀತಿನೀತಿಗಳನ್ನು ನೋಡಿದರೆ ನಿಜವಾಗಿಯೂ ನಮ್ಮ ಒಕ್ಕಲುತನ ಯಾವ ಮಟ್ಟಕ್ಕೆ ಬಂದಿದೆ ಎಂದು ನಾವು ಈವೊತ್ತಿನ ದಿವಸ ವಿವೇಚನೆ ಮಾಡಬೇಕಾಗಿದೆ. ಸ್ವಾಮಿ, ವಕ್ಕಲತನಕ್ಕೆ ಗೊಬ್ಬರ ಕೊಡುತ್ತೇವೆ, ರೈತರಿಗೆ ಸಾಲದ ರೂಪದಲ್ಲಿ ಹಣ ಕೊಡುತ್ತೇವೆ ಎಂದು ಹೇಳುತ್ತಾರೆ, ಕೆಲವು ಸಂಸ್ಥೆಗಳಿಗೆ ಗೊಬ್ಬರ ಕೊಟ್ಟು ಅವುಗಳ ಮೂಲಕ ಹಂಚುತ್ತೇವೆ ಎಂದು ಹೇಳುತ್ತಾರೆ. ಆದರೆ ಅದು ಸರಿಯಾಗಿ ಹಂಚಿಕೆಯಾಗುತ್ತಿಲ್ಲ, ಯಾವ ಭೂಮಿಗೆ ಯಾವ ಗೊಬ್ಬರ ಎಷ್ಟು ಹಾಕಬೇಕು ಎಂಬ ವಿಚಾರದಲ್ಲಿ ಸಂಶೋಧನೆ ಮಾಡಿ ತಿಳಿಸಿಲ್ಲ. ಹೋದ ಸಲ ಬಜೆಟ್ ಭಾಷಣದಲ್ಲಿ ಸಂಶೋಧನೆ ನಡೆಸುವುದಾಗಿ ಹೇಳಿದ್ದರು. ಆದರೆ ದುರ್ದೈವದಿಂದ ಇನ್ನೂ ವರೆಗೆ ಆ ರೀತಿ ಮಾಡಿಲ್ಲ, ಅದಕ್ಕೆ ಬೇಕಾದ ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿ ಮಾಡಿಲ್ಲ. ರೈತರಿಗೆ ಚೆನ್ನಾಗಿ ಬೆಳೆಯಬೇಕೆಂಬ ಉತ್ಸಾಹವಿದ್ದರೂ ಕೂಡ ಅವರಿಗೆ ಭರವಸೆ ಕೊಟ್ಟಿರುವ ರೀತಿಯಲ್ಲಿ ಯಾವ ಜಮೀನಿಗೆ ಯಾವ ಗೊಬ್ಬರವನ್ನು ಎಷ್ಟು ಹಾಕಬೇಕೆಂಬುದನ್ನು ಸಂಶೋಧನೆ ನಡೆಸಿ ಅವರಿಗೆ ಅನುಕೂಲವಾಗುವಂತೆ ತಿಳಿಸಿರುವುದಿಲ್ಲ. ಇದರಿಂದ ಗೊಬ್ಬರ ಹಾಕಿದರೂ ವ್ಯರ್ಥವಾಗುತ್ತಿದೆ. ಪಂಪು ಸೆಟ್ಟುಗಳಿಗೆ ಹಣ ಕೊಡುತ್ತೇವೆ, ಅಭಿವೃದ್ಧಿ ಬ್ಯಾಂಕುಗಳ ಮೂಲಕ ಕೊಡುತ್ತೇವೆ ಎಂದು ಹೇಳುವಾಗ ಇಂದು ಗೋವ, ಮಹಾರಾಷ್ಟ್ರ, ಕೇರಳ ಮುಂತಾದ ದೇಶಗಳಿಗೆ ವಿದ್ಯುತ್ತನ್ನು ಒದಗಿಸುತ್ತಿದ್ದಾರೆ, ಅದು ಸರಿಯಲ್ಲ. ನಮ್ಮಲ್ಲಿರುವ ಪಂಪುಗಳಿಗೇ ಕೊಡಲು ಸಾಧ್ಯವಾಗದ ಪರಿಸ್ಥಿತಿ ಬರುವ ಸಂದರ್ಭವಿದೆ. ಶರಾವತಿಯ ಯೋಜನೆಯಲ್ಲೇನೋ ವಿದ್ಯುತ್ ಬಹಳವಾಗಿ ಉತ್ಪತ್ತಿಯಾಗುತ್ತಿದೆ. ಆದರೆ ಅಲ್ಲಿ ಪಡೆದ ವಿದ್ಯುತ್ತನ್ನು ವಿತರಣೆ ಮಾಡುವುದಕ್ಕೆ ಹಣವಿಲ್ಲ. ಹಣ ಸಂಪಾದನೆ ಮಾಡಲು ನಮ್ಮಲ್ಲಿರುವ ವಿದ್ಯುತ್ತನ್ನು ಇತರರಿಗೆ ಕೊಡುವುದು ಬುದ್ಧಿವಂತಿಕೆಯಲ್ಲ,

(ಶ್ರೀ ಕೆ. ಎಚ್. ಪಾಟೀಲ್)

ಅದರಿಂದ ಖರ್ಚು ಬರುತ್ತದೆ, ಮುಂದಿನ ವರ್ಷ ಹೆಚ್ಚು ವಿದ್ಯುತ್ ಉತ್ಪತ್ತಿಯಾಗುತ್ತದೆ ಎಂದು ಈಗ ಹೊರಗಿನವರಿಗೆ ಕೊಡುವುದು ಸರಿಯಲ್ಲ. ಇಂದು ಪಂಪುಸೆಟ್ಟುಗಳನ್ನು ಕೊಡುತ್ತೇವೆಂದು ಹೇಳುವುದು ಕನ್ನಡಿಯ ಗಂಟಾಗಿದೆ. ವಕ್ಕಲತನಕ್ಕೆ ಪಂಪುಸೆಟ್ಟು ಕೊಡದಿದ್ದರೆ, ಟ್ರಾಕ್ಟರುಗಳು, ಸಹಾಯಧನ ಮುಂತಾದ್ದನ್ನು ಕೊಟ್ಟರೂ ಕೂಡ ಉಪಯೋಗವಾಗುವುದಿಲ್ಲ. ಇದನ್ನು ಗಮನಿಸ ಬೇಕು. ಇಂದು ರಾಜ್ಯದಲ್ಲಿ ಹೇರಳವಾಗಿ ಗೊಬ್ಬರ ಇದ್ದರೂ ಅದು ಖರ್ಚಾಗಿಲ್ಲ. ಅಂಕಿಅಂಶ ನೋಡಿದರೆ ಇಂಡಸ್ಟ್ರಿಯಲ್ ಇಲಾಖೆಯಲ್ಲಿ ಬಹಳ ಗೊಬ್ಬರ ಉಳಿಯುತ್ತಿದೆ. ಇದರ ಹಿನ್ನೆಲೆಯೇನು ! ಅನೇಕರು ಸಾಕಷ್ಟು ಗೊಬ್ಬರ ಹಾಕುತ್ತಿಲ್ಲ, ಸೇಕಡ 4-5 ಜನರು ಗೊಬ್ಬರ ಹಾಕುತ್ತಿದ್ದಾರೆ, ಸೇಕಡ 90 ಮಂದಿಗೆ ಗೊಬ್ಬರವಿಲ್ಲದೆ ಹಾಗೇ ವ್ಯವಸಾಯ ಮಾಡುತ್ತಿದ್ದಾರೆ, ಅವರಿಗೆ ಕೊಳ್ಳಲು ಹಣವಿಲ್ಲ. ಅವರಿಗೆ ಸಹಕಾರ ಸಂಘಗಳ ಮೂಲಕ ರೊಕ್ಕ ಕೊಡುತ್ತೇವೆ ಎಂದು ಹೇಳುತ್ತಾರೆ. ಆದರೆ ಸಹಕಾರ ಸಂಘಗಳಲ್ಲಿ ಸದ್ವಿನಿಯೋಗವಾಗುತ್ತಿಲ್ಲ. ಇದನ್ನು ಸಹಕಾರ ಇಲಾಖೆ ಇಲಾಖೆಯ ವಿಚಾರ ಮಾತನಾಡುವಾಗ ಮತ್ತು ಇತರ ಸಂದರ್ಭಗಳಲ್ಲಿ ಹೇಳುತ್ತೇನೆ. ಮತ್ತು ಪೆಸ್ಟಿಸೈಡ್ಸ್ ಉಪಯೋಗ ಸರಿಯಾಗಿ ಆಗುತ್ತಿಲ್ಲ, ಸರಿಯಾಗಿ ದೊರೆಯುವುದಿಲ್ಲ, ದೊರೆಯುವಾಗ ರೊಕ್ಕವಿರುವುದಿಲ್ಲ. ಬೇಕಾದಾಗ ಕೊಡದೆ ಸ್ವೇಚ್ಛೆಯಿಂದ ಕೆಲಸಮಾಡುತ್ತಿದ್ದಾರೆ, ಜವಾಬ್ದಾರಿಯುತರಾಗಿ ಕೆಲಸಮಾಡಬೇಕೆಂದು ಒತ್ತಾಯ ಮಾಡಿದ್ದರೂ ಪ್ರಯೋಜನವಾಗಿಲ್ಲ. ಇಂದು ಏರ್ ಸ್ಪ್ರೇ ಮಾಡುತ್ತಾರೆ, ಅದಕ್ಕೆ ಬೇಕಾದ ಸ್ಪ್ರೇಯರ್ಸ್ ಮುಂತಾದ್ದನ್ನು ಹಂಚುವಾಗ ಸರಿಯಾಗಿ ಹಂಚುತ್ತಿಲ್ಲ; ಕೇಂದ್ರ ಸರಕಾರದಿಂದ ಈ ಸಂಬಂಧವಾಗಿ ಹೇರಳವಾಗಿ ಹಣ ದೊರೆಯುತ್ತದೆ, ಸಿಬ್ಬಂದಿ ನೇಮಕ ಮಾಡಿ ಎಂದು ಹೋದ ಸಲ ಹೇಳಿದರೂ ಗಮನಕೊಡಲಿಲ್ಲ. ಹಾಗೆ ಮಾಡಿದ್ದರೆ ಪ್ಲೇನ್‌ನಲ್ಲಿ ಏರ್ ಸ್ಪ್ರೇ ಮಾಡುವುದಕ್ಕೆ ಅವಕಾಶ ದೊರೆಯುತ್ತಿತ್ತು. ದುರ್ದೈವದಿಂದ ಅವಕ್ಕೆ ತಕ್ಕ ಯೋಜನೆ ಮಾಡಲಿಲ್ಲ. ಆದ್ದರಿಂದ ಕೇಂದ್ರ ಸರಕಾರದಿಂದ ನಮ್ಮ ಜನರಿಗೆ ಮುಟ್ಟಬೇಕಾದ ಲಾಭ ಮುಟ್ಟಲು ಸಾಧ್ಯವಾಗಲಿಲ್ಲ, ಕೇಂದ್ರ ಸರಕಾರ ನಮಗೆ ಆ ವಿಚಾರದಲ್ಲಿ ಸಹಾಯಮಾಡುವುದನ್ನು ಸಂಪೂರ್ಣವಾಗಿ ಕೈಬಿಡಬೇಕಾಯಿತು. ಈ ರೀತಿ ಸರಕಾರ ತಪ್ಪುಮಾಡುತ್ತಿದೆ. ಒಟ್ಟಿನಲ್ಲಿ ಈ ದಿವಸ ವಕ್ಕಲತನದ ವಿಚಾರಕ್ಕೆ ಸಾಕಷ್ಟು ಮಹತ್ವ ಕೊಟ್ಟಿಲ್ಲ. ಈ ಖಾತೆಯಲ್ಲಿರುವ ಅಧಿಕಾರಿಗಳು ವಕ್ಕಲತನದವರೊಂದಿಗೆ ಸಾಕಷ್ಟು ಸಂಪರ್ಕ ಬೆಳೆಸಿಲ್ಲ. ಟಿ.ಡಿ. ಬೋರ್ಡ್ ಈ ವಿಚಾರದಲ್ಲಿ ಸರಿಯಾದ ಗಮನ ಕೊಡದೆ ಕೇವಲ ಚುನಾವಣೆ ಬಗ್ಗೆ ಕಾಂಗ್ರೆಸ್ ಉಮೇದುವಾರರು ಗೆಲ್ಲಲು ಅದಕ್ಕೆ ಬೇಕಾದ ಕಾರ್ಯಗಳಿಗೆ ಗಮನ ಕೊಟ್ಟಿದೆ. ಇದರಿಂದ ವಕ್ಕಲತನಕ್ಕೆ ಸೌಕರ್ಯ ದೊರೆತಿಲ್ಲ.

ಇನ್ನು ಔದ್ಯೋಗೀಕರಣದ ಬಗ್ಗೆ ಮಾತನಾಡುವುದಾದರೆ ಇಲ್ಲಿಗೆ ಬರುವಾಗ ರೈಲುಗಾಡಿಯಲ್ಲಿ ನಮ್ಮ ಪಾರ್ಲಿಮೆಂಟರಿ ಸದಸ್ಯರೊಬ್ಬರು ಹೇಳುತ್ತಾ ಇದ್ದರು.

ಶ್ರೀಮತಿ ಕೆ. ಲೀಲಾವತಿ ರೈ.—ಮಾನ್ಯ ಪಾಟೀಲ್‌ರವರು ಫರ್ಟಿಲೈಸರ್ಸ್ ಡಿಸ್ಟ್ರಿಬ್ಯೂಟ್ ಮಾಡದೇ ತಾಲ್ಲೂಕು ಬೋರ್ಡಿನ ಎಲೆಕ್ಷನ್ ಕ್ಯಾಂಪೈನ್ ಮಾಡುತ್ತಾ ಇದ್ದರು ಎಂದು ಅಪಾದನೆಯನ್ನು ಮಾಡುತ್ತಾ ಇದ್ದರು, ಇದು ಸತ್ಯಕ್ಕೆ ದೂರವಾದ ಮಾತು, ನ್ಯಾಯವಾದುದಲ್ಲ. ನಾನು ತಾಲ್ಲೂಕು ಬೋರ್ಡ್ ಅಧ್ಯಕ್ಷೆಯಾಗಿ ಎಂಟು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ನಮ್ಮ ಊರಿನಲ್ಲಿ ಇಂಥಾದ್ದು ನಡೆದದ್ದು ಇಲ್ಲ, ಸರಿಯಾದ ರೀತಿಯಲ್ಲಿ ಅದು ಜನತೆಗೆ ಮುಟ್ಟಿದೆ. ಜನತೆಯ ಕ್ಷೇಮ ಸಮಾಚಾರ ತಿಳಿದುಕೊಂಡು ಅವರು ಕೆಲಸ ಮಾಡುತ್ತಾ ಇದ್ದಾರೆ. ಆದ್ದರಿಂದ ಅವರು ಆ ರೀತಿ ಹೇಳಬಾರದು ಎಂದು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನಮ್ಮ ಸಹೋದರರು ಈ ಮಾತು ಹೇಳಿದ್ದರೆ ಒಳ್ಳೆಯ ರೀತಿಯಿಂದ ಉತ್ತರ ಕೊಡಬಹುದಾಗಿತ್ತು. ಆದ್ದರಿಂದ ನಮ್ಮ ಸಹೋದರಿಯರಲ್ಲಿ ಬಹಳ ನಮ್ರವಾಗಿ, ವಿನಯಪೂರ್ವಕವಾಗಿ ಹೇಳುತ್ತೇನೆ. ಇದು ಅವರ ಅನುಭವ ಇದ್ದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

ಇನ್ನು ಔದ್ಯೋಗೀಕರಣದ ಬಗ್ಗೆ ಹೇಳುವುದಾದರೆ ನಾನು ಬರುತ್ತಾ ಇದ್ದಾಗ ನನ್ನ ಗಾಡಿಯಲ್ಲಿದ್ದ ಒಬ್ಬ ಪಾರ್ಲಿಮೆಂಟರಿ ಸದಸ್ಯರು ಹೇಳುತ್ತಾ ಇದ್ದರು ಮೈಸೂರು ರಾಜ್ಯದಲ್ಲಿ ಕೇಂದ್ರದಿಂದ, ರಾಜ್ಯದಿಂದ ಮತ್ತು ವೈಯಕ್ತಿಕವಾಗಿ ಬಂಡವಾಳಗಾರರಿಂದ ಹಾಕತಕ್ಕ ಮೊತ್ತ ಕೇವಲ 63 ಲಕ್ಷ ರೂಪಾಯಿಗಳು ಮಾತ್ರ ಎಂದು. ಸುತ್ತುಮುತ್ತಲಿನ ಹೈದ್ರಾಬಾದು ಮತ್ತು ಇತರ ಪ್ರದೇಶಗಳಲ್ಲಿ 95 ಕೋಟಿ ರೂಪಾಯಿಗಳು ಅಷ್ಟೇ ಅಲ್ಲ 113 ಕೋಟಿ ರೂಪಾಯಿಗಳಿಗಿಂತಲೂ ಮೀರಿದೆ. ಇಷ್ಟು ಮಾತ್ರ ನಿಜ. ಇಂಡಸ್ಟ್ರಿಯಲೈಸೇಷನನಲ್ಲಿ ಮೈಸೂರು ಬಹಳವಾಗಿ ಮುಂದುವರಿದಿದೆ ಎಂದರೂ ಕೂಡ, ಮೈಸೂರು ಮಹಾರಾಜರ ಕಾಲದಲ್ಲಿ ಅಲ್ಲೊಂದು ಇಲ್ಲೊಂದು ಕಾರ್ಖಾನೆ ಆದದ್ದನ್ನು ಬಂದು ಮಾಡುವುದರಲ್ಲಿ ಇವತ್ತು ಸರ್ಕಾರದವರು ಮುತುವರ್ಜಿಯನ್ನು

ಹೊಂದಿ ಕೀರ್ತಿ ಪಡೆದಿದ್ದಾರೆಯೇ ಹೊರತು ಹೊಸದಾಗಿ ಪ್ರಾರಂಭ ಮಾಡುವಂತಹ ಕಾರ್ಯದಲ್ಲಿ ಕೀರ್ತಿಯನ್ನು ಪಡೆದಿಲ್ಲ. ಫೌಂಡೇಷನ್ ಹಾಕುವುದಕ್ಕಾಗಿ ಉದ್ಘಾಟನೆ ಮಾಡಿದ್ದು ನಿಜ. ಯಾತರ ಸಲುವಾಗಿ ಬಂದು ಮಾಡುವುದರ ಸಲುವಾಗಿ. ಇವತ್ತಿನ ದಿವಸ ಧಾರವಾಡ ಹುಬ್ಬಳ್ಳಿ ನಡುವೆ ಡೈರಿ ಫಾರಂ ಉದ್ಘಾಟನೆ ಮಾಡಿ 5-6 ತಿಂಗಳಾಯಿತು. ಯಾತರ ಸಲುವಾಗಿ? ಮಂತ್ರಿಗಳಿಗೆ ಏನಾದರೂ ಒಂದು ಕಾರ್ಯಕ್ರಮ ಕೊಡಬೇಕೆನ್ನುವುದರ ಸಲುವಾಗಿ. ಇದನ್ನೆಲ್ಲಾ ಮಾಡುತ್ತಾರೆ. ಅದೇ ಪ್ರಕಾರ ಟ್ರಾವಲರ್ಸ್ ಬಂಗಲೋ ಕಟ್ಟಬೇಕು ಅಂತ ಹೇಳಿ ಒಂದು ಕಲ್ಲು ಅವರ ಕೈಯಿಂದ ಹಾಕಿಸಿರಿ, ಫೌಂಡೇಷನ್ ಸ್ಟೋನ್ ಮಾನ್ಯ ಮಂತ್ರಿಗಳಿಂದ ಹಾಕಲಾಯಿತು ಎಂದು ಹೇಳಿಕೊಳ್ಳುವ ಸಲುವಾಗಿ ಈ ರೀತಿ ಎಲ್ಲಾ ಮಾಡುತ್ತಾ ಇದ್ದಾರೆ. ಇದು ನಿಜವಾಗಿಯೂ ಸರಿಯಾದ ಮಾರ್ಗವಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಯಾವುದಾದರೂ ಕೆಲಸ ಎಲ್ಲಾ ಮುಗಿದು ಉದ್ಘಾಟನೆ ಮಾಡುವುದರಲ್ಲಿ ಹೆಚ್ಚೇನೂ ಇಲ್ಲ, ನಮ್ಮ ಕಡೆ ಟೆಕ್ನಿಕಲ್ ಸ್ಯಾಂಕ್ಷನ್, ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಯಾವುದೂ ಇಲ್ಲದೆ ಕಲ್ಲು ಬಿದ್ದಿದೆ.

ಶ್ರೀ ಕೆ. ಎಚ್. ಪಾಟೀಲ್.—ಔದ್ಯೋಗೀಕರಣಕ್ಕೆ ಬೇಕಾಗುವಂತಹ ಸೌಕರ್ಯ ನಮ್ಮ ಮೈಸೂರು ದೇಶದಲ್ಲಿ ಬೇಕಾದಷ್ಟು ಇದ್ದರೂ ಕೂಡ, ನೈಸರ್ಗಿಕ ಸಂಪತ್ತು ಯಥೇಚ್ಛವಾಗಿದ್ದರೂ ಸಹ ಅದಕ್ಕೆ ಅವಕಾಶಗಳನ್ನು ಕೊಡುತ್ತಾ ಇಲ್ಲ ಎಂಬ ಅಭಿಪ್ರಾಯ ನಮ್ಮ ಮೈಸೂರು ರಾಜ್ಯದಲ್ಲಿ ಇದೆ. ನಾನು ಯಾವ ವ್ಯಕ್ತಿಯ ಸಂಬಂಧಿ ಆಗಲಿ, ಯಾವ ಪಕ್ಷದ ಸಂಬಂಧಿ ಆಗಲಿ ಹೇಳುತ್ತಾ ಇಲ್ಲ, ಜಾತಿ ವಿಷಯ ತರಬಾರದು ಅಂತ ಅನ್ನುತ್ತೀರಿ. ನೀವು ಅನುಸರಿಸುತ್ತಾ ಇರತಕ್ಕ ವಿಧಾನದಿಂದ ಯಾರಿಗೂ ಕೂಡ ಅನುಕೂಲವಾಗುತ್ತಾ ಇಲ್ಲ, ಹೀಗಾದರೆ ನಮ್ಮ ರಾಜ್ಯದ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಯಾವ ರೀತಿ ಆಗುತ್ತದೆ? ಮೈಸೂರು ರಾಜ್ಯದಲ್ಲಿ 4-5 ಸ್ಪಿನ್ನಿಂಗ್ ಮಿಲ್‌ಗಳು ಪ್ರಾರಂಭವಾಗಿ, 3 ಮಿಲ್‌ಗಳಿಗೆ ಪ್ರಾರಂಭದಲ್ಲಿಯೇ ಅಡಚಣೆಗಳು ಬಂದವು. ಇನ್ನು ಒಂದು ಮಿಲ್ಲನ್ನು ಮುಚ್ಚದಂತೆ ಸ್ಟೇ ಆರ್ಡರ್ ತಂದಿದ್ದಾರೆ. ಈ ರೀತಿ ಕೋಟಿಗಟ್ಟಲೆ ರೂಪಾಯಿ ಹಣ ಕೊಟ್ಟು—ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೊಡಬೇಡಿ ಎಂದರೂ ಸಹ 20 ಲಕ್ಷ ರೂಪಾಯಿಗಳನ್ನು ಕೊಟ್ಟು ಇವತ್ತು ಒಂದು ಮಿಲ್ ಲಿಕ್ವಿಡೇಷನ್‌ಗೆ ಪ್ರಪೋಸಲ್ ಬರುತ್ತಾ ಇದೆ. ಅದನ್ನು ಈಗ ಸೆಷನ್ ನಡೆಯುತ್ತಾ ಇದೆ ತಡಿಯಿರಿ, ಟೀಕೆಗೆ ಗುರಿಯಾಗುತ್ತೀರಿ ಅಂತ ಹೇಳುವಂತಹ ವೈಖರಿಯನ್ನು ನೋಡಿದರೆ ನಿಜವಾಗಿಯೂ ಕೂಡ ವ್ಯಸನವಾಗುತ್ತದೆ.

3-00 P.M.

ಅಂದರೆ ಖಾಸಗೀ ಮಿಲ್ಲುಗಳು ಬಹಳ ಪ್ರಗತಿಪರವಾಗಿ ನಡೆಯುತ್ತಿವೆ. ದಾವಣಗೆರೆಯಂಥ ಒಂದು ಸಣ್ಣ ಟೌನಿನಲ್ಲಿ 4—5 ಮಿಲ್ಲುಗಳು ಬಹಳ ಲಾಭದಾಯಕ ರೀತಿಯಲ್ಲಿ ನಡೆಯುತ್ತಿವೆ ಯೆಂದಾಗ ಗದಗ್‌ನಲ್ಲಿ ಅಂಥಾ ಒಳ್ಳೆ ಹತ್ತಿ—ಗದಗ್ ಕಾಟನ್ ಅಂದರೆ ಅದು ಅತ್ಯಂತ ಮಹತ್ವವುಳ್ಳದ್ದು, ಅಂಥ ಹತ್ತಿಯನ್ನು ಮುಂಬೈನವರು ತೆಗೆದುಕೊಂಡು ಹೋಗಿ ಅದರಲ್ಲಿ ಬಟ್ಟೆಗಳನ್ನು ಮಾಡಿ ಮತ್ತೆ ನಮಗೇ ಇಲ್ಲಿಗೆ ರವಾನೆ ಮಾಡುತ್ತಿದ್ದಾರೆ. ಅಂದರೆ ಮೈಸೂರಿನವರಾದ ನಮಗೆ ಇಲ್ಲಿ ಆ ಹತ್ತಿ ಗಿರಣಿಗಳನ್ನು ನಡೆಸುವುದಕ್ಕಾಗುತ್ತಿಲ್ಲ ಎಂದರೇನು ಅರ್ಥ? ಆ ಮುಂಬೈನಲ್ಲಿರತಕ್ಕ ಸ್ಪಿನ್ನಿಂಗ್ ಮಿಲ್ಲುಗಳಿಗೇ ಒಂದು ವಿಧವಾದ ಹವಾಮಾನವಿದ್ದರೆ ಇಲ್ಲಿ ಅದಕ್ಕೆ ಬೇರೊಂದು ಹವಾಮಾನ ಬೇಕೇನು? ಇಲ್ಲಿ ಹವಾಮಾನವಿದ್ದರೂ ಜನರಲ್ಲಿ ಅಂಥ ಗುಣವಿಲ್ಲ. ಗುಣದಲ್ಲ ಬದಲಿಯಿದ್ದಾರೆ. ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ಒಂದು ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿಯ ವಿಚಾರಕ್ಕೆ ಬಂದರೆ — ಸರ್ಕಾರದವರು ಈಗ ಗೋವಾಕ್ಕೆ ಇಲ್ಲಿಂದ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಆದರೆ ನಾನು ಯಾವತ್ತೂ ರಚನಾತ್ಮಕ ಟೀಕೆಯನ್ನು ಮಾಡತಕ್ಕವನೇ ವಿನಾ ವಿರೋಧಕ್ಕಾಗಿ ಭಾಷಣ ಮಾಡತಕ್ಕವನಲ್ಲ. ಇಲ್ಲಿ ನಾನು ಮಾತನಾಡತಕ್ಕ ಕಾಲದಲ್ಲಿ ಒಂದು ನೀತಿ, ನೇಮ, ಪ್ರಾಮಾಣಿಕತೆಗಳಿಗೆ ಕಟ್ಟು ಬಿದ್ದು ಮಾತನಾಡತಕ್ಕವನು. ನಾನು ಈ ವಿದ್ಯುಚ್ಛಕ್ತಿಯ ವಿಚಾರದಲ್ಲಿ ಹೇಳತಕ್ಕದ್ದೇನೆಂದರೆ ಮೈಸೂರು ರಾಜ್ಯದಲ್ಲಿರತಕ್ಕ ಬೆಳೆಗಾರರಿಗೆ ಇದರಿಂದ ಏನೇನೂ ಅನುಕೂಲವಾಗಿಲ್ಲ. ಕೆಲವು ಕಡೆ ಖಾಸಗೀ ಜನರಿಗೆ ವಿದ್ಯುಚ್ಛಕ್ತಿಯನ್ನು ತಯಾರಿಸುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಹಾಗಿರುವಾಗ ಅದನ್ನು ಏಕೆ ಇದುವರೆಗೂ ಇನ್ನೂ ರಾಷ್ಟ್ರೀಕರಣ ಮಾಡಲಿಲ್ಲ ಎಂದು ಕೇಳುತ್ತೇನೆ? ಆ ಖಾಸಗೀ ಕಂಪೆನಿಯವರು ಅಧ್ಯಕ್ಷರ ಸಹನೆಗೂ ಮೀರಿದಂಥ ಅನ್ಯಾಯ ಅಪರಾಧಗಳನ್ನು ಮಾಡಿದ್ದರೂ ಏಕೆ

(ಶ್ರೀ ಕೆ. ಎಚ್. ಪಾಟೀಲ್)

ಅವರ ಬಗ್ಗೆ ಕ್ರಮ ಕೈಗೊಳ್ಳಲಿಲ್ಲ ? ಅದೇ ರೀತಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಿದ್ದ ಮಂದಿ ರಾಮದುರ್ಗ ಧಾರ್ವಾಡ ಇಂಥಾ ಕಡೆಗಳಲ್ಲಿದ್ದವರಿಂದ ಅದನ್ನು ತಪ್ಪಿಸಲಿಲ್ಲವೇ ? ಅದೇರೀತಿ ಸರ್ಕಾರದವರು ಈ ಒಂದು ಖಾಸಗೀ ಕಂಪೆನಿಯವರಮೇಲೂ ಆಕ್ಷನ್ ತೆಗೆದುಕೊಂಡಿದ್ದರೆ ಸುಮಾರು 20–30 ಖಟ್ಲೆಗಳನ್ನು ಇದುವರೆಗೆ ಹಾಕಬಹುದಿತ್ತು. ಅವರು ಸರಿಯಾಗಿ ಯಾವ ಲೆಕ್ಕಗಳನ್ನು ಕೂಡ ಇಟ್ಟಿಲ್ಲ. ಅವರು ಸರ್ಕಾರವವರ ಎಲ್ಲಾ ನಿಯಮಗಳನ್ನೂ ಉಲ್ಲಂಘನೆ ಮಾಡಿದ್ದಾರೆ. ಸರ್ಕಾರದವರು ಅವರ ಬಗ್ಗೆ ಏಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದರೆ ಅವರು ಸರ್ಕಾರದವರಿಗೆ ಚುನಾವಣೆಯ ಕಾಲದಲ್ಲಿ ಕೇಳಿದಷ್ಟು ಕೈ ಮುಚ್ಚಿ ಹಣವನ್ನು ಕೊಡುತ್ತಾರೆ. ಆದುದರಿಂದ ಅವರನ್ನು ಹೇಳದೆ ಕೇಳದೆ ಹಾಗೆ ಕೈ ಬಿಟ್ಟಿದ್ದಾರೆ. ಅಥವಾ ವಿರೋಧಪಕ್ಷದವರು ಈ ವಿಚಾರದಲ್ಲಿ ಎಷ್ಟು ಮಾತನಾಡುತ್ತಾರೋ ಮಾತನಾಡಲಿ, ನೋಡೋಣ ಅಂತ ಅವರ ಬಗ್ಗೆ ಕ್ರಮ ಕೈಗೊಳ್ಳದೆ ಬಿಟ್ಟಿದ್ದಾರೋ ಅದು ಗೊತ್ತಾಗುತ್ತಿಲ್ಲ. ನಮ್ಮ ಕಡೆ ಜನರು ಕಡಮೆ ಇದ್ದಾರೆ, ಇವರೇನು ಮಾತನಾಡಿದರೂ ಸರ್ಕಾರವನ್ನು ಜಗ್ಗಿಸುವುದಕ್ಕಾಗುವುದಿಲ್ಲ ಎಂಬ ಭಾವನೆ ಇವರಲ್ಲಿದ್ದರೆ ಅದು ಬಹಳ ತಪ್ಪು. ಕಾಲ ಬೇಗ ಬದಲಾವಣೆಯಾಗುತ್ತಿದೆ. ಅತ್ತಕಡೆ ತಮ್ಮ ಕಡೆ ಇರತಕ್ಕ ಜನ ನಾಳೆ ಇತ್ತಕಡೆಗೆ ಬರಬಹುದು ; ಅಂಥ ದಿನಗಳು ಬೇಗ ಬರಲಿವೆ. ಇಲ್ಲಿ ನೀವು ಆ ಗಾಂಧಿ ಭಕ್ತರೆಂದು ಹೇಳಿಕೊಂಡು ಮಾಡುತ್ತಿರುವ ಕೆಲಸಗಳನ್ನೆಲ್ಲಾ ಮೇಲೆ ಆ ಗಾಂಧೀಜಿ ಕುಳಿತು ನೋಡುತ್ತಿದ್ದಾರೆ. ಅವರು ಬಹುಶಃ ಈಗ ನೀವೆಲ್ಲರೂ ಅತನ ಹೆಸರನ್ನು ಹೇಳಿಕೊಂಡು ಮಾಡುತ್ತಿರುವ ಕಾರ್ಯಗಳನ್ನು ನೋಡಿ ಆ ಗಾಂಧಿ ಹೆದರಿ ಈ ಮಂದಿ ನಮ್ಮವರು ಹೌದೋ ಅಲ್ಲೋ ಅಂಥ ಭಯಪಟ್ಟು ಕಚ್ಚೆ ಕಳಚಿಬೀಳುವಂತೆ ಓಡುತ್ತಿರಬೇಕು ; ಹಾಗೆ ಓಡಲಿಕ್ಕೆ ಹತ್ತಿದ್ದಾನೆ.

ಸ್ವಾಮಿ, ಇನ್ನು ಆ ರೆಗ್ಯುಲೇಟೆಡ್ ಮಾರ್ಕೆಟ್ ಅಂತ ಮಾಡಿದರು. ಆ ಕಾನೂನು ಈಗ ಅಮಲಿನಲ್ಲಿದೆ. ಆದರೆ ಅದನ್ನು ತಂದ ಎಂ. ಅರ್. ಪಾಟೀಲರೂ ಈಗ ಮಂತ್ರಿಗಳಾಗಿಲ್ಲ, ಅದಕ್ಕೆ ಸಂಬಂಧಪಟ್ಟ ಸದಸ್ಯರೂ ಈಗಿಲ್ಲ. ಅದು ನಮ್ಮ ಒಂದು ಡೆಮೊಕ್ರೆಟಿಕ್ ಸೆಟಪ್ಪಿಗೆ ಶುಶ್ರೂಷೆ ಮಾಡಿದಂತಾಗುತ್ತದೆ, ಅದರಿಂದ ಬಹಳ ಅನುಕೂಲವಿದೆ, ಎಂದು ಹೇಳಿ ಅದನ್ನು ಆ ದಿವಸ ಒಪ್ಪಿಕೊಳ್ಳಬೇಕೆಂದು ಹೇಳಿದರು. ಅವರ ಮಾತಿನಲ್ಲಿ ವಿಶ್ವಾಸವಿಟ್ಟು ನಾವೂ ಅದನ್ನು ಆ ದಿವಸ ಒಪ್ಪಿಕೊಂಡೆವು. ಇದುವರೆಗೆ ಅಲ್ಲಿ ಚುನಾವಣೆಯನ್ನು ಮಾಡಲಿಲ್ಲ. ಇವತ್ತು ಚುನಾವಣೆ ಮಾಡುತ್ತೇವೆಂದು ಒಂದೆರಡು ವರ್ಷಗಳಿಂದ ಡೆಪ್ಯುಟಿ ಕಮಿಷನರ್ ಮತದಾರರ ಪಟ್ಟಿಯನ್ನು ಮಾಡಬೇಕೆಂದು ಹೇಳುತ್ತಿದ್ದಾರೆ ಎಸನ್‌ಸಿಯೇಷನ್ ಆಫ್ ಲಾ ಹೈಕೋರ್ಟಿನ ಮುಂದೆ ಹೋಗಿ ಅವರು ಒಂದು ಆರ್ಡರನ್ನು ಮಾಡಿದ್ದಾಗ್ಯೂ, ಅದನ್ನು ಸರ್ಕಾರದವರು ಮೀರಿನಡೆಯುತ್ತಿದ್ದಾರೆ * * * * * ಕಾಯಿದೆ ತಿದ್ದುವ ಬುದ್ಧಿ ನಿಮಗೆ ಬರುತ್ತಿಲ್ಲವಲ್ಲ ಎಂದು ಮಾನ್ಯ ಶ್ರೀ ನಾಗಪ್ಪನವರು ಬಹಳ ಸೂಕ್ತ ರೀತಿಯಲ್ಲಿ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಸದಸ್ಯರು* * * * ಎಂದು ಏನೋ ಹೇಳುತ್ತಾರೆ. ಅವರು ಅದನ್ನು ಯಾವ ರೂಲ್ ಪ್ರಕಾರ ಇಲ್ಲಿ ಉಪಯೋಗಿಸುತ್ತಾರೆ ?

ಶ್ರೀ ಕೆ. ಎಚ್. ಪಾಟೀಲ್.—ನಾನು ಪರ್ಸನಲ್ಲಾಗಿ ಯಾವುದೂ ಹೇಳಲಿಲ್ಲ. ಲಾ ಎನನ್ಸಿಯೇಟ್ ಮಾಡುವಾಗ ನಾಮಿನೇಷನ್ ಫಸ್ಟ್ ಕಮಿಟಿಯಲ್ಲಿದೆಯೆಂದು ಮಾಡಿದ್ದಾರೆ. ಆ ಮೇಲೆ ಚುನಾವಣೆಯಾಗಿ ಬಂದಂಥ ಹೊಸ ಕಮಿಟಿಯಲ್ಲಿ ಆ ರೀತಿ ನಾಮಿನೇಟ್ ಮಾಡುವುದಕ್ಕೆ ಆಗುವುದಿಲ್ಲ. ಹಳೆಯ ಕಮಿಟಿಯಲ್ಲಿ ಆ ರೀತಿ ಮಾಡಲು ಸಾಧ್ಯವಿದೆ ಆದರೆ ಕಮಿಟಿಗಳು ಇಲ್ಲದೆಯೇ ನಾಮಕರಣಮಾಡಬೇಕೆಂದು ಇವರು ಅರ್ಥಮಾಡುತ್ತಿದ್ದಾರೆ. ಅಂತಹವರು ಈ ಕಡೆಗೆ ಬಹಳಮಂದಿ ಇದ್ದಾರೆ. ಅವರೆಲ್ಲರಿಗೂ ನಾನು ಅಪೀಲು ಮಾಡುತ್ತಿದ್ದೇನೆ. ಇದನ್ನು ಪಕ್ಷದ ದೃಷ್ಟಿಯಿಂದ ನೋಡಬೇಡಿ. ಅಧಿಕಾರ ಇದೆಯೆಂದು ನಮ್ಮವರೇ ನಾಮಕರಣ ಮಾಡುವುದಕ್ಕೆ ಸಮರ್ಥರಾಗಿದ್ದಾರೆಂಬ ಹೇಸಿಗೆ ಬುದ್ಧಿ ಇವರಿಗಿದೆ. ನಾವು ಗಂಭೀರ ರೀತಿಯಿಂದ ಗೆದ್ದು ಬರುತ್ತೇವೆ. ಹಿತ್ತಲು ಬಾಗಲಿನಿಂದ ಬರುವುದಕ್ಕೆ ಏಕೆ ಪ್ರಯತ್ನಮಾಡುತ್ತೀರಿ ? ನೀವು ಕಾಯಿದೆ ತೆಗೆದುಕೊಂಡು ಬನ್ನಿ. ನಾವು ಅದಕ್ಕೆ ವಿರೋಧಮಾಡುವುದಿಲ್ಲ. ಚುನಾವಣೆಯಲ್ಲಿ ನೀವು ಜಯಶೀಲರಾಗದಿದ್ದರೆ ವಿರೋಧಪಕ್ಷದವರು ಜಯಶೀಲರಾದರೆಂದರೆ, ನೀವು ತಲೆಬಾಗಿ.

ಇನ್ನು ಅನಿಮಲ್ ಹಸ್ಬೆಂಡರಿ ವಿಷಯ. ಈ ಇಲಾಖೆಯ ಮುತ್ಸದ್ದಿತನದಿಂದ ಅನಿಮಲ್ ಹಸ್ಬೆಂಡರಿ ಇಲಾಖೆಗೆ ಕ್ಯಾಬಿನೆಟ್ ಮಿನಿಸ್ಟರ್ ಇರಬಾರದೆಂದು ಮಾಡಿದ್ದಾರೋ ಏನೋ ಗೊತ್ತಿಲ್ಲ. ಇವರ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಸರ್ಕಾರಕ್ಕೆ ಪೋಲಾಗಿದೆ. ಅದನ್ನು

*** Expunged as ordered by the Chair.

ಸರ್ಕಾರದವರು ಬಹಳ ಸೂಕ್ಷ್ಮರೀತಿಯಿಂದ ಪರಿಶೀಲನೆ ಮಾಡಬೇಕು. ಕೇವಲ ಮಂತ್ರಿಗಳಾಗುವುದು ಟೂರ್ ಮತ್ತು ಡೆಪ್ಯುಟಿ ಕಮಿಷನರ್ ಮಕ್ಕಳನ್ನು ಕಾರ್ ಅಥವಾ ಜೀಪ್‌ನಲ್ಲಿ ಕುಳ್ಳಿರಿಸಿಕೊಂಡು ಸಿಕ್ಕಾಬಟ್ಟೆಯಾಗಿ ಸಂಚಾರಮಾಡುವುದಕ್ಕಲ್ಲ. ಇದರಿಂದ ಮಂತ್ರಿತ್ವಕ್ಕೆ ಒಳ್ಳೆಯದಾಗುವುದಿಲ್ಲ.

ಇನ್ನೊಂದು ವಿಷಯ. ಮಂಗಳೂರಿನಲ್ಲಿ ಬಸವೇಶ್ವರ ವಿದ್ಯಾವರ್ಧಕ ಸಂಘದವರು ಒಂದು ಡೈರಿಯನ್ನು ಪ್ರಾರಂಭಮಾಡಿದ್ದಾರೆ. ಅದರ ಉದ್ಘಾಟನೆಯನ್ನೂ ಸಹ ಮಾಡಿದ್ದಾರೆ. ಅದು ಯಾವರೀತಿಯಲ್ಲಿಯೂ ಇನ್ನೂ ಅಭಿವೃದ್ಧಿಯಾಗಲಿಲ್ಲ. ಆ ಸಮಾರಂಭಕ್ಕೆ ಕಾಂಗ್ರೆಸ್ ಮಂತ್ರಿಗಳೂ ಮತ್ತು ಮಾನ್ಯ ಮುಖ್ಯಮಂತ್ರಿಗಳೂ ಎಲ್ಲರೂ ಬಂದಿದ್ದರು. ಆದರೆ ಮಾರನೆಯ ದಿವಸವೇ ಆ ಡೈರಿ ಕದ ಹಾಕಿದೆ. ಬೆಂಗಳೂರು ಡೈರಿ ವಿಷಯ ಬೇರೆ. ಹೊಸದಾಗಿ ಯಾರ್‍ಯಾರು ಡೈರಿ ಪ್ರಾರಂಭಮಾಡುತ್ತಾರೋ ಅಂತಹವರಿಗೆ ಕೇಂದ್ರಸರ್ಕಾರದವರು ಹರಿಯಾನದಿಂದ ಬೇಕಾದಷ್ಟು ದನಗಳನ್ನು ತರಿಸಿ ಡೈರಿಗಳನ್ನು ಅಭಿವೃದ್ಧಿಮಾಡಬೇಕು ಎಂದು ಹೇಳಿದ್ದಾರೆ. ಅಂದಮೇಲೆ ನೀವು ಅಲ್ಲಿಂದ ಎಷ್ಟು ದನಗಳನ್ನು ತರಿಸಿ ಇಲ್ಲಿರತಕ್ಕ ಡೈರಿಯನ್ನು ಅಭಿವೃದ್ಧಿಮಾಡಿದ್ದೀರಿ ? ಮದ್ರಾಸ್ ಮತ್ತು ಆಂಧ್ರ ರಾಜ್ಯಗಳಲ್ಲಿ ಇದರ ಬಗ್ಗೆ ಹೆಚ್ಚಿನ ಸೌಕರ್ಯವಿದೆ. ಮೈಸೂರು ದೇಶದಲ್ಲಿ ಆ ಸೌಕರ್ಯವಿಲ್ಲ. ಬೇರೆ ಕಡೆಗಳಿಂದ ಅವು ಇಲ್ಲಿಗೆ ಬರುವುದಿಲ್ಲ. ನೀವು ಡೈರಿಕ್ಕಾಗಿ ಅಲ್ಲಿ ಹೋಗಿ ಕೇಳಿದರೆ ಕೊಡುತ್ತಾರೆಂದು ಮಂತ್ರಿಗಳು ಹೇಳುತ್ತಾರೆ. ನಮ್ಮ ಹಣೆಯಬರಹ ಇಂತಹ ಮಂತ್ರಿಗಳು ಇದ್ದಾರೆ. ಆ ದೃಷ್ಟಿಯಿಂದ ಮುಖ್ಯ ಮಂತ್ರಿಯವರಿಗೆ ನೇರವಾಗಿ ಈ ಪ್ರಶ್ನೆಯನ್ನು ಹಾಕುತ್ತಿದ್ದೇನೆ. ಈ ಮಂತ್ರಿ ಪದವಿಯನ್ನು ಒಬ್ಬ ಕ್ಯಾಬಿನೆಟ್ ರ್‍ಯಾಂಕಿನವರಿಗೆ, ಒಬ್ಬ ಒಳ್ಳೆಯ ಮನುಷ್ಯನಿಗೆ, ನಮ್ಮ ಗೋಪಾಲಗೌಡರಂತವರಿಗೆ ಒಪ್ಪಿಸಿದರೆ ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನೊಂದು ಮಾತು ಆಡಳಿತದ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಮುಖ್ಯ ಮಂತ್ರಿಯವರು ಹೇಳಿದರು, ನೀವು ವಿರೋಧ ಪಕ್ಷದ ಸದಸ್ಯರು ಜವಾಬ್ದಾರಿ ಅರಿತು ಮಾತನಾಡಿದರೆ, ಅದನ್ನು ನಾನು ಶಿರಸಾವಹಿಸಿ ಮಾಡುತ್ತೇವೆಂದು. ನಾನು ಹೇಳುವುದಾದರೆ, ಅಗಾಗ್ಯೆ ಗೊಂದಲ ಮಯವಾಗಿ ಹೇಳದೆ, ನನಗೆ ಸಮಯ ಬಂದಾಗ, ಕಾನೂನುಬದ್ಧವಾಗಿ ಹೇಳುವ ಹಕ್ಕು ಪಡೆದಿದ್ದೇನೆ. ಅವರ ಎದುರಿಗೆ ಕೊಡುವಂತಹ ಅನೇಕ ಸಲಹೆಗಳಿವೆ. ಆದರೆ ಕೊಟ್ಟಂತಹ ಅನೇಕ ಸಲಹೆಗಳಿಗೆ ಇನ್ನೂ ಉತ್ತರ ಬಂದಿಲ್ಲ. ಮುಟ್ಟಿದೆ ಎಂದು ಮಾತ್ರ ಕೊಟ್ಟಿದ್ದಾರೆ. ಶ್ರೀ ಶಂಕರ ರಾಯರ ಮೇಲೆ 21 ಪಾಯಿಂಟ್ ಮೇಲೆ ಆರೋಪಣೆ ಹೊರಿಸಿದ್ದನ್ನು ಮೂರು ದಿವಸದೊಳಗೆ ವಿಚಾರಣೆ ಮಾಡುತ್ತೇನೆಂದು ಹೇಳಿ ಏನೂ ಮಾಡಿಲ್ಲ. ಧಾರವಾರಕ್ಕೆ ಹೋಗಿ ಬಂದು ಮಾಡುತ್ತೇನೆ ಎಂದು, ಏನು ಮಾಡಿದರೋ ? ಆದ್ದರಿಂದ ಈ ವಿಷಯದಲ್ಲಿ ಮುತುವರ್ಜಿ ವಹಿಸಿ ಮಾನ್ಯ ಮುಖ್ಯ ಮಂತ್ರಿಯವರು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ವಿಚಾರ. ಇವತ್ತು ಇಡೀ ಹಿಂದೂಸ್ಥಾನದಲ್ಲೇ ಈ ಸಹಕಾರ ಪ್ರಾಮುಖ್ಯತೆಯನ್ನು ಪಡೆದಿದೆ. ಆದರಲ್ಲೂ ಮೈಸೂರು ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿದೆ. ಅದರಲ್ಲೂ ಬಾಂಬೆ ಕರ್ನಾಟಕದಲ್ಲಿದ್ದಂತಹ ಶ್ರೀ ನಾಡಗೌಡರು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಇನ್ನೂ ಹೆಚ್ಚಿನ ಪ್ರಾಧಾನ್ಯತೆ ದೊರೆತಿದೆ. ಇವತ್ತಿನದಿವಸ ಈ ಸಹಕಾರಿ ತತ್ವವನ್ನು ಧಿಕ್ಕರಿಸಿ ಶ್ರೀ ನಾಡಗೌಡರು ನಡೆಯುತ್ತಿದ್ದಾರೆ. ಇವರು ಡೆವಲಪ್‌ಮೆಂಟ್ ಮಂತ್ರಿಯಾಗಿದ್ದಾರೆ ಸಹಕಾರ ಮಂತ್ರಿಯಾಗಿದ್ದಾರಲ್ಲದೆ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯ ಅಡ್ಮಿನಿಸ್ಟ್ರೇಟರೂ ಆಗಿದ್ದಾರೆ. ಅದಲ್ಲದೆ ಬಾಗಲಕೋಟೆಯ ಎ.ಪಿ.ಎಂ.ಸಿ. ದಾವಣಗೆರೆ, ಹುಬ್ಬಳ್ಳಿಯಲ್ಲಿರುವ ಎ.ಪಿ.ಎಂ.ಸಿ, ಇದಕ್ಕೆಲ್ಲಾ ಕೂಡ ಹಣ ಕೊಡುವುದಕ್ಕೆ, ಠರಾವು ಮಾಡುವುದು ಎಲ್ಲಾ ಇವರ ಕೆಲಸವಾಗಿದೆ. ಹಣ ಕೇಳುವುದೂ ಇವರೇ, ಮಂಜೂರು ಮಾಡುವುದು ಇವರೇ. ಇದಕ್ಕೆ ಕಾಯಿದೆಯೂ ಇಲ್ಲ, ಏನೂ ಇಲ್ಲ. ಇವರು ಅದಕ್ಕೆ ಇದಕ್ಕೆ ಎಲ್ಲಾ ಮಂಜೂರು ಮಾಡುವುದು, ಕೊಡುವುದು ಏಕೆಂದರೆ, ಇವರು ಹೇಳುವಂತೆ ಕೇಳುವಂತಹ ರಿಜಿಸ್ಟ್ರಾರ್ ಒಳ್ಳೆಯ ಜನ ಸಿಕ್ಕಿದ್ದಾರೆ. ಇವರ ಗುರುಗಳು ಅವರು, ಅವರ ಗುರುಗಳು ಇವರು. ಶ್ರೀಮಾನ್ ನಾಡಗೌಡರು ಮುಖ್ಯ ಮಂತ್ರಿಯವರ ಸ್ನೇಹಿತರು. ಅವರು ನನಗೂ ಸ್ನೇಹಿತರು. ಅವರು ಅಧಿಕಾರವನ್ನು ಇಂಥ ಸಂಸ್ಥೆಗಳಿಗಾಗಿ ಉಪಯೋಗಿಸುತ್ತಿದ್ದಾರೆ. ಈ ದೃಷ್ಟಿಯಿಂದ ಹೇಳುತ್ತಿದ್ದೇನೆ, ಈಗಲಾದರೂ ಆಲೋಚನೆ ಮಾಡಿ, ಬಿ.ವಿ.ವಿ. ಸಂಸ್ಥೆಗೆ ಎಷ್ಟು ಹಣ ಇವರು ವಸೂಲು ಮಾಡಿದ್ದಾರೆ ? ಇವರು ಪಕ್ಷಪಾತವಿಲ್ಲವೆಂದು ಹೇಳುತ್ತಿದ್ದಾರೆ. ನಾನು ಇವರನ್ನು ಟೆಸ್ಟ್ ಮಾಡುವುದಕ್ಕೋಸ್ಕರ, ನಾನು ಮಾಡಿದಂತಹ ಗದಗಿನ ಎ.ಪಿ.ಎಂ.ಸಿ. ಸಂಸ್ಥೆಗೆ, ಬಾಕಿಯವರಿಗೆ ಕೊಟ್ಟಂತೆ ಸಹಾಯ ಧನ ಕೊಡಿ, ಎಂದು ಕೇಳಿದರೆ, ಅದಕ್ಕೆ ಹಣ ಕೊಡುವುದಕ್ಕಾಗುವುದಿಲ್ಲ, ನನಗೆ ಕೊಡುವುದಕ್ಕೆ ಪ್ರೊವಿಜನ್ ಇಲ್ಲವೆಂದು ಹೇಳಿದರು. ಅವರಿಗೆ ಕಾನೂನಿನ ಪ್ರೊವಿಜನ್ ಇದೆ, ನನಗೆ ಮಾತ್ರ ಕೊಡುವುದಕ್ಕೆ ಪ್ರೊವಿಜನ್ ಇಲ್ಲವೆಂದು ಹೇಳುವುದು ಇದು ಯಾವ ನ್ಯಾಯ, ಸ್ವಾಮಿ ?

(ಶ್ರೀ ಕೆ. ಎಚ್. ಪಾಟೀಲ್)

ಬಾಗಲಕೋಟೆ ಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಗೆ ಹಣ ಸಹಾಯ ಮಾಡಿ ಬೇರೆ ಸಂಸ್ಥೆಗೆ ಏತಕ್ಕೆ ಮಾಡಲಿಲ್ಲ? ಈ ರೀತಿಯಾಗಿ ಸಹಕಾರ ಮಂತ್ರಿಗಳಾದ ಶ್ರೀಮಾನ್ ಪಿ. ಎಂ. ನಾಡಗೌಡರು ಮಾಡಿರತಕ್ಕ ಪ್ರಮಾದಗಳು ಬಹಳ ಇವೆ. ಸಮಯದ ಅಭಾವ ಇರುವುದರಿಂದ ಬಾಕಿ ವಿಷಯ ಗಳನ್ನು ಹೇಳುವುದಕ್ಕೆ ಅವಕಾಶವಿಲ್ಲದಂತಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಶ್ರೀಮಾನ್ ವೀರೇಂದ್ರ ಪಾಟೀಲರು ಇನ್ನೂ ತರುಣರು. ಅವರು ಈ ಮಂತ್ರಿಗಳ ಅಥವಾ ಯಾರದೇ ಮಾತನ್ನು ಕೇಳಬಾರದು. ಅವರ ವಿಚಾರದಲ್ಲಿ ಈಗ ಏನು ಒಂದು ಒಳ್ಳೆಯ ಭಾವನೆ ಇದೆ, ಅದಕ್ಕೆ ಕಳಂಕ ತರುವಂತಹ ಕಾರ್ಯ ಆಗಬಾರದು. ನಮ್ಮ ಭಾಗದಲ್ಲಿ ಆಗಬೇಕಾಗಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಆಶ್ವಾಸನೆಯನ್ನು ಕೊಟ್ಟಿದ್ದಾರೆಯೋ ಅದರ ಬಗ್ಗೆ ಆದಷ್ಟು ಬೇಗ ಆರ್ಡರ್ ಮಾಡಿ ಆ ಕೆಲಸಗಳನ್ನು ಮಾಡಿಕೊಡಬೇಕು, ಶ್ರೀಮಾನ್ ವೀರೇಂದ್ರ ಪಾಟೀಲರು ನುಡಿದಂತೆ ನಡೆಯುತ್ತಾರೆ ಎನ್ನುವ ಮಾತನ್ನು ಉಳಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಪೋಲೀಸ್ ಬಗ್ಗೆ ಹೇಳಬೇಕಾಗಿದ್ದರೆ ಮೊನ್ನೆ ಒಬ್ಬ ಹರಿಜನರು ಮರಣ ಹೊಂದಿದ ವಿಷಯದಲ್ಲಿ ಅನೇಕ ಸ್ನೇಹಿತರು ಪ್ರಶ್ನೆಗಳನ್ನು ಹಾಕಿದ್ದಾರೆ. ಅಷ್ಟೇ ಅಲ್ಲ ಒಂದು ಸಣ್ಣ ಮಾತನ್ನ ನನ್ನ ಮಿತ್ರರಾದ ತರುಣ ಒಳಾಡಳಿತ ಉಪ ಮಂತ್ರಿಗಳ ಗಮನಕ್ಕೆ ತರುತ್ತೇನೆ. ಪೋಲೀಸಿನವರಲ್ಲಿ ಹೊಗೆಯುವಂಥಾ ಹವ್ಯಾಸ ಬಹಳ ಜಾಸ್ತಿಯಾಗಿದೆ. ಇವೊತ್ತಿನ ದಿವಸ ದೊಡ್ಡವರು ಯಾರು ಏನೇ ತಪ್ಪು ಮಾಡಿದರೂ ಅದು ಲೆಕ್ಕಕ್ಕೆ ಬರುವುದಿಲ್ಲ. ಆದರೆ ನಿರಪರಾಧಿಗಳು ಶಿಕ್ಷೆಗೆ ಗುರಿಯಾಗು ತ್ತಾರೆ ಪೋಲೀಸ್‌ನವರು ಅಧಿಕಾರದ ದರ್ಪದಿಂದ ನಿರಪರಾಧಿಗಳಾದಂತಹ ಸಜ್ಜನರನ್ನು ಹಿಂಸೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಇದು ಸರಿಯಲ್ಲ. ಈ ದೃಷ್ಟಿಯಿಂದ ಪೋಲೀಸಿನವರು ತಮ್ಮಲ್ಲಿ ಏನಾದರೂ ತಪ್ಪುಗಳು ಇದ್ದರೆ ಅವುಗಳನ್ನು ತಿದ್ದಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ನಿಜವಾಗಿ ಯಾರು ತಪ್ಪು ಮಾಡುತ್ತಾರೆಯೋ ಅವರಿಗೆ ಶಿಕ್ಷೆ ವಿಧಿಸಿ. ಯಾವುದೇ ರೀತಿಯಿಂದ ನಿರಪರಾಧಿಗಳಿಗೆ ತೊಂದರೆಯನ್ನು ಕೊಡುವುದು ಸರಿಯಲ್ಲ. ಪೋಲೀಸಿನವರು ಉಪಯೋಗ ಮಾಡುವ ಆಕ್ಟ್ ಏನೋ ಒಳ್ಳೆಯದಿದೆ. ಆದರೆ ಕಾನೂನು ಮೀರಿದ ವರ್ತನೆಯನ್ನು ನಿರಪರಾಧಿಗಳ ಮೇಲೆ ತೋರಿಸಬಾರದು. ಇಂಥ ಕೆಲವು ಆಡಳಿತದಲ್ಲಿ ಅಭಾವ ಇರುವಂತಹ ವಿಷಯಗಳನ್ನು ಮಾನ್ಯ ಮಂತ್ರಿಗಳು ಸರ್ಕ್ಯುಲರ್ ಮೂಲಕ ಪೋಲೀಸಿನವರಿಗೆ ತಿಳಿಸಬೇಕು ಎಂದು ಹೇಳಿ ಈ ಇಲಾಖೆಯ ಬಗ್ಗೆ ಡಿಮ್ಯಾಂಡ್ ಚರ್ಚೆಗೆ ಬಂದಾಗ ವಿವರಣೆಯನ್ನು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ನಾನು ಮೊದಲು ಒಂದು ಕ್ರಿಯಾಲೋಪವನ್ನು ಎತ್ತಿದೆ. ಮಾನ್ಯ ಸದಸ್ಯರಾದ ಶ್ರೀ ಪಾಟೀಲರು ಬಂಡರು ಎಂಬ ಪದವನ್ನು ಪ್ರಯೋಗ ಮಾಡಿದ್ದಾರೆ. ಅವರು ಆ ರೀತಿ ಉಪಯೋಗಿಸಿದ್ದರೆ ಅದನ್ನು ತಾವು ರೆಕಾರ್ಡ್‌ನಿಂದ ಎಕ್ಸ್‌ಪಂಜ್ ಮಾಡಬೇಕು.

ಶ್ರೀ ಕೆ. ಎಚ್. ಪಾಟೀಲ್.—ನಾನು * * * ಎಂಬ ಪದವನ್ನು ಉಪಯೋಗ ಮಾಡಲಿಲ್ಲ. ನಾನೇನಾದರೂ ಪ್ರಮಾದವಶಾತ್ ಉಪಯೋಗಿಸಿದ್ದರೆ ಅದನ್ನು ನಾನು ವಾಪಸ್ ತೆಗೆದು ಕೊಳ್ಳುತ್ತೇನೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ತಾವು ಮಂಗಳೂರು ಬಂಟರ ವಿಷಯ ಪ್ರಸ್ತಾಪ ಮಾಡಿದಿರಾ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಅಧಿಕೃತ ವರದಿಯಲ್ಲಿ ಅವರು ಆ ರೀತಿ * * * ಎಂಬ ಪದವನ್ನು ಉಪಯೋಗಿಸಿದ್ದಾರೆಂದು ತಿಳಿದುಬಂತು. ಆ ರೀತಿ ಉಪಯೋಗಿಸಿದ್ದರೆ ಎಕ್ಸ್‌ಪಂಜ್ ಮಾಡಿಸಬೇಕು.

ಉಪಾಧ್ಯಕ್ಷರು.—ಆ ಪದ ರೆಕಾರ್ಡ್ ಆಗಿದ್ದರೆ ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾನು ಬಂಟರು ಎಂದು ಹೇಳಿದೆ. ಬಂಟರು ಎಂದರೆ ಶೂರರು ಎಂದು ಅರ್ಥ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರು ಆ ಪದವನ್ನು ಉಪಯೋಗಿಸಿದ್ದರೆ ಅನ್‌ಪಾರ್ಲಿ ಮೆಂಟರಿ ಎಂದು ನಾನು ತೀರ್ಮಾನ ಮಾಡಿಕೊಳ್ಳಬೇಕೆ ಅಥವಾ ತಾವು ನಂತರ ರೂಲಿಂಗ್ ಕೊಡುತ್ತೀರೋ ?

ಉಪಾಧ್ಯಕ್ಷರು.—ಅದನ್ನು ನೋಡಿ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— * * * ಎಂಬ ಪದ ಅನ್‌ಪಾರ್ಲಿಮೆಂಟರಿ ಆಗಿದ್ದರೆ ಅದನ್ನು ವಾಪಸ್ ತೆಗೆದುಕೊಳ್ಳುತ್ತೇನೆಂದು ಮಾನ್ಯ ಸದಸ್ಯರು ಹೇಳಿದ್ದರು. ಆದರೆ ಆ ಪದದ ಅರ್ಥ ಏನು ಎಂಬುದನ್ನು ಕಾಂಗ್ರೆಸ್ ಸದಸ್ಯರುಗಳು ಹೇಳಿದರೆ ಸಾಕು.

Sri M. Y. GHORPADE (Sandur).—Mr. Speaker, Sir, if I have to describe the Budget, that is being discussed by the House, in one phrase, I would say that it is a 'wait and see' Budget, like most Budgets of the State Governments this year. It frankly awaits the final report of the Finance Commission and the nature and quantum of Central plan and assistance. The Budget openly confesses that the dependence of the State on the Centre is now more than complete. Sir, it is interesting to note that the State's own revenue resources do not even cover the committed expenditure on social services, general administration and interest. The Budget states that the revenue of the State is about Rs. 213 crores. Now, this can be broken up conveniently as follows: State taxes is Rs. 80 crores; share of Central taxes is Rs. 26 crores; non-tax revenue is Rs. 67 crores; and Central assistance is Rs. 40 crores. The first three items, *i. e.*, State taxes, share of Central taxes and non-tax non-tax revenue totals to Rs. 173 crores. Out of Rs. 40 crores of Central assistance, only about Rs. 21 crores is a general purpose grant under Article 275. Therefore, it will be seen that the State's own resources are Rs. 173 crores without the Central grant under Article 275 and Rs. 194 crores with the Central grant of Rs. 21 crores under Article 275. This is against a non-plan expenditure of 200 crores. The hon'ble Finance Minister himself has pointed out that out of 226 crores, 200 crores is the non-plan expenditure. Therefore Sir, it is obvious that there is a significant gap between our own resources and Committed Expenditure even after including the general purpose Central grants. The budget also takes credit for Rs. 7.60 crores being receipts by sale of power from Sharavati and Bhadra to the State Electricity Board, and the losses incurred by the Electricity Board will have to be taken care of by the Finance Commission. In para 62 of the budget speech it is mentioned that the Committed Expenditure on account of three Annual Plans is Rs. 9 crores which also becomes part of Non-Plan. Expenditure. I think it would be an interesting exercise for the Government to find out the rate at which the non-plan expenditure has been increasing in the last three to five years and to what extent our own resources are increasing. It is not only in the interest of the State but in the interest of the country, as a whole.

Now S'r, in the budget speech, the Finance Minister has also frankly told us that the Government proposes to borrow loans to the tune of Rs.9 crores next year and which would be used mostly for repaying previous loans. An interesting feature to note is that borrowing from the Centre during next year is expected to be of the order of Rs. 51.25 crores, but the debt repayment also is expected to be of the order of Rs. 52 crores. If we take the All India picture it is interesting to find from the Budget that has been presented in the Parliament that the loans that are being given by Central Government to all the States is of the order of

(SRI M. Y. GHORPADE)

Rs. 430 crores, As against that, the repayment of loans by the State to the Centre is of the order of more than Rs. 500 crores. What I am trying to say is that almost all States are totally dependant on the Centre not only for their future development but also for significant portions of their Committed Expenditure. The Mysore Plan outlay during next year is put at Rs. 62 crores, but this is based on an overall deficit of Rs. 30 crores. Therefore, the 62 crores plan for next year presumes that the Government of India will be clearing overdrafts as and when overdrafts are developed, by *ad hoc* loans. I sincerely feel that most of the State Governments have presented a deficit budget in anticipation of very good assistance from the Finance Commission and the Central Government. But, if we do not make this assumption of unlimited overdrafts, then care should be taken to see that at least the salaries of personnel and essential maintenance expenditure is not jeopardised I think most of the State Governments' position is like that. I feel that this fundamental difficulty or imbalance between the States resources and the Committed expenditure cannot be solved unless the Centre-States Financial relation is thoroughly reorganised on a scientific and rational basis, so as to ensure filling the gap between the resources and the non-plan expenditure, and future expenditure is done in such a manner that loan repayment becomes feasible.

Sir, if I were to speak frankly on this occasion, I would say that the secret of the State budgetary deficit arises out of uncertainty and the fear that any tax effort we might make in the State would have the effect of reducing revenue gap and thereby reducing what we might have got from the Finance Commis ion and the Central Government. I do not blame the State Government because this is what happens when there is great ambiguity as to the manner in which finances come to us from the Centre. But I fail to see how the Central Government can go on giving *ad hoc* loans to meet uncontrollable overdrafts which makes the States budgets appear ridiculous.

In para 7 of the budget speech, the Hon. Minister for Finance has said that the Finance Commission has been requested to take into account, besides the revenue gap, a portion of losses on account of abolition of Octroi, expenditure on account of the recommendation of the Pay Commission, cost of appointment of Village Accountants to replace the hereditary officers, increased expenditure on Education, subsidies in the rate of interest, etc. This precisely proves what I have been saying in the last few minutes that unless the Finance Commission and the Central Government evolve scientific uniform norms of treating this type of expenditure in different States and similarly, unless they evolve certain comparable norms of tax and non-tax revenues on the basis of scientific and uniform norms, it becomes completely an *ad hoc* position and the State Government increase overdrafts and expect the overdrafts to be covered by *ad hoc* loans from Centre. Therefore, this paragraph in the Budget speech is a very clear plea indirecly that such norms

should be evolved, so that any State Government which makes the effort to rise resources is not indirectly penalised. If any State wants to deviate from these accepted norms, naturally, it should take the entire financial responsibility. Sir, it is also significant to note that it is only the Central Government to-day that has a surplus over non-developmental expenditure. But it is more significant to note that the surplus over the non-developmental expenditure itself of the Central is going down. For instance, in 1966–67 the Central annual surplus over non-plan expenditure was of the order of 1,572 crores of rupees. To-day it is only Rs. 400 crores. Against this background Sir, I will come to more specific matter which pertain to Mysore State and our own budget. It seems that the basic problem of imbalances in our own resources and committed expenditure cannot be expected to be solved by trying to milk the cow of inelastic tax resources. Mention has been made in the budget speech, about the Bhoothalingam Committee. It is not my intention to anticipate the findings of the committee. But I would like to say, on this occasion, that it would be expecting too much to expect the Bhoothalingam Committee to perform any miracles. It cannot solve any problems which arise out of Centre-State financial relations. At best, this Committee can make a very objective, scientific and comparable study of tax revenue and non-tax revenue in the State compared to other States and try to point out or locate certain obvious anomalies scope to augment resources.

[SMT. K. LEELAVATHI RAI in the Chair]

But it is not within its power or scope to correct the basic anomalies. It is also one of the terms of reference of Bhoothalingam Committee to look into, not only tax and non–tax resources, but also resources of local bodies.

It has been stated in the Budget that the capacity to tax urban areas has reached the saturation point. I am also fully aware that the statment is by and large true. But at the same time, there is scope to improve the income from existing taxes by proper management of taxes. To just give an example, I personally feel that the income of local bodies would go up significantly if only the house properties in the area of the local bodies were to be valued on a uniform basis. Even if the tax were to be levied at the same level, it will increase the yield or income that the local bodies are getting from house properties.

Sir, it has also been mentioned it the budget that the Planning Commission expects the State Government to raise Rs. 115 crores by way of local resources. I am glad the Finance Minister also qualified the statement by saying that this might be over-optimistic. Unfortunately, no break-up has been given with regard to Rs. 115 crores or the manner in which the Planning Commission expects the Government to raise these Rs. 115 crores. If details are given, the House would be in a better position to assess how over-optimistic the figure

(SRI M. Y. GHORPADE)

is. But I would straightaway say, Sir, that under the present conditions in our country, no single State can make a disproportionate effort to raise local resources. That would not be feasible. Therefore, my own feeling is, that whether it is a question of salaries and D A. or whether it is a question of maximising the revenue from tax and non-tax resources, it would be far more fruitful if the States in a particular zone got together and tried to evolve certain comparable uniform policies. I personally think that this should be the rightful function of the National Development Council. Instead of discussing so many things which are not directly of interest or benefit to the respective States, the National Development Council would be doing a great service to this country if this sort of frank discussion to evolve a comparable approach between the neighbouring States could be had. Then, I think it would be more feasible to raise more local resources than what is happening today. Sir, the criteria for dividing central assistance, is not by itself going to solve any problem unless this basic problem of non-plan expenditure or the gap between the non-plan expenditure and local resources is solved.

So far as Mysore is concerned, the budget mentions the Fourth Plan quantum as Rs. 440 crores. Various district plans have also been drawn up in our State. I would straightaway say that it would be a misnomer to call these things a plan; whether it is Rs. 440 crores for the State or the District plans, it is a misnomer to call them a plan because they have no reference to the available resources. They are expression of our needs and they are not directly related to resources in sight. As a matter of fact, I do not think I would be divulging any secret if I said that the demands of various Departments in Mysore State total to something like Rs. 550 crores. This is what they would like to have. Rs. 440 crores is a sort of plan that Mysore ought to have if the present tempo of development is to be maintained. But I want to make it clear that it is need-based and not based upon actual resources. Therefore, when I took part in the Debate on the Governor's address, I pointed out that on the basis of existing resources, the plan for Mysore State can be of the order of Rs. 250 crores. Even this Rs 250 crores assumes Central assistance of Rs. 225 crores. In case something happens to this assumption of Rs. 225 crores from the Centre, then to that extent this figure of Rs. 250 crores for the State would naturally be affected

Now in para 11 of the Budget speech, the Finance Minister has stated:

> "The State Government can take a final view only after decisions are taken on certain important questions like the size of the Central Plan, rescheduling of loans, our ability to hold the price line, State's share of additional taxation by Government of India and other matters."

Sir, in this context, I would like to say that what is rea'ly needed is not just isolated effort in individual States but a national policy to ensure that revenue resources in the country as a whole keep pace with our expenditure on social services, routine administration and interest. There is imbalance in the whole country. So the National Development Council must evolve some policy to ensure that our revenue resources keep pace with our expenditure on social services, administration and interest or putting it the other way, our expenditure on social services, administration and interest should be within our revenue resources. Secondly loan finance, should be used for projects which yield adequate return, which I said so often, and I would like to emphasise again. There is very little chance of major irrigation projects coming up either in Mysore or in any other part of the country unless we can show that these projects can be made to give or yield an adequate return.

I think the expression deficit financing is being used very loosely. There can be no such thing as deficit financing so far as a State is concerned. It is a misnomer for anybody to talk of deficit financing at the State level because there can be no deficit financing at the State level. It is printing of notes and increasing the quantity of money which only the Central Government or the Reserve Bank can do. All that we can do is for the State to run overdrafts and the Central Government be indulgent towards these things. That is not deficit financing. There is no meaning to that expression at the State level. The thing which comes nearest to deficit financing at State level is illegal printing of notes by certain individuals who do not have any very great respect for law.

Now, Sir, I would like to spend a few minutes on this idea of what the agriculture sector is expected to do. It has been stated that a section of the agriculturists who are benefited could contribute more. This is the major impression in the country. Now, this needs to be clarified. I myself do not understand why there should be such wild divergence in the water rate from State to State. The divergence is of the order of Rs. 30 to Rs. 300. This is a thing which nobody will be able to satisfactorily explain. This is a legitimate area where common policy evolved by these four States is likely to benefit everybody. Now, so far as taxation is concerned, there are practical difficulties in separating the affluent farmer from the rest of the agriculturists. Take for instance the Thungabhadra project. We all think of Thungabhadra as irrigated area. Not many people know that a large number of ayacatdars do not get water and it is only when the water is utilised that taxable capacity goes up. It has been estimated that if one makes a capital investment of Rs. 500 per acre, it is possible to level all the land and bring water to every field. Rs. 500 per acre investment is not a big thing. If this is done the taxable capacity will be increased. Taxing is not a simple thing. There are so many complicated administrative problems. But the Administration should find feasible methods of increasing the income. I would say hile taxing the agriculturists, one has to be very cautious. I cannot

(SRI M. Y. GHORPADE)

resist the temptation of commenting on the tax on fertilizer imposed by the Central Government. It is extremely shortsighted and wrong and detrimental to farmers. I cannot understand the principle of the Centre in taxing fertilizer. It is well known that the price of fertiliser is several times higher than in many other countries. That being the case and also taking into account that we in India use only 1/90 of nutrients per acre as compared to Japan, I do not know how the Government of India thought of taxing fertilizer. Strictly speaking I should not comment on this because it is in the Central Budget. But agriculture is a State subject and it affects the Farmers. Therefore I am within my powers to comment on that Suffice it to say that any taxations direct or indirect, apart from the constitutional implications should be done in consultation with the States and nothing can be implemented without their co-operation. One has to be cautious while separating the affluent farmers and trying to increase the tax on them from out of their increased earnings one has to be very cautious about general taxation on agriculture.

In para 21 of the speech of the Finance Minister, he has said that steps have been taken to evolve a practical price policy in regard to maize. I am glad he has taken a very right step in regard to this commodity. The main reason for steep fall in the price of maize was, import of maize from other countries. Steps have been taken to stop this so that there will be stability in the price of this commodity. I take this opportunity to emphasise that unless the Central Government with the co-operation of the State Governments fixes the floor price for agricultural commodities, this kind of thing is bound to happen. Last year, there was no machinery to lift the surplus wheat in Punjab to other parts of the country. Such things could be avoided if precautionary measures are taken. Therefore fixing a remunerative floor price is a very important thing, otherwise the green revolution will fail.

Then I come to digging of wells for irrigation purposes. It is stated that about 20 thousand wells have been taken up. But the people want more wells. However this is a step in the right direction. It is stated that there is surplus power. It is likely to be temporary phase. I would emphasise that before the phase is over, something should be done about rural electrification in the Mysore State. We should take full advantage of the power.

In para 29, the Finance Minister has dealt with drinking water wells. I would congratulate the Government for having made provision to complete all the drinking wells and to provide wells to all the villages.

In para 46, the Finance Minister has asked whether Government should go on supporting public Sector Undertakings indefinitely even at the cost of other Sectors of the Economy. He has posed that question. I would like to put a different question. Why the public

Sector Undertakings should not make profit? The Finance Minister has stated that "Huge sums of money have been locked up in public sector undertakings. Out of a total investment of about Rs. 2,-41 crores at the end of 1966-67, nearly 40 per cent was attributed to Steel Industry. Why not these make profit is the question. Private people could not have invested so much money in the steel industry. Why these public sector industries are not making profit is to be examined. Even the Private Sector industries depend largely on finance from Centre. The difference is only in management and investment Planning. Even the Bhadravathi Iron and Steel works is not making as much profit as it ought to. The Estimates Committee of this Legislature is examining this question.

Regarding Mineral development, I want to say one or two words. The Central Government has planned to exploit mineral wealth. There is mineral wealth in Donimalai, Ramadurga and Kudremukh. The National Mineral Development Corporation charges an outlay of about Rs. 200 to 250 Crores on these three projects. It is equal to our State IV plan. It is clearly a Central responsibility. Our Government should press the Central Government to take up these projects expeditiously.

In para 66, the Finance Minister has stated that "concerted action is also necessary against those who are responsible for heavy overdues in certain areas which has come in the way of further inflow of credit and has done a positive harm to the growth of economy." I ask why don't you do it, because there is no difference of opinion on this. We expect the Government to give out what specific measures it is going to take in regard to a matter which has been so clearly and forcefully stated in para 66.

Then the Finance Minister has also said that all steps will be taken to avoid extravagance. I feel that this word extravagance has lost much of its meaning in the absence of clear-cut priorities of financing development on the basis of scientific norms. For this, I have already said enough as to what should be done and I hope that the NDC will take necessary corrective steps in this regard.

Before concluding, I wish to say that the problem of financial planning must be viewed in its totality and not in isolation. This is a thing which no State Government can solve by itself. This country is politically divided for administrative purposes. But so far as planning is concerned, if planning is to survive in this country, the whole country must be treated as one economic unit. There are no short-cut solutions to it. I do hope that the political leadership in the different States will rise to the occasion to protect planning and prosperity in our land.

I probably would not be going outside my field if I mentioned certain sad political activities that are taking place in the different States. Parochial disruptionist and fascist elements like SHIV SENA are masquerading in almost all the States in varying degrees and in varying forms—These are elements which are obviously disruptionist,

(SRI M. Y. GHORPADE)

parochial, narrow minded and fascist, and should not receive any quarter from the public or popular Governments in our country. I say this because, it is only when we have a happy climate that rational decisions can be taken and correct rational decisions are the secret of the success of planning, and the very survival of planning in our country. Thank you.

† ಶ್ರೀ ಕೆ. ಪಿ. ನಾಡಗೌಡ (ಮುಧೋಳ್).—ಸಭಾಧ್ಯಕ್ಷಿಣಿಯವರೇ, ಸಾಮಾನ್ಯವಾಗಿ ಬಜೆಟ್ಟಿನ ಮೇಲೆ ಮಾತನಾಡುವಾಗ ಬಜೆಟ್ಟಿನಲ್ಲಿ ಯಾವ ಯಾವ ಶಾಖೆಗೆ ಹಣವನ್ನು ಯಾವ ಯಾವ ರೀತಿಯಲ್ಲಿ ಹಂಚಿದ್ದಾರೆ, ಅದರಲ್ಲಿ ನ್ಯಾಯ ದೊರಕಿದೆಯೇ, ಇಲ್ಲವೇ, ಎಂಬ ಮಾತನ್ನು ಅರ್ಥ ಮಂತ್ರಿಗಳು ಮಂಡಿಸಿದ ಬಜೆಟ್ಟಿನಲ್ಲಿ ಕಂಡುಬರುತ್ತದೆ, ದೋಷವನ್ನು ಎತ್ತಿ ಸ್ಪಷ್ಟವಾಗಿ ತೋರಿಸ ಬಹುದು. ಆದರೆ ಈ ಬಜೆಟ್ಟನ್ನು ವಿರೋಧಿಸಿ ಮಾತನಾಡುವುದಕ್ಕಿಂತ ಅನಿವಾರ್ಯವಾಗಿ ನಾನು ಸ್ವಾಗತಿಸಿ ಮಾತನಾಡುತ್ತಿದ್ದೇನೆ. ಏಕೆಂದರೆ ವಿರೋಧಿಸಿ ಮಾತನಾಡಿದರೆ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗುವುದು. ಅಷ್ಟು ವಿನಾ ಇನ್ನೇನೂ ಇಲ್ಲ. ಈ ಬಜೆಟ್ಟಿನಲ್ಲಿ, ಬಜೆಟ್ ಭಾಷಣ ದಲ್ಲಿರುವ ಸ್ವಾಗತಾರ್ಹವಾದ ಅಂಶವೆಂದರೆ ಕಾಂಗ್ರೆಸ್ ಸರಕಾರ ತಪ್ಪುಮಾಡಿದ್ದನ್ನು ಈವರೆಗೆ ಒಪ್ಪಿಕೊಂಡಿರಲಿಲ್ಲ, ಸ್ವಲ್ಪಮಟ್ಟಿಗೆ ಅರ್ಥ ಮಂತ್ರಿಗಳು ಈಗ ಒಪ್ಪಿಕೊಂಡಿದ್ದಾರೆ, ಪಬ್ಲಿಕ್ ಸೆಕ್ಟಾರಿನಲ್ಲಿ ಹಾನಿಯಾಗುತ್ತಿದೆ ಎಂದು ಒಪ್ಪಿದ್ದಾರೆ. ಶಿಕ್ಷಣದ ಬಗ್ಗೆ ಹೇಳುತ್ತಾ ಗುಣಮಟ್ಟದಲ್ಲಿ ಅದು ಕೆಳಗಿಳಿದಿವೆ ಎಂದು ಒಪ್ಪಿಕೊಂಡಿದ್ದಾರೆ. ಪ್ರಗತಿಯನ್ನು ಸಾಧಿಸಲು ತಪ್ಪನ್ನು ಒಪ್ಪಿಕೊಂಡಿರು ವುದು ಬಜೆಟ್ಟಿನ ಭಾಷಣದಲ್ಲಿ ಕಂಡುಬರುತ್ತದೆ ಇದು ಆನಂದದ ಸಂಗತಿ.

ಇನ್ನು ಶಿಕ್ಷಣ ಶಾಖೆಯ ಮೇಲೆ ಮಾತನಾಡಬೇಕಾದರೆ, ಈ ಸಲ 325 ಗ್ರ್ಯಾಜುಯೇಟ್ ಟೀಚರ್ಸನ್ನು ಪ್ರೈಮರಿ ಶಾಲೆಗಳಿಗೆ ಹೆಡ್ ಮಾಸ್ಟರುಗಳಾಗಿ ನೇಮಕಮಾಡುವುದಾಗಿ ಹೇಳಿದ್ದಾರೆ. ಇದನ್ನು ಬಹಳ ಯೋಗ್ಯ ರೀತಿಯಿಂದ ಹೇಳಿ ಮಂತ್ರಿಗಳು ಮಾಡಿ ತೋರಿಸುತ್ತಿದ್ದಾರೆ. ಮುಧೋಳ್ ತಾಲ್ಲೂಕಿನಲ್ಲಿ ಮಾಲಿಂಗಪುರ, ಮುಧೋಳ್ ಮತ್ತು ಲೋಕಾಪುರ ಎಂಬ 3 ದೊಡ್ಡ ಪಟ್ಟಣಗಳಿವೆ. ಲೋಕಾಪುರ ಮತ್ತು ಮಾಲಿಂಗಪುರ ಪ್ರೈಮರಿ ಶಾಲೆಗಳಲ್ಲಿ ಗ್ರ್ಯಾಜುಯೇಟ್ ಉಪಾಧ್ಯಾಯರನ್ನು ನೇಮಕಮಾಡಿದ್ದಾರೆ. ಆದರೆ ತಾಲ್ಲೂಕು ಹೆಡ್‌ಕ್ವಾರ್ಟರಾಗಿರುವ ಮುಧೋಳ್‌ನಲ್ಲಿ ನೇಮಕ ಮಾಡಿಲ್ಲ. ಮಹಾಕವಿಚಕ್ರವರ್ತಿ ರನ್ನನಿಗೆ ಜನ್ಮ ಕೊಟ್ಟಿರುವ ಅಂಥ ಪಟ್ಟಣದಲ್ಲಿ ಪ್ರೈಮರಿ ಶಾಲೆಗೆ ಒಬ್ಬ ಪದವೀಧರ ಹೆಡ್‌ಮಾಸ್ಟರನ್ನು ನೇಮಕಮಾಡಿಲ್ಲ ಯಾರನ್ನೊ ನೇಮಕಮಾಡಿದ್ದಾರೆ, ಅಲ್ಲಿ ಹೊಸ ಧೋರಣೆ ಪ್ರಕಾರ ಸರಿಯಾದವರನ್ನು ನೇಮಕಮಾಡಿಲ್ಲ. ಏಕೆಂದರೆ ಈ ಮಂತ್ರಿ ಮಂಡಲದಲ್ಲಿ ನಮ್ಮ ಜಿಲ್ಲೆ ವಿಷಯದಲ್ಲಿ, ಉತ್ತರ ಕರ್ಣಾಟಕ ಜಿಲ್ಲೆ ವಿಷಯದಲ್ಲಿ ಸಲಹೆ ಕೊಡುವ ಮಂತ್ರಿಗಳಿದ್ದಾರೆ, ಅವರು ಶಕುನಿಯಂತೆ ಕೆಲಸಮಾಡುತ್ತಿದ್ದಾರೆ. ಅವರು ಯಾರೆಂದರೆ ಸಹಕಾರ ಮಂತ್ರಿಗಳಾದ ನಾಡಗೌಡರು. ಬಾಗಲುಕೋಟೆ ತಾಲ್ಲೂಕಿನಲ್ಲಿ ಚುನಾವಣೆಯಾದಾಗ ಮತಗಳ ಎಣಿಕೆ ಆಗುವಾಗ ಅವರನ್ನು ಹೊರಗೆ ಕೂಡಿರಿ ಎಂದು ಸಂಬಂಧಪಟ್ಟ ಆಫೀಸರು ಹೇಳಿದರಂತೆ. ಅವರು ಇನ್ನೊಂದು ಖಾತೆಯ ಮಂತ್ರಿಗಳಾದ ಕೌಜಲಗಿ ವಿಚಾರದಲ್ಲಿ ಪ್ರವೇಶಿಸಿ ಅವರ ಫೈಲನ್ನು ಡೀಲ್ ಮಾಡಬಹುದೇ ? ತಮಗೆ ತೊಂದರೆ ಮಾಡಿದವರಿಗೆ ವರ್ಗಮಾಡಲು ಅವರು ಪ್ರಯತ್ನಮಾಡ ಬಹುದೇ ಎಂಬುದನ್ನು ವಿಚಾರಮಾಡಬೇಕು. ಶಿಕ್ಷಣ ಮಟ್ಟವನ್ನು ಸುಧಾರಣೆ ಮಾಡಬೇಕು ಎಂದು ಹೇಳುವಾಗ ಮಂತ್ರಿಗಳು ನಿಜವಾಗಿಯೂ ಕೂಡ ಆಡಳಿತದಲ್ಲಿ ಕೈಹಾಕಬಾರದು. ಒಬ್ಬರ ಶಾಖೆಯಲ್ಲಿ ಇನ್ನೊಬ್ಬ ಮಂತ್ರಿಗಳು ಕೈಹಾಕಬಾರದು. ಮಂತ್ರಿಗಳು ತಮ್ಮ ಹೆಸರನ್ನು ಉಳಿಸಿ ಕೊಳ್ಳುವುದಕ್ಕಾಗಿ ಮಾಡಬಾರದ ಕೆಲಸ ಮಾಡಬಾರದು.

ಇನ್ನು ದೊಡ್ಡ ನೀರಾವರಿ ಸಲುವಾಗಿ ಸುಮಾರು 13 ಕೋಟಿ ರೂಪಾಯಿಗಳನ್ನು ಅಂದಾಜು ಪತ್ರದಲ್ಲಿ ಕೊಟ್ಟಿದ್ದಾರೆ. ಅದರಲ್ಲಿ ಘಟಪ್ರಭ ನದಿಗೆ ಒಡ್ಡುಹಾಕುವುದಕ್ಕೆ 3 ಕೋಟಿ, ಮಲಪ್ರಭ ಯೋಜನೆಗೆ ಎರಡೂವರೆ ಕೋಟಿ, ಅಪ್ಪರ್ ಕೃಷ್ಣ ಯೋಜನೆಗೆ 2 ಕೋಟಿ ಹೀಗೆ ಸುಮಾರು 8 ಕೋಟಿ ರೂಪಾಯಿಗಳ ಅಂದಾಜಿದೆ, 5 ಕೋಟಿ ರೂಪಾಯಿಗಳು ಬೇರೆಬೇರೆ ಸ್ಥಳಗಳಲ್ಲಿ ಬೇರೆಬೇರೆ ನೀರಾವರಿ ಯೋಜನೆಗಳಿಗೆ ಎಂದು ಗೊತ್ತುಮಾಡಿದ್ದಾರೆ.

ಈ ಸಂದರ್ಭದಲ್ಲಿ ಸರ್ಕಾರದವರಿಗೆ ಒಂದು ಸಲಹೆಯನ್ನು ಕೊಡಬಯಸುತ್ತಾ ಇದ್ದೇನೆ. 5 ಕೋಟಿ ರೂಪಾಯಿ ಎಂದರೆ ಬಹಳ ಸಣ್ಣ ಮೊತ್ತ ಎಂದು ತಿಳಿದುಕೊಳ್ಳಬಾರದು, ಈ 5 ಲಕ್ಷ ರೂಪಾಯಿಗಳಿಂದ ಎಲ್ಲೆಲ್ಲಿ ಏನೇನು ಮಾಡಿತು ಅನ್ನುವುದರ ಬದಲಾಗಿ ಇದೇ ಹಣವನ್ನು ಖರ್ಚು

ಮಾಡಿದ್ದೇ ಆದರೆ ಮಲಪ್ರಭಾ ಮತ್ತು ಘಟಪ್ರಭಾ ಈ ಎರಡು ಯೋಜನೆಗಳೂ ಕೂಡ ಮುಗಿದು ಹೋಗಬಹುದು, ಈ ಅಣೆಕಟ್ಟು ಮುಗಿಯುವುದರೊಳಗಾಗಿ ಬಲದಂಡೆ ಮತ್ತು ಎಡದಂಡೆ ಕಾಲುವೆಗಳನ್ನು ಅಗೆಯುವುದಕ್ಕೆ ಈಗಿನಿಂದಲೇ ಪ್ರಾರಂಭ ಮಾಡಿದರೆ ಅಲ್ಲಿನ ರೈತರಿಗೆ ಒಮ್ಮೆಲೆ ನೀರಾವರಿ ಸೌಲಭ್ಯ ಸಿಕ್ಕುತ್ತದೆ ಮತ್ತು ಒಕ್ಕಲಿಗರ ಅಭಿವೃದ್ಧಿಯಾಗುತ್ತದೆ, ದೊಡ್ಡ ಲಾಭವಾಗುತ್ತದೆ ಎಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರುತ್ತಾ ಇದ್ದೇನೆ.

ಇನ್ನು ಆಡಳಿತೆಯಲ್ಲಿ ದೋಷ ಕಂಡುಬಂದಿರುವುದು. ಮಂತ್ರಿಗಳ ಕೈವಾಡ ಬಹಳ ಇದೆ. ಎಲ್ಲಿ ತಮಗೆ ಬೇಕಾದವರು ಇದ್ದಾರೋ ಅವರು ಎಲ್ಲಿ ಇಷ್ಟಪಡುತ್ತಾರೋ ಅಲ್ಲಿ ಇರುವುದಕ್ಕೆ ಅವಕಾಶ ಇದೆ. ಆಯಾ ತಾಲ್ಲೂಕಿನಲ್ಲಿ ಅವರು ಉತ್ತಮವಾಗಿ ಕೆಲಸ ಮಾಡುವುದಿಲ್ಲ ಎಂದು ಹೇಳಿ ಆ ತಾಲ್ಲೂಕಿನ ಪ್ರತಿನಿಧಿಗಳು ಬಂದು ಹೇಳಿದಾಗ ವಿರೋಧ ಪಕ್ಷದವರು ಹೇಳುತ್ತಾರೆ ಅಂತ ತಿಳಿದುಕೊಂಡು ಅವರನ್ನು ಅಲ್ಲಿಯೇ ಇಡುವುದು, ಉತ್ತಮವಾಗಿ ಕೆಲಸಮಾಡುವವರನ್ನು ಬೇರೆ ಕಡೆಗೆ ವರ್ಗಾಯಿಸುವುದು ಕಂಡುಬರುತ್ತಾ ಇದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತಾ ಇದ್ದೇನೆ. ಶುದ್ಧವಾದ ಆಡಳಿತೆಯನ್ನು ರಾಜ್ಯದಲ್ಲಿ ಇಟ್ಟುಕೊಂಡು ಹೋಗಬೇಕೆನ್ನುವ ಇಚ್ಛೆ ಅವರಿಗೆ ಇದ್ದದ್ದೇ ಆದರೆ ಅವರು ತಮಗೆ ಇರತಕ್ಕ ಶಾಖೆಗಳ ಪೈಕಿ ಕೆಲವನ್ನು ಬೇರೊಬ್ಬ ಮಂತ್ರಿಗಳಿಗೆ ಒಪ್ಪಿಸಿಕೊಟ್ಟು ಆಡಳಿತ ಸುಧಾರಣಾ ಸಮಿತಿಯವರು ಏನು ಶಿಫಾರಸು ಮಾಡಿದ್ದಾರೆಯೋ ಆ ಪ್ರಕಾರ ಕೆಲಸ ಮಾಡಬೇಕು. ಏಕೆಂದರೆ ಅವರು ಈ ಮಂತ್ರಿಮಂಡಲವನ್ನು ರಚನೆ ಮಾಡುವಾಗ ತಮಗೆ ಎಷ್ಟು ಎಷ್ಟು ಜನ ಎಂ. ಎಲ್. ಎ. ಗಳು ಸಹಾಯ ಮಾಡುತ್ತಾರೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಇಷ್ಟು ಮಂತ್ರಿಗಳ ಸ್ಥಾನವನ್ನು ಭರ್ತಿ ಮಾಡಿಕೊಂಡಿದ್ದಾರೆ. ಒಂದು ಉದಾಹರಣೆ ಹೇಳುವುದಾದರೆ, ಸಹಕಾರ ಮಂತ್ರಿಗಳ ಮನೆಗೆ ತಾವು ಸಹ ಹೋಗಿ, ಕನ್ನಡ ಶಾಲೆಯ ಮಾಸ್ತರು ಅಲ್ಲ, ಸೊಸೈಟಿ ಸೆಕ್ರೆಟರಿಗಳು ಅಲ್ಲ, ಆಫೀಸರುಗಳು ತಮ್ಮ ಕಾರನ್ನು ಕ್ಯೂ ಹಚ್ಚಿಕೊಂಡು ಅವರ ಬಂಗಲೆಯಲ್ಲಿ ಅವರಿಗಾಗಿ ಕಾಯುತ್ತಾ ಇರುವುದನ್ನು ಕಾಣಬಹುದು. ಹೀಗಾದರೆ ಆಡಳಿತ ಎಷ್ಟು ಹದಗೆಟ್ಟಿದೆ ಎಂಬುದನ್ನು ತಾವೇ ವಿಚಾರ ಮಾಡಿಕೊಳ್ಳಿ. ಇದಕ್ಕೆ ಕಾರಣವೇನೆಂದರೆ ಅವರು ಏನಿದ್ದರೂ ಮಾಡಿಕೊಡುತ್ತಾರೆ, ಅಯೋಗ್ಯವಾದದ್ದು ಇದ್ದರೂ ಸುದಾ ಮಾಡಿಕೊಡುತ್ತಾರೆ. ಒಬ್ಬ ಆಫೀಸರನ್ನು ಒಂದು ಜಿಲ್ಲೆಯಿಂದ ಕಿತ್ತಿ ಇನ್ನೊಂದು ಜಿಲ್ಲೆಗೆ ಹಾಕುವಾಗ ತಮಗೆ ಬೇಡವವರನ್ನು ರೀಪ್ಲೇಸ್ ಮಾಡಲು ಪ್ರಯತ್ನ ಮಾಡಿದರೆ ಅದರಿಂದಾಗತಕ್ಕ ಅನಾನುಕೂಲತೆಯನ್ನು ಗಮನದಲ್ಲಿಟ್ಟುಕೊಳ್ಳಬೇಕು. ಹಾಗೆ ಮಾಡದೆ ಇವರು ತಮ್ಮವರು ತಮಗೆ ಬೇಕಾದಂತೆ ಸಹಾಯ ಮಾಡಬೇಕು ಎಂಬ ಮನೋವೃತ್ತಿಯನ್ನು ಇಟ್ಟುಕೊಂಡರೆ ನಿಜವಾಗಿಯೂ ಕಲ್ಯಾಣ ರಾಜ್ಯವನ್ನು ಕಟ್ಟಬೇಕೆಂದು ನಮ್ಮ ಸರ್ಕಾರದವರು, ಕೇಂದ್ರ ಸರ್ಕಾರದವರು ಮತ್ತು ನಮ್ಮ ರಾಷ್ಟ್ರದ ನಾಯಕರು ಏನು ಉದ್ದೇಶ ಇಟ್ಟುಕೊಂಡಿದ್ದಾರೆ ಅದು ಸಾಧ್ಯವಾಗದ ಮಾತಾಗುತ್ತದೆ. ತಮ್ಮನ್ನೇ ತಾವು ತಿಳಿದುಕೊಳ್ಳದೇ ಇರತಕ್ಕ ಜನರಿಂದ ಕಲ್ಯಾಣ ರಾಜ್ಯವಾಗುವುದಿಲ್ಲ. ಮಂತ್ರಿಗಳ ಸ್ಥಾನಕ್ಕೆ ಅರ್ಹತೆ ಇದ್ದ ಜನ ಬೇಕು ಅನ್ನುವಂತಹ ಮಾತಿಗೆ ಮಹಾಭಾರತದಲ್ಲಿ ಒಂದು ಪದ್ಯ ಬರುತ್ತದೆ ಅದನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಅದು ಈ ರೀತಿ ಇದೆ:—

> ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯಾಲೋಚನಕ್ಕಾಳ್ದನು।
> ವರೆಯಂ ಕಾವಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯಾಳ್॥
>
> ಗುರುಭಾರರ್ವೆರಿವಾಳ್ ರಣಕ್ಕೆ ತುಳಿವಾಳ್ ಕಟ್ಟಾಯದೋಳ್ ಮೇಳದಾಳ್।
> ಪರಿಹಾಸಕ್ಕೆವಿದರ್ನೆಂತು ಮರೆವಂ ದುರ್ಯೋಧನಂ ಕರ್ಣನಂ॥

ಗುರು ದೀಕ್ಷಾ ವಿಧಿಗಳನ್ನು ಕೊಡಬೇಕಾಗಿದ್ದರೆ ಆತ ಗುರುವಾಗಿರಬೇಕು. ಅದೇ ರೀತಿ ಮಂತ್ರಿಗಳು ಯಾವುದಾದರು ಉದ್ಘಾಟನೆ ಮಾಡಬೇಕಾಗಿದ್ದರೆ, ಫೌಂಡೇಷನ್ ಹಾಕುವಾಗ ಹೋಗಿ ಆ ಸ್ಥಾನವನ್ನು ಪರೀಕ್ಷೆ ಮಾಡಿ ನಂತರ ಮುಂದಿನ ಕೆಲಸಕಾರ್ಯಗಳನ್ನು ಮಾಡಬೇಕು. ಮಂತ್ರಿಗಳು ಬಂದಿದ್ದಾರೆ ಎಂದು ಎಷ್ಟೋ ಜನ ಸಾರ್ವಜನಿಕರು ಆ ಸಮಾರಂಭಗಳಿಗೆ ಬರುತ್ತಾರೆ ಅಲ್ಲಿ ದೋಷ ಏನೇ ಇದ್ದರೂ ಅದನ್ನು ಗಮನಿಸುವುದಿಲ್ಲ, ಸರಿಯಾಗಿ ನೆಲ ಅಗಿದಿರುವುದಿಲ್ಲ ಅಲ್ಲಿಯೇ ಎಲ್ಲೋ ಒಂದು ಕಡೆ ಕಲ್ಲನ್ನು ಇಟ್ಟು ಮಾನ್ಯ ಮಂತ್ರಿಗಳು ಬರುತ್ತಾರೆ, ಇದು ಸರ್ವಥಾ ಸರಿಯಾದ್ದಲ್ಲ. ಅಲ್ಲಿ ಕಟ್ಟಡ ಕಟ್ಟಿದರೆ ಬಾಳಬಹುದೇ ಎಂಬುದನ್ನು ನೋಡಿಕೊಂಡು ಫೌಂಡೇಷನ್ ಹಾಕ್ರಿ. ಆ ರೀತಿ ಮಾಡದೇ ಹೋದರೆ ನಿಮ್ಮ ಹೆಸರಿಗೆ ಒಳ್ಳೆಯ ಕೀರ್ತಿ ಬರುವುದಿಲ್ಲ. ಮಾನ್ಯ ಮಂತ್ರಿಗಳು ಯಾವ ರೀತಿ ಇರಬೇಕೆನ್ನುವುದನ್ನು ತಿಳಿದುಕೊಳ್ಳಬೇಕು.

(ಶ್ರೀ ಕೆ. ಪಿ. ನಾಡಗೌಡ)

ಬೆಳಗಾಂ ಶಹರದ ಮುನಿಸಿಪಾಲಿಟಿಯವರು ಒಂದು ಠರಾವನ್ನು ಮಾಡಿಕೊಂಡಿದ್ದಾರೆ, ಶಿವಸೇನೆ ಮಾಡಿದ ಕೃತ್ಯ ಯೋಗ್ಯ ಅನ್ನುವಂತಹ ರೀತಿಯಲ್ಲಿ ಠರಾವು ಮಾಡಿದ್ದಾರೆ, ಅಂತಹ ಕಡೆ ಇಂಡಸ್ಟ್ರೀಸನ್ನು ಬೆಳೆಸಬೇಕೆಂದು ಅನ್ನುತ್ತೀರಿ, ಮಹಾರಾಷ್ಟ್ರದಿಂದ ಇಂಡಸ್ಟ್ರಿಯಲಿಸ್ಟ್ಸನ್ನು ತಂದು ಬೆಳಗಾಂವಂತಹ ಊರನಲ್ಲಿ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೇ ಆದರೆ ಮಹಾರಾಷ್ಟ್ರಿಗರ ಸಂಖ್ಯೆ ಅಲ್ಲಿ ಮತ್ತಷ್ಟು ಬೆಳೆದು ಬೆಳಗಾಂ ನಮ್ಮ ಕೈ ಬಿಡುವ ಸಂಭವ ಬರುತ್ತದೆ. ಮೈಸೂರಿನವರು ಯಾರಾದರೂ ಇಂಡಸ್ಟ್ರಿಯಲಿಸ್ಟ್ಸ ಇದ್ದರೆ ಅವರಿಗೆ ಸರ್ಕಾರದವರು ಸಾಕಾದಷ್ಟು ಮದತ್ತು ಮಾಡಿ ಬೆಳಗಾಂನಲ್ಲಿ ಇಂಡಸ್ಟ್ರೀಗಳನ್ನು ತೆರೆಯಿರಿ. ನಿಮಗೆ ಬೇಕಾದಷ್ಟು ಸೌಲಭ್ಯಗಳನ್ನು ಕೊಡುತ್ತೇವೆ ಎಂದು ಹೇಳಿರಿ. ಕನ್ನಡ ಜನತೆ ಅಲ್ಲಿ ಹೆಚ್ಚು ಪ್ರಮಾಣದಲ್ಲಿ ಬೆಳೆಯುವಂತೆ ಮಾಡಿರಿ ಅಂದರೆ ಬೆಳಗಾಂ ನಿಮ್ಮ ಕೈ ಬಿಡುವುದಿಲ್ಲ ಎಂದು ಹೇಳಿ ಸ್ವಲ್ಪ ಸಮಯ ಹೆಚ್ಚು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎ. ಆರ್. ಬದರೀನಾರಾಯಣ್ (ಶಿವಮೊಗ್ಗ).—ಮಾನ್ಯ ಸಭಾಪತಿಗಳೇ, ಆರ್ಥಿಕ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರತಕ್ಕ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನಾಲ್ಕು ಮಾತುಗಳನ್ನು ಹೇಳಬೇಕೆಂದು ನಿಂತಿದ್ದೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಬಹಳ ಸಮಂಜಸವಾಗಿ, ಬಹಳವಾಗಿ ಯೋಚನೆ ಮಾಡಿ ಈ ಒಂದು ಪಟ್ಟಿಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಒಂದು ರಾಜ್ಯದ ಒಂದು ದೇಶದ ಆಯವ್ಯಯ ಪಟ್ಟಿಯನ್ನು ತಯಾರು ಮಾಡಬೇಕಾಗಿದ್ದರೆ ಅದರಲ್ಲಿರತಕ್ಕ ತೊಡಕುಗಳು ಎಷ್ಟರಮಟ್ಟಿಗೆ ಇವೆ, ಅದನ್ನು ಹೇಗೆ ನಿವಾರಣೆ ಮಾಡಬೇಕೆನ್ನುವುದನ್ನು ಆರ್ಥಿಕ ಮಂತ್ರಿಗಳು ಬಹಳವಾಗಿ ತುಲನೆ ಮಾಡಿ ಅದನ್ನು ತೀರ್ಮಾನ ಮಾಡಬೇಕಾಗುತ್ತದೆ. ಈಗ ನಮ್ಮ ಈ ಸುಖೀ ರಾಜ್ಯದಲ್ಲಿ ಜನಗಳು ಏನು ಆಶೋತ್ತರಗಳನ್ನು ಇಟ್ಟುಕೊಂಡಿದ್ದಾರೆ ಅವೆಲ್ಲವನ್ನೂ ಆದಷ್ಟು ಬೇಗ ಸಫಲಗೊಳಿಸಬೇಕೆನ್ನುವಾಗ ನಮ್ಮ ಮುಂದೆ ಇರತಕ್ಕ ಖರ್ಚಿನ ಪಟ್ಟಿಯ ಪ್ರಕಾರ ಸುಮಾರು 220 ಕೋಟಿ ರೂಪಾಯಿಗಳ ಖರ್ಚು ಇದೆ. ವಿದ್ಯಾಭ್ಯಾಸ ಮುಂದುವರಿಯಬೇಕು, ಕೈಗಾರಿಕೆಗಳು ಮುಂದುವರಿಯಬೇಕು, ಆರೋಗ್ಯ ಸಹಾಯ ಹೆಚ್ಚಬೇಕು ಹೀಗೆ ಸುಖೀ ರಾಜ್ಯದಲ್ಲಿ ಬೇಕಾದಂತಹ ಅನೇಕಾನೇಕ ಕೆಲಸಗಳನ್ನು ಮಾಡಬೇಕಾಗಿದೆ. ಅದಕ್ಕೆ ಹಣವನ್ನು ಎಲ್ಲಿಂದ ತರುವುದು ? ಹೇಗೆ ತರುವುದು ? ಇದನ್ನು ಮಾನ್ಯ ಆರ್ಥಿಕ ಮಂತ್ರಿಗಳು ಪರೀಕ್ಷೆ ಮಾಡಿ ಜನಗಳಿಗೆ ಹೆಚ್ಚು ಹೊರೆ ಇಲ್ಲದಂತೆ, ಜನಗಳಿಂದ ಹೆಚ್ಚು ಆಕ್ಷೇಪಣೆ ಬರದಂತೆ ಅದರ ಕಡೆಗೆ ಗಮನ ಕೊಟ್ಟು ಈ ಆಯವ್ಯಯ ಪಟ್ಟಿಯನ್ನು ತಯಾರು ಮಾಡಿದ್ದಾರೆ. ತೆರಿಗೆಗಳಿಂದ ರಾಜ್ಯವನ್ನು ನಡೆಸಬೇಕು, ಸಾಲತಂದು ರಾಜ್ಯವನ್ನು ನಡೆಸಬೇಕು ಅಥವಾ ಕೇಂದ್ರದಿಂದ ಗ್ರಾಂಟುಗಳನ್ನು ಪಡೆದು ರಾಜ್ಯವನ್ನು ನಡೆಸಬೇಕು. ಹೀಗೆ ಗಹನವಾದ ಅನೇಕ ಪ್ರಾಬ್ಲಂಗಳಿವೆ. ಜನರು ನಿರೀಕ್ಷಣೆ ಮಾಡುವ ಮಟ್ಟದಲ್ಲಿ ಅವರಿಗೆ ಪರಿಹಾರಗಳನ್ನು ಒದಗಿಸಬೇಕಾಗಿದ್ದರೆ ಅಷ್ಟಕ್ಕೆಲ್ಲ ಸರ್ಕಾರ ಹಣವನ್ನು ಎಲ್ಲಿಂದ ತರಬೇಕೆಂಬುದನ್ನು ನಾವೆಲ್ಲರೂ ಆಲೋಚನೆ ಮಾಡಬೇಕಾದಂಥ ವಿಚಾರ ಇದು. ರಾಜ್ಯದ ಆಡಳಿತವನ್ನು ನಡೆಸತಕ್ಕವರು ಕಾಂಗ್ರೆಸ್ ಪಕ್ಷದವರಾಗಲಿ ಅಥವಾ ಬೇರೆ ಇನ್ನಾವ ಪಕ್ಷದವರೇ ಆಗಲಿ ಅವರಿಗೆ ಈ ದೇಶಾಭ್ಯುದಯ ಕೆಲಸಕಾರ್ಯಗಳಿಗೆ ಹಣವನ್ನು ಎಲ್ಲಿಂದ ಹೇಗೆ ಒದಗಿಸಬೇಕು ಎಂಬುದು ಒಂದು ಬಹಳ ದೊಡ್ಡ ಸಮಸ್ಯೆ. ಅದಕ್ಕೆ ಯಾವ ರೀತಿಯ ಪರಿಹಾರೋಪಾಯಗಳನ್ನು ಸೂಚಿಸಬೇಕು ಎಂಬುದನ್ನು ಕುರಿತು ನಾವೆಲ್ಲರೂ ಇಂದು ಸರ್ಕಾರಕ್ಕೆ ರಚನಾತ್ಮಕವಾದ ಸಲಹೆಗಳನ್ನು ನೀಡಬೇಕಾಗಿದೆ. ಯಾವ ಹೊಸ ತೆರಿಗೆಗಳನ್ನೂ ಹಾಕಬಾರದು, ಹಾಲಿ ಇರತಕ್ಕ ತೆರಿಗೆ ದರಗಳನ್ನು ಹೆಚ್ಚಿಸಲೂಬಾರದು ; ಸರ್ಕಾರ ಹೆಚ್ಚಿಗೆ ಸಾಲವನ್ನೂ ಮಾಡಬಾರದು, ಹೆಚ್ಚು ತೆರಿಗೆಯನ್ನು ಕೊಡುವುದಕ್ಕೆ ಜನರಲ್ಲಿ ಶಕ್ತಿ ಇಲ್ಲದಿರುವಾಗ ಹೊಸ ತೆರಿಗೆಗಳನ್ನು ಹಾಕುವಂತಿಲ್ಲ—ಆದಾಗ್ಯೂ ಜನತೆಗೆ ಅತ್ಯಗತ್ಯವಾಗಿ ಬೇಕಾದ ನೀರಾವರಿ ಸೌಲಭ್ಯಗಳನ್ನು ಇತರೇ ಸೌಲಭ್ಯಗಳನ್ನು ಮಾತು ತಪ್ಪದೆ ಒದಗಿಸಬೇಕು. ಕೆರೆಕಟ್ಟೆಗಳಾಗಬೇಕು, ಬಾವಿಗಳಾಗಬೇಕು ಅಂದರೆ ಅದು ಹೇಗೆ ಸಾಧ್ಯ? ಅವಕ್ಕೆಲ್ಲಾ ಹಣ ಎಲ್ಲಿಂದ ಬರಬೇಕು ? ಈ ಕೆಲಸಕಾರ್ಯಗಳಿಗೆಲ್ಲಾ ಅರ್ಥಮಂತ್ರಿಗಳಿಗೆ ಹಣ ಬೇಕೆಂದು ಅವರೇನಾದರೂ ತೆರಿಗೆಗಳನ್ನು ಹಾಕಿದರೆ, ಈ ಮಂತ್ರಿಗಳು ಕಾಲಧರ್ಮಕ್ಕೆ ಗಮನ ಕೊಡುತ್ತಿಲ್ಲ—ಹಿಂದಿನ ಕಂದಾಚಾರ ಪದ್ಧತಿಗಳನ್ನೇ ಈಗಲೂ ಮುಂದುವರಿಸಿಕೊಂಡು ಬರುತ್ತಿದ್ದಾರೆ, ಇವರು ತಮ್ಮ ಸರ್ಕಾರದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಯಾವ ಅಂಥ ಒಂದು ಹೊಸ ಪ್ರಯೋಗವನ್ನೂ ಮಾಡಲಿಲ್ಲ ಎಂದು ಜನರು ಟೀಕೆಗಳನ್ನು ಮಾಡಬಹುದು – ಮಾಡಿಯೂ ಮಾಡುತ್ತಾರೆ. ಹಾಗೆ ಒಂದು ಕಡೆ ಟೀಕೆಗಳನ್ನು ಮಾಡತಕ್ಕವರೂ ನಾವೇ—ಇತ್ತ ಇನ್ನೊಂದು ಕಡೆ ದೇಶದಲ್ಲಿ ವಿದ್ಯಾಭಿವೃದ್ಧಿ ನಡೆಯುತ್ತಿಲ್ಲ, ಕೈಗಾರಿಕಾಭಿವೃದ್ಧಿ ಆಗುತ್ತಿಲ್ಲ ಎಂದು ಟೀಕೆಗಳನ್ನು

ಮಾಡತಕ್ಕವರೂ ನಾವೇ. ಅಂದಾಗ ಇದನ್ನು ಬಿಡಿಸತಕ್ಕವರು ಯಾರು? ಇದನ್ನು ಹೇಗೆ ಬಿಡಿಸಬೇಕೆಂಬುದನ್ನು ಟೀಕೆ ಮಾಡತಕ್ಕ ನಾವೇ ಆಲೋಚಿಸಬೇಕಾದಂಥ ವಿಷಯ ಇದು. ಯಾವ ಮಾರ್ಗವನ್ನು ನಾವು ಹಿಡಿದರೆ ಜನರ ಆಶೋತ್ತರಗಳನ್ನು ಸುಲಭವಾಗಿ ಈಡೇರಿಸಬಹುದು ನಮಗೆ ಇರತಕ್ಕ ವರಮಾನದ ಬಾಬುಗಳಲ್ಲಿ ಎಲ್ಲಿ ಯಾವುದನ್ನು ಹೇಗೆ ವಾಪರ್ಾಡು ಮಾಡಿಕೊಳ್ಳಬೇಕು ಎಂಬುದನ್ನೆಲ್ಲಾ ಪರಿಶೀಲನೆ ಮಾಡಿ ನಾವು ಸರ್ಕಾರಕ್ಕೆ ರಚನಾತ್ಮಕ ಸಲಹೆಗಳನ್ನು ಕೊಟ್ಟರೆ ಸರ್ಕಾರದ ಪರವಾಗಿ ಅರ್ಥಮಂತ್ರಿಗಳು ಅದನ್ನು ಪರಿಗ್ರಹಿಸಬಹುದು. ಇದಕ್ಕೆಲ್ಲಾ ಬುದ್ಧಿಯನ್ನು ಖರ್ಚುಮಾಡಿ ಆಲೋಚನೆ ಮಾಡಬೇಕು. ದೇಶದ ಆಡಳಿತವನ್ನು ನಡೆಸುವುದು ಎಷ್ಟು ಕಷ್ಟಕರವಾದದ್ದು ಎಷ್ಟು ಜಟಿಲವಾದದ್ದು ಅನ್ನುವುದು ಜನರಿಗೆ ಈ ಮಟ್ಟಕ್ಕೆ ಬಂದಾಗ ಅರಿವಾಗಬಹುದು. ನಮ್ಮ ರಾಜ್ಯ ಸರ್ಕಾರದವರು ನನಗೆ ಅನಿಸುತ್ತಿದೆ ಆ ಹಿಂದಿನ ಯಾವತ್ತೂ ಅನುಸರಿಸುತ್ತಿದ್ದ ಆ ಹಳೆಯ ಮಾರ್ಗಗಳನ್ನೇ ತಮ್ಮ ವರಮಾನಕ್ಕಾಗಿ ಈಗಲೂ ಅನುಸರಿಸುತ್ತಿದ್ದಾರೆಂದು ಅನಿಸುತ್ತಿದೆ. ಆ ರ್ಯಾಂಡ್ ರೆವಿನ್ಯೂ, ಆದಾಯ ತೆರಿಗೆ, ಮಾರಾಟ ತೆರಿಗೆ, ಸೆಂಟ್ರಲ್ ಗ್ರ್ಯಾಂಟ್ಸ್ ಮತ್ತು ಕೇಂದ್ರದಿಂದ ನಮ್ಮ ರಾಜ್ಯಕ್ಕೆ ಬರಬೇಕಾದ ಆದಾಯದ ಪಾಲು ಇತ್ಯಾದಿಗಳೇ ನಮ್ಮ ಬಲವಾದ ಮಾರ್ಗಗಳಾಗಿದ್ದಂತೆ ಭಾಸವಾಗುತ್ತಿದೆ. ಇದು ಸರಿಯಾದ್ದಲ್ಲ. ನಾವು ಇಲ್ಲಿಯತನಕ ಈ ನಾನ್ ಟ್ಯಾಕ್ಸ್ ಬಾಬುಗಳಿಗೆ ಅಷ್ಟು ಹೆಚ್ಚಿನ ಗಮನವನ್ನು ಹರಿಸಿಲ್ಲ. ನಮ್ಮ ಅರ್ಥ ಸಚಿವರು ಒದಗಿಸಿರತಕ್ಕ ಈ ಕೈಪಿಡಿಯಲ್ಲಿ ನೆಟ್ ರೆವಿನ್ಯೂ ಫ್ರಂ ಇಂಡಸ್ಟ್ರಿಯಲ್ ಕನ್‌ಸರ್ನ್ಸ್ ಎಂದು ಹೇಳಿ ಪ್ರತಿ ವರ್ಷವೂ 62 ಲಕ್ಷಗಳಿಂದ ಮೊದಲುಗೊಂಡು 122–149 ಲಕ್ಷದವರೆಗೂ ಲುಕ್ಸಾನಾಗುತ್ತಿದೆ. ಆದರೆ ಈ ವರ್ಷ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ಗಳಿಂದ ಸರ್ಕಾರಕ್ಕೆ 14.09 ಲಕ್ಷ ವರಮಾನ ಬರಬಹುದೆಂದು ಹೇಳಿದ್ದಾರೆ. ಅದೇ ರೀತಿ ಅರಣ್ಯ ಬಾಬಿನಿಂದ ಬರತಕ್ಕ ವರಮಾನ 4 ಕೋಟಿ 80 ಲಕ್ಷ ಎಂದು ಹೇಳಿದೆ. ಆದರೆ ಅರಣ್ಯದಿಂದ ಬರತಕ್ಕ ಉತ್ಪನ್ನವನ್ನು ವಾರ್ಷಿಕ ಉತ್ಪನ್ನವೆಂದು ಹೇಗೆ ಹೇಳುತ್ತಾರೆ? ಅರಣ್ಯ ನೂರಾರು ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ಹಾಗಿರುವಾಗ ಇದನ್ನು ವಾರ್ಷಿಕ ಆದಾಯ ಎಂದು ಹೇಗೆ ಕರೆಯುತ್ತಾರೆ? ಇತ್ತೀಚೆಗೆ ನಮ್ಮ ಮಲೆನಾಡಿನಲ್ಲಿ ಅರಣ್ಯ ಸಂಪತ್ತು ಹಾಳಾಗುತ್ತಿದೆ. ಎಲ್ಲೆಲ್ಲಿ ಹೊಸ ಪ್ಲಾಂಟೇಷನ್‌ಗಳನ್ನು ಬೆಳೆಸುವುದಕ್ಕೆ ಸಾಧ್ಯವಿತ್ತೋ ಅಲ್ಲಿ ಬೆಳೆಸದೆ ಇದ್ದ ಅರಣ್ಯವನ್ನು ಹಾಳುಮಾಡಿ ಅಲ್ಲಿ ಹೊಸದಾಗಿ ಅರಣ್ಯ ಬೆಳೆಸತಕ್ಕದ್ದು ಅಷ್ಟು ಸಾಧುವಾದುದಲ್ಲ. ಹೀಗೆ ಅರಣ್ಯ ಶಿಥಿಲವಾಗುತ್ತಿರುವಾಗ ಇದರಿಂದ ಅಷ್ಟು ವರಮಾನ ಹೇಗೆ ಬರುತ್ತದೆಯೋ ನನಗೆ ಗೊತ್ತಾಗುತ್ತಿಲ್ಲ.

ಇನ್ನು ಇರಿಗೇಷನ್ ಬಾಬಿನಿಂದ 62.40 ಲಕ್ಷ ರೂಪಾಯಿ ಬರುತ್ತೆ ಎಂದು ಹೇಳಿದ್ದಾರೆ. ನೆರೆ ರಾಜ್ಯಗಳಿಗೆ ಪವರನ್ನು ಒದಗಿಸುತ್ತಿರುವುದರಿಂದಲೂ ಆದಾಯ ಬರುತ್ತಿದೆಯೆಂದು ಹೇಳಿದೆ. ಆದರೆ ನೆರೆ ರಾಜ್ಯಗಳಿಗೆ ಯಾವ ದರದಲ್ಲಿ ಪವರನ್ನು ಒದಗಿಸಲಾಗುತ್ತಿದೆಯೋ ಅದೇ ದರದಲ್ಲಿ ರಾಜ್ಯದಲ್ಲಿರತಕ್ಕ ಜನಕ್ಕೂ ಒದಗಿಸಿ ಆಗ ಇದರಿಂದ ಎಷ್ಟು ಆದಾಯ ಬರುತ್ತೆಂಬುದನ್ನು ನೋಡಬೇಕು.

ಹಾಲಿ ಇರತಕ್ಕ ಕೆಲವು ತೆರಿಗೆಗಳ ಬಾಬಿನಲ್ಲಿ ಲೀಕೇಜ್ ಹೆಚ್ಚಾಗಿದೆ. ಯಾರು ಸರ್ಕಾರಕ್ಕೆ ತೆರಿಗೆಯನ್ನು ಕೊಡಬೇಕೋ ಅವರು ನ್ಯಾಯವಾದ ತೆರಿಗೆಯನ್ನು ಕೊಡುತ್ತಿಲ್ಲ. ತೆರಿಗೆಯನ್ನು ಯಾರು ಕೊಡಬೇಕಾಗಿಲ್ಲವೋ ಅಂಥವರಿಗೆ ಹೆಚ್ಚಿನ ಕಿರುಕುಳವಾಗುತ್ತಿದೆ. ಸರ್ಕಾರಕ್ಕೆ ಬರಬೇಕಾದ ನ್ಯಾಯವಾದ ತೆರಿಗೆ ಹಣವನ್ನು ವಸೂಲ್ಮಾಡುವಂಥ ನಿಷ್ಠೆ ಮತ್ತು ನಿಸ್ಪೃಹರಾದಂಥ ಅಧಿಕಾರಿಗಳು ನಮ್ಮಲ್ಲಿದ್ದಾರೆ.

4–30 P.M.

ಒಳ್ಳೊಳ್ಳೆಯ ಅಧಿಕಾರಿಗಳು ಇದ್ದಾರೆ. ಎಲ್ಲಿ ಹೆಚ್ಚಿನ ವರಮಾನ ಬರುತ್ತದೋ ಅಂತಹ ಇಲಾಖೆಗಳಿಗೆ ನಿಸ್ಪೃಹವಾದ ಅಧಿಕಾರಿಗಳನ್ನು ಹಾಕಿದರೆ, ಅಲ್ಲಿ ಕೆಲಸಕಾರ್ಯಗಳು ಬಹಳ ಯಶಸ್ವಿಯಾಗಿ ನಡೆದು ಇಂದು ಸೋರಿಹೋಗುವ ಹಣವನ್ನು ಉಳಿಸತಕ್ಕ ಒಂದು ಪ್ರಯತ್ನವನ್ನು ಮಾಡಬಹುದು. ಉದಾಹರಣೆಗೆ ಹೇಳುವುದಾದರೆ, ಬೆಂಗಳೂರು ಕಾರ್ಪೊರೇಷನ್ನನ್ನು ತೆಗೆದುಕೊಳ್ಳೋಣ. ಏನೋ ಕಾರಣಾಂತರದಿಂದ ಕಾರ್ಪೊರೇಷನ್ ಎಲೆಕ್ಷನ್ ಆಗಲಿಲ್ಲ. ಅಡ್ಮಿನಿಸ್ಟ್ರೇಟರ್ ಅವರ ಅಧೀನಕ್ಕೆ ಈ ಬೆಂಗಳೂರು ಕಾರ್ಪೊರೇಷನ್ನನ್ನು ಕೊಟ್ಟಿದ್ದಾರೆ. ಅಲ್ಲಿ ಅಡ್ಮಿನಿಸ್ಟ್ರೇಟರ್ ಆಗಿರುವವರು ಬಹಳ ನಿಸ್ಪೃಹರಾಗಿ, ಯೋಗ್ಯರಾಗಿ, ದಕ್ಷರಾಗಿರುವುದರಿಂದ ಇವತ್ತು ಬೆಂಗಳೂರು ನಗರವನ್ನು ನೋಡಿದರೆ, ಇಲ್ಲಿರತಕ್ಕ ರಸ್ತೆಗಳನ್ನು ನೋಡಿದರೆ ಸುಮಾರು 3–4 ವರ್ಷಗಳ ಕೆಳಗೆ ಯಾವ ರೀತಿ ಇತ್ತೋ ಅದಕ್ಕಿಂತಲೂ ಚೆನ್ನಾಗಿದೆಯೆಂದು ಯಾರಾದರೂ ಕೂಡ ಮೆಚ್ಚತಕ್ಕ ವಿಚಾರವೇ ಆಗಿದೆ. ಒಂದು ದೃಷ್ಟಿಯಿಂದ ಹೇಳುವುದಾದರೆ ಒಳ್ಳೆಯ ನಿಸ್ಪೃಹರಾದ ಅಧಿಕಾರಿಗಳು ಈಗ ಬೇಕಾದಷ್ಟು ಜನರು

(ಶ್ರೀ ಎ. ಆರ್. ಬದರೀನಾರಾಯಣ್)

ಇದ್ದಾರೆ. ಎಲ್ಲಿ ಹೆಚ್ಚಿಗೆ ತೆರಿಗೆಗಳು ವಸೂಲಿಯಾಗುತ್ತದೋ ಅಂತಹ ಕಡೆಗಳಲ್ಲಿ ಅಂತಹ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಆ ರೀತಿ ಆದಾಯವನ್ನು ಹೆಚ್ಚಿಗೆ ಮಾಡಬಹುದೆಂದು ಆರ್ಥಿಕ ಮಂತ್ರಿಗಳು ಹೇಳಿದ್ದಾರೆ. ಯಾವ ರೀತಿಯಲ್ಲಿ ನಮ್ಮ ವರಮಾನವನ್ನು ಹೆಚ್ಚಿಸುವುದಕ್ಕೆ ಪ್ರಯತ್ನಮಾಡಬಹುದು, ಯಾವ ರೀತಿಯಲ್ಲಿ ಮಾಡಿದರೆ ಅದನ್ನು ಹೆಚ್ಚುಮಾಡಬಹುದು ಎನ್ನುವ ದೃಷ್ಟಿಯಿಂದ ಒಳ್ಳೆಯ ಮೇಧಾವಿಗಳಾದಂಥ ಮಾನ್ಯ ಶ್ರೀ ಭೂತಲಿಂಗಂ ಅವರನ್ನು ಒಂದು ಕಮಿಟಿಯ ಚೇರ್‌ಮನ್ನರಾಗಿ ನೇಮಿಸಿ ಅವರ ಜವಾಬ್ದಾರಿಗೆ ಇದನ್ನು ವಹಿಸಿ, ಏನೊಂದು ಕ್ರಮವನ್ನು ಹಾಕಿಕೊಂಡರೆ ಹೆಚ್ಚಿನ ತೆರಿಗೆಗಳು ಬರಬಹುದು; ವರಮಾನ ಬರಬಹುದು ಎನ್ನುವುದನ್ನು ವಿಮರ್ಶೆಮಾಡಿ ಸಲಹೆಗಳನ್ನು ಕೊಡುವ ಸಲುವಾಗಿ ಮಾಡಿರುವುದು ಬಹಳ ಮುಖ್ಯವಾದಂಥ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಮಾತನ್ನು ಹೇಳಿದರು. ಈಗ ಬೇಕಾದಷ್ಟು ನೀರಾವರಿ ಯೋಜನೆಗಳು ನಮ್ಮ ದೇಶದಲ್ಲಿ ಆಗಬೇಕಾಗಿವೆ. ನಮಗೆ ಹಣದ ಕೊರತೆಯಿಂದ ಎಷ್ಟು ಯೋಜನೆಗಳನ್ನು ತೆಗೆದುಕೊಳ್ಳಬೇಕೋ ಅಷ್ಟು ತೆಗೆದುಕೊಳ್ಳುವುದಕ್ಕೆ ಆಗುತ್ತಾ ಇಲ್ಲ. ನಮ್ಮಲ್ಲಿ ಏನು ರೈತರು ಇದ್ದಾರೆ, ಅವರು ವ್ಯವಸಾಯ ಮಾಡತಕ್ಕವರು ಆಗಿದ್ದಾರೆ. ಅವರು ಹಣವನ್ನು ಅಡ್ವಾನ್ಸಾಗಿ ಕೊಟ್ಟರೆ, ಇಂತಹ ಪ್ರಾಜೆಕ್ಟ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರೆ, ರೈತರೇ ಮುಂದೆ ಬರುತ್ತಾರೆಂಬ ಮಾತನ್ನು ಹೇಳಿದರು. ಇದನ್ನು ಎಷ್ಟರಮಟ್ಟಿಗೆ ಮಾಡಬಹುದು ಎನ್ನುವುದನ್ನು ಸರ್ಕಾರದವರು ಯೋಚನೆಮಾಡುತ್ತಿದ್ದಾರೆ. ಇಂತಹ ಒಂದು ದೃಷ್ಟಿಕೋನದಲ್ಲಿ ಹೆಚ್ಚು ಯೋಚನೆ ಮಾಡುವುದು ಬಹಳ ಮುಖ್ಯ. ನಾನು ಪಾಶ್ಚಿಮಾತ್ಯ ದೇಶಕ್ಕೆ ಹಾಗೂ ಅಮೇರಿಕಾದೇಶಕ್ಕೆ ಹೋಗಿದ್ದಾಗ ಅಲ್ಲಿನ ನನ್ನ ಅನುಭವ ಹೇಳುವುದಾದರೆ, ಅಲ್ಲಿ ನೂರಾರು ಮೈಲಿಗಳ ರಸ್ತೆಗಳನ್ನು ಸಿಮೆಂಟ್ ಕಾನ್‌ಕ್ರೀಟ್ ರಸ್ತೆಗಳನ್ನಾಗಿ ಬಹಳ ಜಾಗ್ರತೆಯಾಗಿ ಮಾಡಿದ್ದಾರೆ. ಸುಮಾರು 6-7-8 ಮೈಲಿಗಳು ರಸ್ತೆಯನ್ನು ಒಬ್ಬೊಬ್ಬ ವ್ಯಕ್ತಿಯೇ ಮಾಡಿದ್ದಾನೆ. ಹಾಗೂ ಕಾರ್ಪೊರೇಷನ್ನಿನವರೂ ಒಳ್ಳೆಯ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಆ ರೀತಿ ನಿರ್ಮಾಣಮಾಡಿ ಅವರು ಏನು ಅಧಿಕೃತತೆರಿಗೆ ಅಲ್ಲಿ ಜನರಿಂದ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿದ್ದಾರೆ. ಇಲ್ಲಿ ರಸ್ತೆಗಳ ಬಗ್ಗೆ ಸರ್ಕಾರದವರ ಜವಾಬ್ದಾರಿ ಎಷ್ಟರಮಟ್ಟಿಗೆ ಇದೆಯೋ ಅದನ್ನು ಕಡಿಮೆಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದಾರೆಂದು ನಾನು ಕೇಳುತ್ತಿದ್ದೇನೆ. ಅನೇಕ ಜನ ಬಸ್ ಆಪರೇಟರ್ಸ್ ನಾವು ರಸ್ತೆಗಳನ್ನು ಸರಿಪಡಿಸುತ್ತೇವೆಂದು ಹೇಳುತ್ತಿದ್ದಾರೆ. ಆದ್ದರಿಂದ ಹಳೆಯ ಸಂಪ್ರದಾಯಗಳನ್ನು ಬಿಟ್ಟು ಹೊಸ ದೃಷ್ಟಿಕೋನವನ್ನು ಇಟ್ಟುಕೊಂಡು ನಾವು ಯಾವ ರೀತಿಯಲ್ಲಿ ವರಮಾನ ಹೆಚ್ಚು ಮಾಡಬೇಕೆಂಬ ದೃಷ್ಟಿಯಿಂದ ಯೋಚನೆಮಾಡಬೇಕು. ಜನರ ಕೂಗು ಈಗಾಗಲೇ ಜಾಸ್ತಿಯಾಗುತ್ತಿದೆ. ಜನ ಹೆಚ್ಚು ತೆರಿಗೆಯ ಹೊರೆಯನ್ನು ಹೊರಲು ಸಾಧ್ಯವಾಗುವುದಿಲ್ಲ. ಸರ್ಕಾರದವರು ಈ ಕಡೆಗೆ ದೃಷ್ಟಿ ಇಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಬ್ಲಿಕ್ ಸೆಕ್ಟರ್ ವಿಷಯದಲ್ಲಿ ಕಮ್ಯೂನಿಸ್ಟ್ ಪ್ರತಿನಿಧಿಗಳಾದ ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಮಾತನಾಡುತ್ತಾ ಪಬ್ಲಿಕ್ ಸೆಕ್ಟರ್ ಜಾಸ್ತಿಯಾಗಬೇಕು, ಪ್ರೈವೇಟ್ ಸೆಕ್ಟರ್ ಆದಷ್ಟು ಕಡಿಮೆಯಾಗಬೇಕು ಎಂಬುದಾಗಿ ಹೇಳಿದರು. ತೆರಿಗೆಗಳನ್ನು ಕೊಡಲು ಯಾರು ಶಕ್ತರೋ ಅವರು ಕೊಡಬೇಕೆಂದು ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ಪಬ್ಲಿಕ್ ಸೆಕ್ಟರ್‌ನಿಂದ ರಾಜ್ಯಕ್ಕೆ ಹೆಚ್ಚು ವರಮಾನ ಬಂದರೆ ಅದನ್ನು ಮುಂದುವರಿಸೋಣ.

Sri K. H. RANGANATH (Mudigere).—The A. I. C. C. have passed a resolution at Jaipur Session that democratic socialism is Congress goal. What is the opinion of the hon. Member on that? ತಮ್ಮ ಕಾಂಗ್ರೆಸ್ಸಿನವರ ನಿಲುವು ಏನು ಇದೆಯೆಂಬುದನ್ನು ಹೇಳಬೇಕು. ಪಬ್ಲಿಕ್ ಸೆಕ್ಟರ್ ಬೇಡವೋ ಅಥವಾ ಪ್ರೈವೇಟ್ ಸೆಕ್ಟರ್ ಬೇಕೋ ಎಂಬುದನ್ನು ಹೇಳಬೇಕು. ಅಲ್ಲೊಂದು ನಿಲುವನ್ನು ತೆಗೆದುಕೊಂಡು ಇಲ್ಲಿ ಒಂದು ಹೇಳುವುದು ಸರಿಯಾಗಿಲ್ಲ.

Sri A. R. BADARINARAYAN.—Public Sector not at all costs, ಇದರಲ್ಲಿ ಲುಕ್ಸಾನು ಮಾಡಿಕೊಂಡಿದ್ದರೂ ಪಬ್ಲಿಕ್ ಸೆಕ್ಟರ್ ಎಂಬ ಸೆಂಟಿಮೆಂಟಿಗೋಸ್ಕರ ಅದು ಜಾಸ್ತಿ ಮಾಡಬೇಕು ಎಂದು ಹೇಳುವುದು ಸರಿಯಲ್ಲ.

Sri B. P. GANGADHAR.—Public Sector enterprises alone must be encouraged.

SRI A. R. BADARINARAYAN.—We must be painfully aware of the results as the figures themselves speak volumes as to how the public sector is performing. Let it not be misunderstood thereby that I am pleading for a capitalistic society. I am saying that we are creating another set of vested interests in the name of Public Sector. We are creating a set of people—call them officers, administrators or anybody else—to replace those who are running the enterprises now. ಪಬ್ಲಿಕ್ ಸೆಕ್ಟರ್‌ನಲ್ಲಿ ಪ್ರೊಡಕ್ಷನ್ ಜಾಸ್ತಿಯಾಗಬೇಕು. ದೇಶದಲ್ಲಿ ಉತ್ಪನ್ನ ಜಾಸ್ತಿಯಾಗಬೇಕು ಎಂಬುದಾಗಿ ಹೇಳುವಾಗ ದುಡಿಯುವ ಮನುಷ್ಯನನ್ನು ಏತಕ್ಕೆ ಹಿಂಸೆಮಾಡಬೇಕು ? ಏನೋ ಪಬ್ಲಿಕ್‌ಸೆಕ್ಟರ್ ಎಂಬ ಸೆಂಟ್‌ಮೆಂಟಿಗೆ ಮಾರು ಹೋಗಿ ಅದನ್ನು ಇಟ್ಟುಕೊಳ್ಳಬೇಕೆಂದರೆ ನಾವು ಅದನ್ನು ಒಪ್ಪುವುದಕ್ಕಾಗುವುದಿಲ್ಲ. ನಾವು ಹೇಳುವುದೂ ರಾಜ್ಯದ ಹಿತದೃಷ್ಟಿಯಿಂದ, ಅವರು ಹೇಳುವುದೂ ರಾಜ್ಯದ ಹಿತದೃಷ್ಟಿಯಿಂದ ಜನರಿಗೆ ಉತ್ಪನ್ನ ಜಾಸ್ತಿಯಾಗಬೇಕು ಎಂಬುದು. ದೇಶಕ್ಕೆ ವರಮಾನ ಬರಬೇಕು ಮತ್ತು ನ್ಯಾಷನಲ್ ಇನ್‌ಕಂ ಸಹ ಜಾಸ್ತಿಯಾಗಬೇಕೆಂಬ ದೃಷ್ಟಿ ಎಲ್ಲರಿಗೂ ಇರಬೇಕಾಗಿದೆ. ಒಟ್ಟಿನಲ್ಲಿ ಇದರಲ್ಲಿರತಕ್ಕ ದೋಷಗಳನ್ನು ಸರಿಮಾಡಿ. ಜಾಸ್ತಿಯಾಗಿ ವರಮಾನ ಬರುವ ಹಾಗೆ ಮಾಡಿ. Whether it is the Congress Government or the Communist Government or any other Government, there is this difficulty. After all, it is run by I. A. S. Officers and salaried servants. Do you mean to say that they are more patriotic than the private people who are running them ? This requires lot of re-thinking. What is the result you have produced ? There is inherent defect in the system itself. ನಾವು ವರಮಾನವನ್ನು ಹೆಚ್ಚಿಸಬೇಕೇ ಹೊರತು, ರೂರಲ್ ಪ್ರದೇಶದಲ್ಲಿರತಕ್ಕ ರೈತನಿಗೆ ತಲೆಯ ಮೇಲೆ ಹಾಕತಕ್ಕದ್ದು ಸರಿಯಲ್ಲ. ಇರತಕ್ಕಂತಹ ಸನ್ನಿವೇಶದಲ್ಲಿ, ಇರತಕ್ಕಂತಹ ಒಂದು ಲಿಮಿಟಿನಲ್ಲಿ ನಮ್ಮ ಆರ್ಥಿಕ ಮಂತ್ರಿಗಳು, ಈ ತೊಂದರೆಯ ಪರಿಸ್ಥಿತಿಯಲ್ಲೂ ಚೆನ್ನಾಗಿ ಮಾಡಿದ್ದಾರೆ. ಅದಕ್ಕೋಸ್ಕರ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ, ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಶ್ರೀನಿವಾಸಪುರ).—ಮಾನ್ಯ ಅಧ್ಯಕ್ಷಿಣಿಯರೇ, ಪೂಜ್ಯ ಮಹಾತ್ಮ ಗಾಂಧೀಜಿಯವರ ಶತಮಾನೋತ್ಸವದ ವರ್ಷದಲ್ಲಿ ಮಂಡಿಸಿದಂತಹ ಆಯವ್ಯಯ ಪಟ್ಟಿಯು ಬಹಳ ನಿರಾಶದಾಯಕವಾಗಿದೆ. ಈ ಬಗ್ಗೆ ಹೇಳತಕ್ಕ ವಿಚಾರಗಳು ಬಹಳವಾಗಿವೆ. ಅವುಗಳನ್ನು ಮುಂದೆ ಅವಕಾಶ ದೊರೆತಾಗ ಹೇಳೋಣ. ತತ್ಕಾಲಕ್ಕೆ ಸರ್ಕಾರದವರು ಮಾಡಿರತಕ್ಕ ಒಳ್ಳೆಯ ಕೆಲಸಕ್ಕೆ ನನ್ನ ಸಂತೋಷವನ್ನು ವ್ಯಕ್ತಪಡಿಸುತ್ತೇನೆ. ಅದೇನೆಂದರೆ, ಸರ್ಕಾರಿ ನೌಕರರಿಗೆ ಅವರ ಜೀವನ ವೆಚ್ಚವು ಹೆಚ್ಚುತ್ತಿರುವಾಗ, ನಮ್ಮ ಆರ್ಥಿಕ ಪರಿಸ್ಥಿತಿಯಲ್ಲಿ ಮುಗ್ಗಟ್ಟಿದ್ದರೂ ಒಂದು ವರ್ಷದಲ್ಲಿ ಎರಡು ಸಾರಿ ತುಟ್ಟಿಭತ್ಯವನ್ನು ಕೊಟ್ಟು, ಇದರಿಂದ 10 ಕೋಟಿ ರೂಪಾಯಿಯ ಭಾರವನ್ನು ಸರ್ಕಾರದವರು ವಹಿಸುದುದಕ್ಕಾಗಿ ನಿಜವಾಗಿಯೂ ನಾನು ಸರ್ಕಾರವನ್ನು ವಂದಿಸಬೇಕಾಗಿದೆ. ಆದರೆ ಇದರಲ್ಲಿ 90 ರಿಂದ 110 ರೂಪಾಯಿಯವರೆಗೆ ಸಂಬಳ ಪಡೆಯತಕ್ಕವರಿಗೆ, ಇನ್ನೂ ಕಡಿಮೆಯಾಗುತ್ತದೆ. ಇದನ್ನು ಸರ್ಕಾರದವರು ಗಮನಿಸಿ, ಈ ಕೊರತೆಯನ್ನು ನಿವಾರಣೆ ಮಾಡಬೇಕು. ಸರ್ಕಾರಿ ನೌಕರರು ಪ್ರಜಾ ಸಂಖ್ಯೆಯಲ್ಲಿ ಶೇಕಡಾ ಒಂದು ಭಾಗ ಮಾತ್ರ ಇದ್ದಾರೆ. ಇದಲ್ಲದೆ, ಸರ್ಕಾರಿ ನೌಕರರಲ್ಲದಿರತಕ್ಕ ಶೇಕಡಾ 20 ರಷ್ಟು ಇರುವ ವ್ಯವಸಾಯ ಕಾರ್ಮಿಕರು ಮತ್ತು ಸಣ್ಣ ಹಿಡುವಳಿದಾರರ ಬಗ್ಗೆ ಏನೊಂದೂ ಯೋಚನೆ ಸರ್ಕಾರ ಮಾಡದಿರುವುದು ಬಹಳ ಶೋಚನೀಯವಾದ ವಿಚಾರವಾಗಿದೆ. ಸ್ವರಾಜ್ಯ ಬಂದನಂತರ, ಪೂಜ್ಯ ಮಹಾತ್ಮ ಗಾಂಧೀಜಿಯವರು ಮತ್ತು ಎಲ್ಲಾ ಶ್ರೇಷ್ಠ ನಾಯಕರು ಹೇಳಿದ್ದಾರೆ, ಇದು ಸುಖೀ ರಾಜ್ಯವಾಗಬೇಕಾದರೆ, ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ನೀವು ಎಲ್ಲಾ ಏನೊಂದು ಕಾರ್ಯಕ್ರಮ ಕೈಗೊಂಡರೂ ಸಹ, ಅದು ಎಲ್ಲಾ ವರ್ಗದವರಿಗೂ ಅನ್ವಯವಾಗುವಂತೆ ಆಗಿ, ದೀನದಲಿತರಿಗೆ ಹೆಚ್ಚು ಗಮನ ಕೊಡಬೇಕೆಂದು ಹೇಳಿದ್ದಾರೆ. ಹಾಗೇ ನಮ್ಮ ಶಾಸನಾಂಗವನ್ನೂ ಕೂಡ ಮಾಡಿದ್ದೇವೆ. ಪ್ರಜಾಪ್ರಭುತ್ವ ಬಂದು 21 ವರ್ಷವಾದರೂ ಕೂಡ ದೀನದಲಿತರ ಬಗ್ಗೆ ಸರ್ಕಾರದವರು ಏನೊಂದೂ ಕಾರ್ಯಕ್ರಮ ಕೈಗೊಂಡಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇದನ್ನು ಸರ್ಕಾರದವರ ಗಮನಕ್ಕೆ ತರುವುದು ಇದು ಕೇವಲ ಮೊದಲನೆಯಸಲವಲ್ಲ. ಅನೇಕ ಸಂದರ್ಭಗಳಲ್ಲಿ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇವೆ. ಆದರೆ ಸರ್ಕಾರಕ್ಕೆ ಇದು ಕಾಣುತ್ತಾ ಇಲ್ಲವೋ, ಅಥವಾ ಕಿವಿಗೆ ಕೇಳುತ್ತಾ ಇಲ್ಲವೋ, ಅಥವಾ ಎರಡೂ ಇದ್ದು ಮನಸ್ಸು ಇಲ್ಲವೋ, ಎಂದು ಕೇಳಬೇಕಾಗಿದೆ.

(ಶ್ರೀ ಬಿ. ಎಲ್. ನಾರಾಯಣ ಸ್ವಾಮಿ)

ಇದು ಸರ್ಕಾರದ ಒಂದು ರೀತಿಯ ಮೊಂಡುತನವೆಂದು ಹೇಳಬೇಕಾಗಿದೆ. ಸರ್ಕಾರದವರು ತನ್ನ ಕರ್ತವ್ಯದಲ್ಲಿ ವಿಫಲವಾಗಿದೆಯೆಂದು ಹೇಳಬೇಕಾಗಿದೆ. ಸರ್ಕಾರದವರ ಲೆಕ್ಕದ ಪ್ರಕಾರ ಗ್ರಾಮಾಂತರ ಕೂಲಿಗಳಿಗೆ ಕೇವಲ ಒಂದು ರೂಪಾಯಿ ಮಾತ್ರ ಆದಾಯವಿರುತ್ತದೆ. ಇದು ವ್ಯವಸಾಯ, ನಡೆಯುತ್ತಿದ್ದಾಗ, ಮಳೆ ಬೆಳೆ ಚೆನ್ನಾಗಿ ಇದ್ದರೆ, ಇವರಿಗೆ ಈ ಕೂಲಿ ಸಿಗುತ್ತದೆ ಅಲ್ಲದೆ ಬೇರೆ ಕಾಲದಲ್ಲಿ ಅವರಿಗೆ ಕೂಲಿ ಸಿಗುತ್ತಾ ಇಲ್ಲ. ಅದರಲ್ಲೂ ಬಡ ಜನರಿಗೆ ಕ್ಷಾಮದ ಪರಿಸ್ಥಿತಿಯಲ್ಲಿ ಹೇಗೆ ಜೀವನ ಮಾಡುವುದಕ್ಕಾಗುತ್ತದೆ ? ಇವರ ಗತಿ ಏನು ? ಇವರಿಗೆ ನಿಮ್ಮ ಕರ್ತವ್ಯ ಏನು ? ಸರ್ಕಾರದವರಿಗೆ ಪದೇ ಪದೇ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ, ಹಸಿದಂತವನನ್ನು ದೀರ್ಘಕಾಲದವರೆಗೆ ಪರೀಕ್ಷೆ ಮಾಡತಕ್ಕದ್ದು ನಿಜವಾಗಿಯೂ ಸರ್ಕಾರಕ್ಕೆ ಒಳ್ಳೆಯದಲ್ಲ. ಇದು ನಿಮ್ಮ ಲೋಪ. ಇದರಿಂದ ನಾವು ಯಾವುದೋ ಒಂದು ಅಹಿತವಾದ ದುಷ್ಕೃತ್ಯಕ್ಕೆ, ಒಂದು ಕ್ರಾಂತಿಕಾರಿಕ ದುಷ್ಕೃತ್ಯಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಕಾಲ ಮೀರುವ ಮುನ್ನ ಪ್ರಜೆಗಳ ಕಷ್ಟವನ್ನು ಪರಿಹರಿಸಲು ಏನಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ನಮ್ಮ ಮಂತ್ರಿಯವರು ಹಳ್ಳಿಗಾಡಿನ ಜನರ ಕಷ್ಟಗಳು ವ್ಯವಸಾಯಗಾರರ, ಹಾಗೂ ಸಣ್ಣ ಹಿಡುವಳಿದಾರರ ತೊಂದರೆಗಳನ್ನು ಚೆನ್ನಾಗಿ ಅರಿತಿದ್ದಾರೆ. ಇವಕ್ಕೆ ಒಂದು ಉತ್ತಮವಾದ ರೀತಿಯ ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಈ ದಿಶೆಯಲ್ಲಿ ಏನೂ ಕೈಗೊಂಡಿಲ್ಲ. ಅದಕ್ಕೆ ಬಡವರು ಅನುಭವಿಸತಕ್ಕ ಕಷ್ಟವನ್ನು ಚೆನ್ನಾಗಿ ತಿಳಿದಿರತಕ್ಕ, ಬಡವರನ್ನು ಚೆನ್ನಾಗಿ ಬಲ್ಲವರಾದ ಒಬ್ಬ ಮಂತ್ರಿಗೆ ಈ ಖಾತೆಯನ್ನು ಕೊಟ್ಟರೆ, ಅವರಾದರೂ ಬಂದು ಬಡವರ ಆಶೋತ್ತರಗಳನ್ನು ನೆರವೇರಿಸಲು ಸಾಧ್ಯವಾಗುತ್ತದೆ. ಏಕೆಂದರೆ, ಇವತ್ತು ಇರತಕ್ಕ ಮಂತ್ರಿಗಳು ಎಲ್ಲಾ ಭಾಗ್ಯವಂತರ ಪ್ರತಿನಿಧಿಗಳಾಗಿದ್ದಾರೆ. ಬಡವರ ಪ್ರತಿನಿಧಿಗೆ, ಒಬ್ಬರಿಗೆ ಈ ಒಂದು ಖಾತೆಯನ್ನು ಕೊಟ್ಟು ಬಿಟ್ಟರೆ, ಅವರು ಈ ಬಗ್ಗೆ ಒಂದು ಕಾರ್ಯಕ್ರಮವನ್ನು ಕೈಗೊಳ್ಳಬಹುದು. ಈಗಾಗಲೇ ಮಂತ್ರಿಮಂಡಲ ದೊಡ್ಡದಾಗಿದೆ ಎಂದು ಹೇಳುತ್ತಿದ್ದಾರೆ, ಆದರಿಂದ ಯಾರಾದರೂ ನಾನು ಈ ರೀತಿ ಹೇಳುವುದಕ್ಕೆ ಅಕ್ಷೇಪಣೆ ಮಾಡಬಹುದು. ಇದು ನನ್ನ ಒಂದು ಸೂಚನೆ ಅಷ್ಟೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಯವರು ಈ ಅಧಿವೇಶನ ಮುಗಿಯುವುದರೊಳಗೆ ಈ ಒಂದು ಬಡಜನರ ಉದ್ಧಾರಕ್ಕಾಗಿ ಒಂದು ಸಲಹಾ ಸಮಿತಿಯನ್ನು ಏರ್ಪಡಿಸಿ. ಆ ಸಮಿತಿಯ ತೀರ್ಮಾನದಂತೆ ಮುಂದಿನ ಕಾರ್ಯಕ್ರಮ ಕೈಗೊಳ್ಳುವಂತಾಗಬೇಕು. ಮತ್ತು ಅದರ ಮೂಲಕ ಬಡ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕೋಲಾರ ಜಿಲ್ಲೆಯಲ್ಲಿ ಪದೇ ಪದೇ ಕ್ಷಾಮ ಬರುತ್ತಿದೆ. ಕ್ಷಾಮ ಪರಿಸ್ಥಿತಿಯಲ್ಲಿ ಬಡವರ ಕಷ್ಟ ಹೇಳತೀರದು. ಹಿಂದೆ 1965ರಿಂದ ಈ ವರೆಗೂ ಅದು ಕ್ಷಾಮದ ದವಡೆಯಲ್ಲಿ ಬಳಲುತ್ತಿದೆ. ಸರ್ಕಾರದವರು ಲಕ್ಷಾಂತರ ರೂಪಾಯಿ ಪರಿಹಾರ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಸಲ ಕೂಡ ಮಾಡುವವರಿದ್ದಾರೆ. ಆದರೆ ರಿಲೀಫ್ ಕಾಮಗಾರಿಗಳಿಗೆ ಎಷ್ಟು ಕೊಟ್ಟರೂ ಕೂಡ ಅದು ಕಾರ್ಯರೂಪದಲ್ಲಿ ಬರುವಾಗ ಮೂರರಲ್ಲಿ ಒಂದು ಭಾಗ ಮಾತ್ರ ಬರುತ್ತದೆ, ಬಾಕಿ ಎರಡು ಭಾಗ ಮಾಯವಾಗಿ ಹೋಗುತ್ತದೆ. ಇದನ್ನು ನಾನು ಸುಮ್ಮನೆ ಹೇಳುತ್ತಾ ಇಲ್ಲ, ಬೇಕಾದರೆ, ರುಜು ಮಾತು ಮಾಡಬಲ್ಲೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಯವರಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಸಂಬಂಧಪಟ್ಟ ಅಧಿಕಾರಿಗಳಲ್ಲಿ ಅರಿಕೆ ಮಾಡಿಕೊಂಡಿದ್ದೇನೆ. ಕಾನೂನನ್ನು ಸರಿಪಡಿಸಬೇಕು ಇದನ್ನು ಪರಿಶೀಲಿಸಿ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇದನ್ನು ಇನ್ನು ಮುಂದಾದರೂ, ಗಮನದಲ್ಲಿಟ್ಟುಕೊಂಡು ಮಾಡಬೇಕು. ಪರಿಸ್ಥಿತಿ ಈಗಾಗಲೇ ಹದಗೆಟ್ಟು ಹೋಗಿದೆ. ಇದು ನಮ್ಮ ನಿತ್ಯದ ಇತಿಹಾಸವಾಗಿದೆ. ಏನು ಅಭಾವ ಬಂತು, ಪರಿಹಾರ ಕೊಡಿ ಎಂದು ಹೇಳುತ್ತಿದ್ದೇವೆ. ಒಂದು ವಿಷಾದಕರವಾದ ಸಂಗತಿ ಏನೆಂದರೆ, ಭಾರತ ದೇಶದಲ್ಲಿ ಇರುವ ಜನರೆಲ್ಲಾ ಆತ್ಮಗೌರವ ಇದ್ದವರಾಗಿದ್ದಾರೆ ಯಾವಾಗಲೂ ಒಬ್ಬನನ್ನು ಆಶ್ರಯಿಸಿ ಗಂಜಿ ಕೊಡಿ, ಕೂಲಿ ಕೊಡಿ ಎಂದು ಕೇಳುವುದು ಸರಿಯಲ್ಲ. ಜನರು ಸಂಕಟ ಪಡುತ್ತಿದ್ದಾರೆ. ಇದನ್ನು ತಪ್ಪಿಸಿ ಒಂದು ಶಾಶ್ವತವಾದ ಪರಿಹಾರವನ್ನು ಹುಡುಕಬೇಕು. ಹಿಂದೆ ಮಾನ್ಯ ನಿಜಲಿಂಗಪ್ಪನವರು ಮುಖ್ಯ ಮಂತ್ರಿಯಾಗಿದ್ದಾಗ, ದಕ್ಷಿಣವಲಯ ಮಂತ್ರಿಗಳ ಸಭೆ ಒಂದು ತಿರುಪತಿಯಲ್ಲಿ ನಡೆಯಿತು. ಆಗ 100 ಕೋಟಿ ರೂಪಾಯಿಯ ಒಂದು ಯೋಜನೆ ಮಾಡಿ ಕೇಂದ್ರ ಸರ್ಕಾರದವರಿಗೆ ಕಳಿಸುತ್ತೇವೆ, ಇನ್ನೂ ಮಾಡುತ್ತೇವೆ ಮಾಡುತ್ತೇವೆ ಎಂದು ಅವರು ಇರುವ ತನಕ ಹೇಳಿ ಹೇಳಿ, ಮುಂದೆ ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗಿದ್ದಾರೆ. ಮೊನ್ನೆ ಒಂದು ಪ್ರಶ್ನೆಗೆ ಮಾನ್ಯ ಮುಖ್ಯ ಮಂತ್ರಿಯವರು ಉತ್ತರ ಕೊಡುತ್ತಾ, 20 ಕೋಟಿ ರೂಪಾಯಿಯ ಒಂದು ಯೋಜನೆ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ, ಎಂದು ಹೇಳಿದ್ದಾರೆ. ಈ ಯೋಜನೆಯ ರೂಪರೇಷೆಗಳು ಈಗಾಗಲೇ ಸರ್ಕಾರದವರು ಹೊರಪಡಿಸಿದ್ದಾರೆ. ಇದು ಪ್ರತಿವರ್ಷ ಮಾಡತಕ್ಕ ಪರಿಹಾರ ಕಾಮಗಾರಿಗಳ ಪಟ್ಟಿಯಲ್ಲದೆ ಇನ್ನೇನಲ್ಲ. ಕೆರೆ,

ಕೊಳ ಮುಂತಾದುಗಳಿವೆ. ಆದರೆ, ನಮ್ಮಲ್ಲಿ ಪ್ರಕೃತಿಯ ವಿಕೋಪಕ್ಕೆ ಒಳಗಾಗತಕ್ಕ ಪ್ರದೇಶಗಳಲ್ಲಿ ಒಂದು ಶಾಶ್ವತವಾದ ಪರಿಹಾರವನ್ನು ಮಾಡಬೇಕು.

ಇವೊತ್ತು ಕೆರೆಗಳನ್ನು ಮಾಡಿದ್ದಾರೆ. ಬಾವಿ ಮಾಡಿದ್ದಾರೆ. ಸಂತೋಷ. ಮಳೆಬಾರದ. ಪಕ್ಷದಲ್ಲಿ ಅದರಿಂದ ಏನು ಉಪಯೋಗವಾಗುತ್ತದೆ? ನೀವು ಮಾಡಿರತಕ್ಕದ್ದೇನೋ ಒಳ್ಳೆಯದು. ಮಳೆ ಬಾರದೆ ಇದ್ದ ಪಕ್ಷದಲ್ಲಿ ಸರ್ಕಾರದ ಮೇಲೆ ಹೊರೆ ಆಗದಂತೆ ನಮ್ಮ ಗೌರವ ಕಾಪಾಡಿಕೊಂಡು ನಾವು ಎಂದರೆ ಜನಗಳು ಅರ್ಧ ಹೊಟ್ಟೆಯನ್ನಾದರೂ ತಿನ್ನುವಹಾಗೆ ಮಾಡಿಕೊಡಬೇಕು. ಈ ದಿಶೆಯಲ್ಲಿ ಸರ್ಕಾರ ಏನು ಕಾರ್ಯಕ್ರಮಕ್ಕೆಗೊಂಡಿದೆ? ಸರ್ಕಾರ ಏನೂ ಮಾಡಿಲ್ಲ. ಕ್ಷಾಮ ಪರಿಹಾರದ ಬಗ್ಗೆ ಒಂದು ಶಾಶ್ವತವಾದ ಯೋಜನೆಯನ್ನು ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ಒಂದು ಯೋಜನೆಯನ್ನು ನಮ್ಮ ಸರ್ಕಾರದವರು ಕಳುಹಿಸಿದ್ದಾರೆಂದು ಹೇಳಿದ್ದಾರೆ. ಅದರ ರೂಪರೇಷೆಗಳು ಏನು? ಅದರ ಚಿದಂಬರ ರಹಸ್ಯ ಏನು? ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವುದೇನು ಶುದ್ಧ ಮೋಸ. ದಯವಿಟ್ಟು ಈಗಲಾದರೂ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಕಳೆದ 3 ವರ್ಷಗಳಿಂದ ಕ್ಷಾಮದಿಂದ ಜನ ಪರಿತಪಿಸುತ್ತಿದ್ದಾರೆ ಅವರ ಭವಿಷ್ಯವೇನು? ಆದ್ದರಿಂದ ಮೊದಲು ಈ ಅಧಿವೇಶನ ಮುಗಿಯುವುದರೊಳಗಾಗಿ ಅಧಿಕಾರಿಗಳು ಮತ್ತು ಖಾಸಗಿಯವರಿಂದ ಕೂಡಿದ ಒಂದು ವಿಶೇಷ ಸಮಿತಿಯನ್ನು ರಚಿಸಿ ಅವರಿಗೆ ಒಂದು ಯೋಜನೆಯನ್ನು ತಯಾರು ಮಾಡಿ ಅದರ ಬಗ್ಗೆ ಒಂದು ಕಾರ್ಯಕ್ರಮ ಕೈಗೊಳ್ಳಬೇಕು. ಎಲ್ಲಕ್ಕಿಂತ ಹೆಚ್ಚಾಗಿ ವಿಷಾದಕರವಾದ ಸಂಗತಿ ಎಂದರೆ ಕ್ಷಾಮ ಪರಿಸ್ಥಿತಿ ಇದ್ದರೂ ಕೂಡ 1965ನೇ ಇಸವಿಯ ಲಾಗಾಯಿತು ಕೋಲಾರ ಜಿಲ್ಲೆಯಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಬೆಳೆಯಿಲ್ಲದಿದ್ದರೂ ಕೂಡ ಸರ್ಕಾರದವರು ಅವರಿಗೆ ಯಾವ ಸಹಾಯವನ್ನೂ ಮಾಡಿಲ್ಲ ಅಲ್ಲಿನ ರೈತರು ಸರ್ಕಾರಕ್ಕೆ ಅನೇಕ ವೇಳೆ ಮನವಿ ಮಾಡಿಕೊಂಡು ಕಂದಾಯವನ್ನು ರಿಮಿಷನ್ ಮಾಡುತ್ತೇವೆ, ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆ ಎಂದು ಭರವಸೆ ಕೊಟ್ಟಿದ್ದಾರೆ, ಅದರಂತೆ ಇರತಕ್ಕ ಲ್ಯಾಂಡ್‌ರೆವಿನ್ಯೂ ರೂಲ್ಸನ್ನೂ ತಿದ್ದುಪಡಿ ಮಾಡಿದರು. ಯಾವ ಉದ್ದೇಶದಿಂದ ಅದನ್ನು ತಿದ್ದುಪಡಿ ಮಾಡಿದರು ಎಂದರೆ 1965ನೇ ಇಸವಿಯಿಂದ ಶೇಕಡಾ 25ಕ್ಕಿಂತ ಕಡಿಮೆ ಬೆಳೆ ಇರುವ ಎಲ್ಲಾ ಪ್ರದೇಶಗಳಿಗೂ ಕಂದಾಯವನ್ನು ರಿಮಿಷನ್ ಕೊಡಬೇಕು ಎನ್ನುವ ಉದ್ದೇಶದಿಂದ 1965ನೇ ಇಸವಿಯ ಲಾಗಾಯ್ತು ರೆಟ್ರಾಸ್ಪೆಕ್ಟೀವ್ ಕೊಡಬೇಕು ಎನ್ನುವ ಉದ್ದೇಶದಿಂದ ಆ ಕಾನೂನನ್ನ ತಿದ್ದುಪಡಿ ಮಾಡಿದರು ಆದರೆ ಈಗ ಆಗಿರತಕ್ಕದ್ದು ಏನು ಎಂದರೆ 3 ವರ್ಷಗಳ ಕಂದಾಯವನ್ನೂ ಒಟ್ಟಿಗೆ ಸೇರಿಸಿ ರೈತರಿಂದ ವಸೂಲು ಮಾಡುವುದಕ್ಕೆ ಹತ್ತಿದ್ದಾರೆ. ಈ ರೀತಿ ಶ್ರೀನಿವಾಸಪುರ ತಾಲ್ಲೂಕು ಕ್ಷಾಮದಿಂದ ಕಂಗೆಟ್ಟಿದ್ದರೂ ಸರ್ಕಾರದವರು ಕಂದಾಯವನ್ನು ವಸೂಲು ಮಾಡುವುದು ಅಮಾನುಷವಲ್ಲವೇ? ಅಲ್ಲಿನ ಜನಗಳು ಅರೆಹೊಟ್ಟೆಯಿಂದ ಜೀವನ ಮಾಡುತ್ತಿದ್ದಾರೆ ರಿಲೀಫ್ ಕಾಮಗಾರಿಗಳಿಂದ ಜೀವನ ಮಾಡುತ್ತಿದ್ದಾರೆ ಎಂದು ಸರ್ಕಾರಕ್ಕೆ ಗೊತ್ತಿದೆ. ಅಲ್ಲಿನ ರೈತರಿಗೆ ಉಪಕಾರ ಮಾಡಬೇಕು ಎಂದು ಕಾನೂನನ್ನು ಮಾಡಿ, ಇಷ್ಟೆಲ್ಲಾ ಮಾಡಿ ಅದನ್ನು ಬದಿಗೆ ಇಟ್ಟು ಸರ್ಕಾರದವರು ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ. ಇದು ಅಮಾನುಷವಲ್ಲವೇ? ಮುಖ್ಯ ಮಂತ್ರಿಗಳು ಆ ಬಗ್ಗೆ ಸರ್ಕಾರದ ಆಜ್ಞೆ ಆಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಏನು ವ್ಯತ್ಯಾಸ ಇದೆಯೋ ಗೊತ್ತಿಲ್ಲ. ಈಗ ಇರತಕ್ಕದ್ದನ್ನು ಮುಖ್ಯ ಮಂತ್ರಿಗಳ ಗಮನಕ್ಕೆ ಅಧಿಕಾರಿಗಳು ತಂದಿದ್ದಾರೆಯೋ ಇಲ್ಲವೋ ಪರಮೇಶ್ವರನೇ ಬಲ್ಲ. ಸರ್ಕಾರದ ಬೊಕ್ಕಸಕ್ಕೆ ಹಣಬೇಕು. ನ್ಯಾಯವಾಗಿ ಕೊಡಬೇಕಾದ್ದನ್ನು ಕೊಡಬೇಕು. ನಾಲ್ಕಾಣೆಗಿಂತ ಕಡಿಮೆ ಬೆಳೆ ಆಗಿರತಕ್ಕ ಕಡೆ ಕಂದಾಯವನ್ನು ರಿಮಿಷನ್ ಮಾಡಿ ಎಂದು ನಾವು ಕೇಳುತ್ತೇವೆ. ಬೆಳೆ ಪೂರ್ತಿಯಾಗಿ ಬೆಳೆದಿರತಕ್ಕವರು ಕೊಡಬಾರದು ಎಂದು ನಾನು ಹೇಳುವುದಿಲ್ಲ. ಟ್ರಾಕ್ಟರ್ ಸಾಲ, ಬಾವಿ ಸಾಲ, ಪಂಪು ಸೆಟ್ಟುಗಳ ಸಾಲ ಇವುಗಳು ರೈತರಿಗೆ ಯಾರು ಅರ್ಹರಾಗಿರುತ್ತಾರೆಯೋ ಅವರಿಗೆ ಸರಿಯಾಗಿ ಸಿಕ್ಕುತ್ತಿಲ್ಲ. ಈ ಬಗ್ಗೆ ಸರ್ಕಾರದವರು ನಿಗಾ ವಹಿಸಬೇಕು. ಕಂದಾಯವನ್ನು ಅಮಾನುಷ ರೀತಿಯಲ್ಲಿ ವಸೂಲು ಮಾಡುವುದನ್ನು ತಕ್ಷಣ ನಿಲ್ಲಿಸಬೇಕು. ಈಗ ಕಂದಾಯವನ್ನು ವಸೂಲು ಮಾಡಿರುವುದರಲ್ಲಿ ಯಾರು ಯಾರಿಗೆ ರಿಯಾಯಿತಿ ಸಲ್ಲಬೇಕೋ ಅವರಿಗ ಜಮಾ ಮಾಡಿಸಬೇಕು. ಈ ವಿಚಾರದಲ್ಲಿ ಕೋಲಾರ ಜಿಲ್ಲೆ ಆದ್ಯಂತ ಕಳೆದ ತಿಂಗಳು 24ನೇ ತಾರೀಖಿನ ದಿವಸ ಪ್ರತಿ ತಾಲ್ಲೂಕಿನ ಸಾವಿರಾರು ಜನ ರೈತರು ತಹಶೀಲ್ದಾರರು ಮತ್ತು ಅಸಿಸ್ಟೆಂಟ್ ಕಮೀಷನರುಗಳನ್ನು ಕಂಡು ತಮ್ಮ ಕಷ್ಟಗಳನ್ನು ಹೇಳಿದ್ದಾರೆ. ಜನತೆ ಸೌಮ್ಯ ಸ್ವಭಾವದವರು ಮತ್ತು ಒಳ್ಳೆಯವರು. ಅವರನ್ನು ಪರೀಕ್ಷೆ ಮಾಡುತ್ತಾ ಹೋದರೆ ಎಷ್ಟು ದಿವಸ ಅವರು ಸುಮ್ಮನೆ ಇರುತ್ತಾರೆ. ಸರ್ಕಾರದವರು ತಾವು ಮಾಡಿರತಕ್ಕ ರೂಲ್ಸ್ ಮತ್ತು ಕಾನೂನು ಏನಿದೆ ಅದಕ್ಕೆ ಮರ್ಯಾದೆ ಕೊಟ್ಟು ರೈತರಿಗೆ ಏನು ರಿಯಾಯ್ತಿ ಕೊಡಬೇಕೋ ಅದನ್ನು ಕೊಡಬೇಕು. ಉಪೇಕ್ಷೆ ಮಾಡಬಾರದು. ಆ ರೀತಿ ಮಾಡುವುದಾದರೆ ಅದರಿಂದ ಹಾನಿಕರವಾಗುತ್ತದೆ ಮತ್ತು ನಾನಾ ವಿಧವಾದ ಎಡರು ತೊಡರುಗಳಿಗೆ ಅವಕಾಶವಾಗುತ್ತದೆ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಶ್ರೀ ಜಿ. ಎಲ್. ನಾರಾಯಣ ಸ್ವಾಮಿ)

ರೋಡ್ ಟ್ರಾನ್ಸ್‌ಪೋರ್ಟ್ ವಿಷಯ. ಕೋಲಾರ ಜಿಲ್ಲೆಯಲ್ಲಿ ಬಸ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದರು. ಸಂತೋಷ. ಇದರ ಉದ್ದೇಶ ಏನಾಗಿತ್ತು ಎಂದರೆ ಬಸ್ ರಾಷ್ಟ್ರೀಕರಣ ಮಾಡಿದರೆ ಪ್ರಜೆಗಳಿಗೆ ಇರತಕ್ಕ ಕಷ್ಟಗಳು ತಪ್ಪಿ ಅವರಿಗೆ ಸೌಕರ್ಯ ಉಂಟಾಗಿ ಸರ್ಕಾರದ ಬೊಕ್ಕಸಕ್ಕೆ ಹಣ ಬರುತ್ತದೆ ಎಂದು ನಾವು ಯೋಚನೆಮಾಡಿದ್ದೆವು. ಆದರೆ ಆಗಿರತಕ್ಕದ್ದು ಏನು. ಅನುಕೂಲಕ್ಕಿಂತ ಪ್ರತಿಕೂಲ ಜಾಸ್ತಿಯಾಗಿದೆ. 60 ಮೈಲಿಗೆ ಖಾಸಗೀಯವರು 2 ರೂಪಾಯಿಗಳನ್ನು ಚಾರ್ಜ್‌ಮಾಡುತ್ತಿದ್ದಾರೆ. ಸರ್ಕಾರದವರು ಉಪಕಾರ ಮಾಡತಕ್ಕವರು ಸರ್ಕಾರಿಬಸ್ಸಿನಲ್ಲಿ ಅದೇ 60 ಮೈಲಿಗೆ 3 ರೂಪಾಯಿ 20 ಪೈಸೆ ಚಾರ್ಜ್ ತೆಗೆದುಕೊಳ್ಳುತ್ತಿದ್ದಾರೆ. ಒಂದಕ್ಕೆ $1\frac{1}{2}$ಯಷ್ಟು ಜಾಸ್ತಿ ಮಾಡಿದ್ದಾರೆ. ಪ್ರಯಾಣ ಮಾಡುವ ಪ್ರಜೆಗಳಿಗೆ ಖಾಸಗೀ ಬಸ್ಸಿನಲ್ಲಿ ಲಗೇಜನ್ನು ಬಸ್ಸಿನವರೇ ಮರ್ಯಾದೆಯಿಂದ ತೆಗೆದುಕೊಂಡು ಹೋಗಿ ಬಸ್ಸಿನ ಟಾಪ್‌ಮೇಲೆ ಹಾಕುತ್ತಾರೆ. ಆದರೆ ರೋಡ್ ಟ್ರಾನ್ಸ್‌ಪೋರ್ಟ್ ಬಸ್ಸಿನಲ್ಲಿ ಲಗೇಜಿಗೂ ನಮಗೂ ಯಾವ ಸಂಬಂಧವೂ ಇಲ್ಲ ಎಂದು ಹೇಳುತ್ತಾರೆ. ಈ ರೀತಿ ಮಾಡಿದರೆ ಗೌರವ ಬರುತ್ತದೆಯೇ ? ಖಾಸಗಿ ಬಸ್‌ಮಾಲೀಕರು 60 ಮೈಲಿಗೆ 3 ರೂಪಾಯಿ ಚಾರ್ಜ್ ತೆಗೆದುಕೊಂಡು ಸಹಸ್ರಾರು ರೂಪಾಯಿಗಳನ್ನು ಸಂಪಾದನೆಮಾಡಬೇಕಾಗಿದ್ದರೆ ಸರ್ಕಾರದವರು ಬಸ್ ರೂಟನ್ನು ರಾಷ್ಟ್ರೀಕರಣ ಮಾಡಿ ಚಾರ್ಜನ್ನೂ ಜಾಸ್ತಿ ಮಾಡಿ ಲಾಭ ಇರುವುದಿಲ್ಲ ಎಂದರೆ ಇಂಥಾ ಉದ್ಯಮಗಳಿಗೆ ಸರ್ಕಾರದವರು ಏತಕ್ಕೆ ಕೈ ಹಾಕುತ್ತಾರೆ ? ಅದನ್ನು ಖಾಸಗೀಯವರಿಗೇ ಬಿಟ್ಟು ಬಿಡಿ ? ಬಸ್ ರೂಟನ್ನು ಮನಾಪಲಿ ಮಾಡಿಕೊಂಡು ಪ್ರಜೆಗಳ ಮೇಲೆ ಹೊರೆಯನ್ನು ಹೇರುವುದು ನ್ಯಾಯಧರ್ಮಗಳಿಗೆ ವಿರುದ್ಧವಾಗಿದೆ. ಇದನ್ನು ಸರ್ಕಾರದವರು ಗಮನಿಸಬೇಕು. ಈಗ ಮದ್ರಾಸ್ ಪ್ರಾಂತ್ಯದಲ್ಲಿ ಕೆಲವು ಬಸ್ ರೂಟುಗಳನ್ನು ನ್ಯಾಷನಲೈಜ್ ಮಾಡಿದ್ದಾರೆ. ಆ ಬಸ್ಸುಗಳಲ್ಲಿ ಖಾಸಗೀ ಬಸ್ ಮಾಲೀಕರು ಏನು ಚಾರ್ಜ್ ಮಾಡುತ್ತಿದ್ದರೋ ಅದಕ್ಕಿಂತ ಕಡಿಮೆ ಚಾರ್ಜ್ ತೆಗೆದುಕೊಳ್ಳುತ್ತಿದ್ದಾರೆ. ರಿಯಾಯ್ತಿ ದರದಲ್ಲಿ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ನಮ್ಮ ಸಂಸ್ಥಾನದಲ್ಲಿ 1ಕ್ಕೆ $1\frac{1}{2}$ಯಷ್ಟು ಚಾರ್ಜ್‌ಮಾಡಿರುವುದು ತುಂಬಾ ಅನ್ಯಾಯ. ಈ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಅದರಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಬೇಕು. ಇಲ್ಲದೆ ಹೋದರೆ ನಮ್ಮ ಮಿತ್ರರಾದ ಶ್ರೀ ಬದರೀನಾರಾಯಣ್ ಅವರು ಹೇಳಿದಹಾಗೆ ಈ ಬಸ್ ಲೈನುಗಳನ್ನು ಖಾಸಗೀಯವರಿಗೆ ಬಿಟ್ಟು ಕೊಡುವುದು ಸೂಕ್ತ ಎಂದು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

[Mr. Deputy Speaker in the Chair]

†ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯ ಮುಂದೆ ಮಾನ್ಯ ಹಣಕಾಸಿನ ಸಚಿವರು ಇಟ್ಟಿರುವ 1969–70ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ನಾನು ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲು ಇಚ್ಛಿಸುತ್ತೇನೆ.

ಮೊದಲನೆಯದಾಗಿ ನಮ್ಮ ಮಂತ್ರಿಗಳು ಪ್ರವಾಸ ಹೋದಂತಹ ಸಂದರ್ಭಗಳಲ್ಲಿ ಅವರು ಜವಾಬ್ದಾರಿಯಿಂದ ವರ್ತಿಸಬೇಕೆಂದು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಸರ್ಕಾರದಿಂದ ಆಗಬೇಕಾದ ಕೆಲಸಕಾರ್ಯಗಳ ಬಗ್ಗೆ ಮಾನ್ಯ ಮಂತ್ರಿಗಳು ಪ್ರವಾಸ ಮಾಡುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ಕೆಲವರು ಖಾಸಗಿಯವರು ಮಂತ್ರಿಗಳನ್ನು ಒಂದು ಸಮಾರಂಭಕ್ಕೆ ಆಹ್ವಾನ ಮಾಡಿದಾಗ ಅವರ ಸ್ಥಾನಮಾನ ಏನು ಯಾವ ಸಂದರ್ಭದಲ್ಲಿ ಅವರು ಕರೆಯುತ್ತಿದ್ದಾರೆ ಎನ್ನುವುದನ್ನು ಯೋಚನೆ ಮಾಡದೆ ಪ್ರವಾಸ ಮಾಡುವುದನ್ನು ಕೆಲವು ಮಂತ್ರಿಗಳು ಬಿಡಬೇಕು ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇಂತಹ ಪ್ರವಾಸದ ಬಗ್ಗೆ ಒಂದೆರಡು ಸಂದರ್ಭಗಳಲ್ಲಿ ನನಗೆ ಅನುಭವವಾಗಿದೆ. ಏತಕ್ಕೆಂದರೆ ಅಂಥಾ ಮಂತ್ರಿಗಳ ಪ್ರವಾಸಗಳು ಆ ತಾಲ್ಲೂಕಿನ ಅಭಿವೃದ್ಧಿ ಮಂಡಳಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿಗಾಗಲಿ, ಆ ಕ್ಷೇತ್ರದ ಶಾಸನ ಸಭಾ ಸದಸ್ಯರಿಗಾಗಲೀ ಗೊತ್ತಿರುವುದಿಲ್ಲ. ಮಂತ್ರಿಗಳ ಪ್ರವಾಸದ ಬಗ್ಗೆ ಟೂರ್ ಪ್ರೋಗ್ರಾಮ್ ಅನ್ನೇನೋ ಮಾಡುತ್ತಾರೆ. ಅದು ಎಲ್ಲಿ ಹೋಗುತ್ತದೆಯೋ ಏನೋ ಅದು ನಮ್ಮ ಕೈಗೆ ಸೇರುವುದೇ ಇಲ್ಲ. ನಮ್ಮ ಕ್ಷೇತ್ರದಲ್ಲಿ ಮಂತ್ರಿಗಳು ಪ್ರವಾಸ ಮಾಡುವಾಗ ಆ ಕ್ಷೇತ್ರದ ಜನಗಳಿಂದ ಚುನಾಯಿತರಾಗಿರುವ ಸದಸ್ಯರು ಅವರ ಜೊತೆಯಲ್ಲಿ ಇಲ್ಲದಿದ್ದರೆ ಜನಗಳಿಗೆ ಏನು ಭಾವನೆ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಆದ್ದರಿಂದ ಮಾನ್ಯ ಮಂತ್ರಿಗಳು ಅದನ್ನು ಬಿಡಬೇಕು. ಇಂತಹ ಸಂದರ್ಭದಲ್ಲಿ ಏನಾಗುತ್ತದೆ ಎಂದರೆ ಇಂತಹ ಸಮಾರಂಭಗಳಲ್ಲಿ ಸಂಬಂಧಪಟ್ಟ ಸದಸ್ಯರೇ ಇಲ್ಲವಲ್ಲ ಎಂದು ಜನರು ತಪ್ಪು ತಿಳಿದುಕೊಳ್ಳುತ್ತಾರೆ. ಈ ವಿಚಾರದಲ್ಲಿ ಒಂದು ಉದಾ

ಹರಣೆ ಹೇಳಬೇಕೆಂದರೆ, ಮದುವೆಯಾದಾಗ ಗಂಡ ಹೆಂಡತಿಗೆ ತಾಳಿ ಕಟ್ಟಿದ ಶಾಸ್ತ್ರವಾದ ಮೇಲೆ ದಾನ ಕೊಡುವ ಪದ್ಧತಿ ನಡೆಯುತ್ತದೆ. ದಾನ ತೆಗೆದುಕೊಳ್ಳುವುದಕ್ಕೆ ಯೋಗ್ಯರಾದ ಜನರು ಇರುತ್ತಾರೆ. ಆದರೆ ಇಂತಹ ಸಮಯದಲ್ಲಿ ಕಿಲಾಡಿಯಾದಂಥವರು ಎಲ್ಲರೂ ಪಂಕ್ತಿಯಲ್ಲಿ ಕುಳಿತುಕೊಳ್ಳಿ, ದಾನ ಕೊಡುತ್ತಾರೆ ಎಂದು ಹೇಳಿಕೊಂಡು ಓಡಾಡುತ್ತಿರುತ್ತಾರೆ. ದಾನ ಕೊಡುವವರಿಗೆ, ಕಿಲಾಡಿಯಾಗಿ ಓಡಾಡುತ್ತಿರುವವರು ಜಾಗ್ರತೆ ಕಣ್ಣಿಗೆ ಬಿದ್ದು ದಾನ, ದಕ್ಷಿಣೆ ಹೆಚ್ಚಾಗಿ ಅವರಿಗೇ ಕೊಟ್ಟು ಬಿಡುತ್ತಾರೆ. ಯಾರಿಗೆ ನಿಜವಾಗಿ ಸಿಗಬೇಕಾಗುತ್ತದೋ ಅಂತಹವರಿಗೆ ಸಿಗದಂತಾಗುತ್ತದೆ. ಮಂತ್ರಿಗಳ ಪ್ರವಾಸವೂ ಸಹ ಈ ರೀತಿ ನಡೆಯುತ್ತಿದೆ.

5-00 P.M.

ಶ್ರೀ ಎಚ್. ಎನ್. ನಂಜೇಗೌಡ.—ಯಾವ ಮಂತ್ರಿಗಳು ಎಂಬುದನ್ನು ಹೇಳಿಬಿಡಿ.

ಶ್ರೀ ನಾಗಪ್ಪ.—ಅಧ್ಯಕ್ಷರು ಅನುಮತಿ ಕೊಟ್ಟರೆ ಹೇಳುತ್ತೇನೆ.

ಶ್ರೀ ಎಚ್. ಎನ್. ನಂಜೇಗೌಡ.—ಅವರು ಅನುಮತಿ ಕೊಟ್ಟಿದ್ದಾರೆ. ಹೇಳಿ.

ಶ್ರೀ ನಾಗಪ್ಪ.—ಅಧ್ಯಕ್ಷರು ಅನುಮತಿ ಕೊಟ್ಟರೆ ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಇಂತಹ ವಿಚಾರಗಳಲ್ಲಿ ತಮ್ಮಂಥ ಮಾನ್ಯ ಸದಸ್ಯರುಗಳು ಮಾತನಾಡುವ ದಾಟಿ ಬೇರೆ, ನಾನು ಮಾತನಾಡುವ ದಾಟಿ ಬೇರೆ. ನನ್ನ ಸಮಯವನ್ನು ಹಾಳುಮಾಡಬೇಡಿ. ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಮೊನ್ನೆ ಪ್ರಧಾನಮಂತ್ರಿಗಳು ಖಾತೆಗಳ ಬದಲಾವಣೆ ಮಾಡಿದರು. ಅದೇ ರೀತಿ ನಮ್ಮ ಮುಖ್ಯಮಂತ್ರಿಗಳೂ ಮಾಡುವುದು ಒಳ್ಳೆಯದು. ಯಾವ ಮಂತ್ರಿಗಳು ಸರ್ಕಾರೀ ಫೈಲ್‌ಗಳನ್ನು ಓದದೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲವೋ ಅಂತಹವರನ್ನು ಮಂತ್ರಿಪದವಿಯಿಂದ ತೆಗೆಯುತ್ತಾರೆಂದು ತಿಳಿದುಕೊಂಡಿದ್ದೇನೆ.

ಇನ್ನು ನೀರಾವರಿಯ ಬಗ್ಗೆ ಹೇಳುವುದಾದರೆ ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಜೊತೆಗೆ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚು ಹೆಚ್ಚು ಕೈಗೊಳ್ಳಬೇಕು. ಮುಖ್ಯವಾಗಿ ಕಮ್ಯೂನಿಟಿ ಇರಿಗೇಷನ್‌ಗೆ ಹೆಚ್ಚಿನ ಪ್ರಾತಿನಿಧ್ಯ ಕೊಟ್ಟರೆ ಬಹಳ ಅನುಕೂಲವಾಗುತ್ತದೆಂದು ನಾನು ಭಾವಿಸಿದ್ದೇನೆ. ''64 ಫ್ಯಾಮಿನ್ ರಿಲೀಫ್ ವರ್ಕ್'' ಕೆಳಗೆ ಏನು ಒಂದು ಹಣವನ್ನು ಖರ್ಚು ಮಾಡಬೇಕೆಂದಿದ್ದೇವೆ, ಆ ಹಣದ ಒಂದು ಭಾಗವನ್ನು ಈ ಕಮ್ಯುನಿಟಿ ಇರಿಗೇಷಿನ್‌ಗೆ ಉಪಯೋಗಿಸಿದರೆ ಬಹಳ ಪ್ರಯೋಜನವಾಗುತ್ತದೆಂದು ನಾನು ನಂಬಿದ್ದೇನೆ.

ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳಬೇಕಾದರೆ ಜಿಲ್ಲಾ ಕೇಂದ್ರಗಳಲ್ಲಿರುವ ಆಸ್ಪತ್ರೆಗಳನ್ನು ಉತ್ತಮಪಡಿಸುವುದಕ್ಕೆ ನಮ್ಮ ಸಚಿವರು ಗಮನ ಕೊಡಬೇಕು.

ಇನ್ನು ಕೃಷ್ಣರಾಜಸಾಗರದ ರೈಟ್ ಬ್ಯಾಂಕ್ ಚಾನಲ್‌ನ ವರುಣಾ ನಾಲೆಯ ಬಗ್ಗೆ ವೃತ್ತಪತ್ರಿಕೆಗಳಲ್ಲಿ ವರದಿಗಳು ಬರುತ್ತಲೇ ಇವೆ. ಈ ಬಗ್ಗೆ ಸರ್ಕಾರದವರು ಒಂದು ತಜ್ಞರ ಕಮಿಟಿಯನ್ನು ನೇಮಕ ಮಾಡಿದ್ದರು. ಅವರು ಕೊಟ್ಟಿರುವ ವರದಿಯ ಪ್ರಕಾರ 1,70,268 ಎಕರೆಗೆ ಮಾತ್ರ ನೀರಾವರಿಯಾಗುತ್ತದೆಂದು ಗೊತ್ತಾಗಿದೆ. ಇಷ್ಟು ಎಕರೆಗೆ 53 ಸಾವಿರ ಟಿ.ಎಂ.ಸಿ.ಎಫ್.ಟಿ. ನೀರು ಬೇಕಾಗುತ್ತದೆಂದು ಹೇಳಿದ್ದಾರೆ. ಅವರ ಅಭಿಪ್ರಾಯ ಈ ರೀತಿ ಇದ್ದರೂ ಕೂಡ, ಕಳೆದ 25 ವರ್ಷಗಳಿಂದ ಕೃಷ್ಣರಾಜಸಾಗರದಿಂದ ನೀರಾವರಿಯಾಗುವ ಪ್ರದೇಶಕ್ಕೆ ಎಷ್ಟು ನೀರನ್ನು ಬಿಡುತ್ತಿದ್ದಾರೆ ಎಂಬುದನ್ನು ನೋಡುವುದಾದರೆ, ವಿಶ್ವೇಶ್ವರಯ್ಯ ಲೋ ಲೆವಲ್ ಚಾನಲ್‌ನಿಂದ ಬೇಸಿಗೆಯಲ್ಲಿ 10 ಸಾವಿರ, ಮಳೆಗಾಲದಲ್ಲಿ 30 ಸಾವಿರ, ಲೀನ್ ಪೀರಿಯಡ್‌ನಲ್ಲಿ 2 ಸಾವಿರ ಟಿ.ಎಂ.ಸಿ.ಎಫ್.ಟಿ. ನೀರನ್ನು ಬಿಡುತ್ತಿದ್ದಾರೆ. ಎವಾಪರೇಷನ್ ಆಗುತ್ತಿರುವುದು 7 ಸಾವಿರ ಟಿ.ಎಂ.ಸಿ.ಎಫ್.ಟಿ. ಎಂದು ತಜ್ಞರು ಹೇಳಿದ್ದಾರೆ. ಆದರೆ ರೆಕಾರ್ಡಿನಲ್ಲಿ ಇರುವ ಹಾಗೆ, ಅದು 6,000 ಮಾತ್ರ. ಪವರ್ ಸ್ಟೇಷನ್‌ಗೆ ದಿನಕ್ಕೆ 900 ಕ್ಯೂಸೆಕ್ಸ್‌ನಷ್ಟು ನೀರನ್ನು ಬಿಡುತ್ತಿದ್ದಾರೆ. ಈ ನೀರು ತಲಕಾಡಿನಲ್ಲಿ ಕಬಿನಿ ನದಿಯಿಂದ ಬರುತ್ತಾ ಇದೆ. ಆದರೆ ಮಳೆ ಇಲ್ಲದೆ, ಕೆರೆಕಟ್ಟೆಗಳು ಬತ್ತಿದಾಗ, ಅಭಾವ ಬಂದಾಗ 4000 ಟಿ.ಎಂ.ಸಿ.ಎಫ್.ಟಿ ಗಿಂತ ಜಾಸ್ತಿ ಯಾವತ್ತೂ ಬಿಟ್ಟಿಲ್ಲ. ಈಗಿರುವ ಅಚ್ಚುಕಟ್ಟಿಗೇ ಈ ನೀರು ಸಾಲದಾಗಿದೆ. ಮತ್ತೆ ಈಗ ಮತ್ತೊಂದು ನಾಲೆಯನ್ನು ತೆಗೆಯಬೇಕೆಂದಿದ್ದಾರೆ. ಕೆ.ಆರ್.ಎಸ್. ಕನ್ಸರ್ವೇಟೀವ್ ಕಮಿಟಿ ಎಂದು ಇದೆ. ಅವರು ನೀರಿನ ಅಭಾವ ಇದ್ದಾಗ್ಗೆ, ಬೆಳೆಗಳ ಪರಿಸ್ಥಿತಿ ನೋಡಿಕೊಂಡು 10 ದಿವಸಕ್ಕೆ ಒಂದೊಂದು ಸಾರಿ ಬಿಡುತ್ತಾರೆ. ಇರುವ ಬೆಳೆಯನ್ನು ಉಳಿಸಿಕೊಳ್ಳುವ ಪ್ರಯತ್ನ ಈಗ ನಡೆಯುತ್ತಿದೆ. ಆದರೆ ತಜ್ಞರು ಮಾಡರ್ನ್ ಮೆಥೆಡ್ ಇರಿಗೇಷನ್ ಅಂದರೆ ಸ್ಪ್ರಿಂಕ್ಲಿಂಗ್ ಮೆಥೆಡ್ ಪದ್ಧತಿಯನ್ನು ಜಾರಿಗೆ ತಂದರೆ ಇನ್ನೂ ಹೆಚ್ಚಿನ ಭಾಗಕ್ಕೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಆದರೆ ಈ ಪದ್ಧತಿಯಿಂದ

(ಶ್ರೀ ಎಂ. ನಾಗಪ್ಪ)

ತರಕಾರಿ ತೋಟಗಳನ್ನು ಮಾಡುವುದಕ್ಕೆ ಸಾಧ್ಯವೇ ಹೊರತು ಕಬ್ಬು ಮತ್ತು ಬತ್ತ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಒಂದು ಪದ್ಧತಿಯಿಂದ ಇನ್ನೂ, 5500 ಎಕರೆಗಳಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವಿದೆ ಎಂದು ಹೇಳಿದ್ದಾರೆ. ಈಗ ಬೆಳೆಯುತ್ತಿರುವ ಕಬ್ಬು ಮತ್ತು ಬತ್ತದ ಗದ್ದೆಗಳಿಗೆ ಸಾಕಷ್ಟು ನೀರು ಒದಗಿಸುತ್ತಾ ಇಲ್ಲದಿರುವುದರಿಂದ ಸ್ಪ್ರಿಂಕ್ಲಿಂಗ್ ಪದ್ಧತಿಯನ್ನು ಜಾರಿಗೆ ತರುವುದು ಸೂಕ್ತವಲ್ಲವೆಂದು ನನ್ನ ಭಾವನೆ. ಐ.ಎ.ಡಿ.ಪಿ. ಪ್ರೋಗ್ರಾಂ ಜಾರಿಗೆ ಬಂದಮೇಲೆ ಸ್ಟ್ಯಾಟಿಸ್ಟಿಕಲ್ ಇಲಾಖೆಯವರು ಪ್ರತಿವರ್ಷ ನಮ್ಮ ಸರ್ಕಾರಕ್ಕೆ ಮತ್ತು ಕೇಂದ್ರ ಸರ್ಕಾರಕ್ಕೆ ಈ ಜಿಲ್ಲೆಯಲ್ಲಿ ಅಗತಕ್ಕಂಥ ಬೆಳೆಗಳ ವರದಿಯನ್ನು ಕಳಿಸುತ್ತಿದ್ದಾರೆ. ಇವರ ವರದಿಯನ್ನು ಲೆಕ್ಕಕ್ಕೆ ತೆಗೆದುಕೊಂಡರೆ ನಮ್ಮ ಜಿಲ್ಲೆಯಲ್ಲಿ ಈಗ ಹೆಚ್ಚಾಗಿ ಬೆಳೆಯುತ್ತಿರುವುದು ಕಬ್ಬು ಮತ್ತು ಬತ್ತವೇ ಜಾಸ್ತಿ. ಸಾಂದ್ರ ಬೇಸಾಯ ಪದ್ಧತಿ ಜಾರಿಗೆ ಬಂದಮೇಲೆ ನಮ್ಮ ಜಿಲ್ಲೆಯ 37 ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಪ್ರಾರಂಭ ಮಾಡಿದರು. 1967-68ರ ಲೆಕ್ಕದ ಪ್ರಕಾರ 42 ಸಾವಿರ ಎಕರೆಯಲ್ಲಿ ಕಬ್ಬನ್ನು ರೈತರು ಬೆಳೆದಿದ್ದಾರೆ. ಈ ವಿಚಾರವನ್ನು ಸ್ಟ್ಯಾಟಿಸ್ಟಿಕಲ್ ಇಲಾಖೆಯವರೇ ಹೇಳಿದ್ದಾರೆ. ಈ ಇಲಾಖೆಯವರು ಒಂದು ಟಿ.ಎಂ.ಸಿ. ಎಫ್.ಟಿ. ಯಷ್ಟು ನೀರು ಎರಡೂವರೆ ಎಕರೆಯಲ್ಲಿ ಕಬ್ಬನ್ನು ಬೆಳೆಯುವುದಕ್ಕೆ ಬೇಕಾಗುತ್ತದೆಂದೂ, ಒಂದು ಟಿ.ಎಂ.ಸಿ. ಎಫ್.ಟಿ.ಯಷ್ಟು ನೀರು ನಾಲ್ಕೂವರೆ ಎಕರೆಯಲ್ಲಿ ಬತ್ತವನ್ನು ಬೆಳೆಯುವುದಕ್ಕೆ ಬೇಕಾಗುತ್ತದೆಂದೂ, ಒಂದು ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು 10 ಎಕರೆಯಷ್ಟು ಸೆಮಿ ಡ್ರೈ ಏರಿಯಾದಲ್ಲಿ ಬೆಳೆ ಬೆಳೆಯುವುದಕ್ಕೆ ಬೇಕಾಗುತ್ತದೆಂದೂ ಹೇಳಿದ್ದಾರೆ. ನನ್ನ ಲೆಕ್ಕದ ಪ್ರಕಾರ 8 ಎಕರೆಯಷ್ಟು ಸೆಮಿ ಡ್ರೈ ಏರಿಯಾಕ್ಕೆ ಒಂದು ಟಿ.ಎಂ.ಸಿ.ಎಫ್.ಟಿ.ಯಷ್ಟು ನೀರು ಬೇಕಾಗುತ್ತದೆ. ನಾವು ಯಾವ ರೀತಿ ಲೆಕ್ಕ ಹಾಕಿದರೂ ಸಹ ಈಗಿನ ಪದ್ಧತಿಗೇ ನೀರು ಸಾಲದಂತಾಗಿದೆ. ನಾವು ಸರಕಾರದಲ್ಲಿ ಇಷ್ಟೇ ಕಳಕಳಿಯಿಂದ ಮನವಿ ಮಾಡುತ್ತಿರುವುದು. ಹತ್ತಿಪ್ಪತ್ತು ವರ್ಷಗಳಿಂದಲೂ ರೈಟ್ ಬ್ಯಾಂಕು ಚಾನಲ್ ಬಗ್ಗೆ ಕೇಳುತ್ತಿರುವುದು ಬಹಳ ಸಂಕುಚಿತ ದೃಷ್ಟಿಯಿಂದ ಹೇಳುತ್ತಾರೆಂದು ತೋರುತ್ತೆ. ನಲವತ್ತು ವರ್ಷಗಳ ಹಿಂದೆ ಕೃಷ್ಣರಾಜಸಾಗರ ನಿರ್ಮಾಣವಾದಾಗ ಆಗಿನ ತಜ್ಞರು ಅಭಿಪ್ರಾಯ ಕೊಟ್ಟಂತೆ ವಿಶ್ವೇಶ್ವರಯ್ಯ ನಾಲಾದ ಮೂಲಕ ನೀರು ಕೊಡುತ್ತಿದ್ದಾರೆ. ಅದರಂತೆ ಇಲ್ಲಿ ರೈತರು ಅಬಾದು ಮಾಡಿಕೊಂಡು ಭತ್ತ, ಕಬ್ಬು ಇವನ್ನು ಬೆಳೆಯುತ್ತಿದ್ದಾರೆ. ಇದಕ್ಕೆ ಇಲ್ಲಿನ ರೈತರು ವಾಟರು ರೇಟು ಹಾಗೂ ಕಾಂಟ್ರಿಬ್ಯೂಷನ್ ಕೊಡುತ್ತಿದ್ದಾರೆ. ತಮ್ಮ ಭೂಮಿಯನ್ನು ಅಬಾದು ಮಾಡಲು ಬಹಳ ಕಷ್ಟಪಟ್ಟಿದ್ದಾರೆ ಮೇಡು ಗುಡ್ಡಗಳನ್ನೆಲ್ಲಾ ಸರಿ ಮಾಡಿಕೊಂಡು ಸಾವಿರಾರು ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ನಿಜವಾಗಿಯೂ ಇಂತಹ ಜನಕ್ಕೆ ಈಗ ನೀರು ಕೊಡುವುದಿಲ್ಲ ಎನ್ನುವುದು ತುಂಬಾ ಶೋಚನೀಯವಾದ ವಿಚಾರ. ಇದರ ಬಗ್ಗೆ ಅನೇಕ ರಿಪೋರ್ಟುಗಳು ಬಂದಿವೆ. ಇದರಲ್ಲಿ ಎಷ್ಟು ಎಕರೆಗಳು ಇವೆ ಎನ್ನುವುದಕ್ಕೆ ಮತ್ತು ಎಷ್ಟು ಭತ್ತ ಹಾಗೂ ಎಷ್ಟು ಕಬ್ಬು ಬೆಳೆಯುತ್ತಿವೆ ಎನ್ನುವುದಕ್ಕೆ ವಿವರಗಳನ್ನು ಕೊಡಲು ಸ್ಟ್ಯಾಟಿಸ್ಟಿಕಲ್ ಡಿಪಾರ್ಟುಮೆಂಟು ಇದೆ, ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟು ಇದೆ, ಅಗ್ರಿಕಲ್ಚರು ಡಿಪಾರ್ಟುಮೆಂಟು ಇದೆ. ಇದಲ್ಲದೆ ಇಲ್ಲಿನ ಜನ ಬಹಳ ಕಷ್ಟಪಟ್ಟು ಭೂಮಿಯನ್ನು ಅಬಾದು ಮಾಡಿ ಬೆಳೆ ಬೆಳೆಯುತ್ತಿದ್ದಾರೆ. ಇನ್ನು ಇದರ ಬಗ್ಗೆ ಅನೇಕರು ವರದಿಗಳನ್ನು ಸರಕಾರಕ್ಕೆ ಕೊಟ್ಟಿದ್ದಾರೆ. ಇದನ್ನು ಮಾಡುವುದು ಸರಿಯಲ್ಲ ಅದಕ್ಕಾಗಿ ನಾವು ಇಲ್ಲಿ ವಿರೋಧಿಸಬೇಕಾಗಿದೆ.

ಇನ್ನೂ ಒಂದು ವಿಚಾರವನ್ನು ಇಲ್ಲಿ ಹೇಳಬೇಕಾಗಿದೆ. ವಿಶ್ವೇಶ್ವರಯ್ಯ ನಾಲಾದಲ್ಲಿ ಒಂದು ಎಂ.ಸಿ.ಎಫ್.ಟಿ. ನೀರಿಗೆ ಇಷ್ಟು ಎಕರೆ ವ್ಯವಸಾಯ ಮಾಡಬಹುದು ಎಂದು ಹಿಂದೆ ಸರಕಾರಕ್ಕೆ ಕೊಟ್ಟಿರುವ ರಿಪೋರ್ಟಿನಲ್ಲೇ ಇದೆ. ಸುಮಾರು ಇಪ್ಪತ್ತೈದು ವರ್ಷಗಳಿಂದಲೂ ಕೃಷ್ಣರಾಜಸಾಗರದಿಂದ ವಿಶ್ವೇಶ್ವರಯ್ಯ ನಾಲಾದವರಿಗೆ ನೀರು ಕೊಡುತ್ತಿದ್ದಾರೆ. ಎಷ್ಟು ನೀರು ಬರುತ್ತಿದೆಯೋ ಅದನ್ನು ಪೂರ್ತಿಯಾಗಿ ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ನಮಗೆ ಕೊಡುವ ನೀರು ಏನಾದರೂ ಉಳಿದರೆ ಅವರು ಬೇಕಾದರೆ ತೆಗೆದುಕೊಳ್ಳಬಹುದು. ಆದರೆ ನಮಗೆ ಕೊಡುತ್ತಿರುವ ನೀರೇ ಸಾಲುವುದಿಲ್ಲ. ಕಬಿನಿ ಯೋಜನೆ ಮೂಲಕ ನೀರು ತೆಗೆದುಕೊಳ್ಳಬಹುದು ಎಂದು ಇಲ್ಲಿ ಹೇಳುತ್ತಾರೆ. 1952ರಲ್ಲಿ ಸರಕಾರಕ್ಕೆ ಅನಂತಾಚಾರ್ ಎನ್ನುವವರು ಹಿಂದೆ ಚೀಫ್ ಇಂಜನೀಯರಾಗಿದ್ದವರು ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ. ಅದರಲ್ಲಿ ಇದರ ಬಗ್ಗೆ ಎಲ್ಲ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. ಅದರಲ್ಲ ಅವರೇ ಹೇಳುವಂತೆ ಮಂಡ್ಯದಲ್ಲಿರುವ ವಿಶ್ವೇಶ್ವರಯ್ಯ ನಾಲಾದ ತುದಿಯಲ್ಲಿರುವ ಜಮೀನಿಗೆ ಈಗ ಬರುತ್ತಿರುವ ನೀರೇ ಸಾಲುವುದಿಲ್ಲ ಇದರಿಂದಾಗಿ ಕೊನೇ ಭಾಗದಲ್ಲಿರುವ ಭೂಮಿಯಲ್ಲಿ ಕಬ್ಬು ಹಾಗೂ ಭತ್ತದ ಬೆಳೆ ಮಾಡಲು ಕಷ್ಟವಾಗುತ್ತದೆ

ಎಂದೂ ಆಗಲೇ ಹೇಳಿದ್ದರು. ಈಗ ಮಾತ್ರ ಇಲ್ಲಿ ಚರ್ಚೆಗೆ ಬಂದಿರುವ ವಿಚಾರ ಒಂದು ದೊಡ್ಡ ಸಮಸ್ಯೆಯಾಗಿದೆ. ಇದು ಹಿಂದೆ ಮಾಡಿರುವುದು ಸರಿಯಾಗಿಲ್ಲ. ಇದನ್ನು ಈಗ ಪುನರ್ವಿಮರ್ಶೆ ಮಾಡಬೇಕಾಗಿದೆ ಎಂದು ಹೇಳುತ್ತಾರೆ. ಇದರಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ಇಲ್ಲಿ ತರಬೇಕಾಗಿದೆ.

1921ನೇ ಇಸವಿಯಲ್ಲಿ ಸರಕಾರದ ಒಂದು ಆರ್ಡರು ಎಂದರೆ ನಂಬರು ಜಿ ವಿ ಪಿ ಡಬ್ಲ್ಯು 411–21 ಕೆ ಎಸ್ ಹೆಚ್2565–75 ತಾರೀಖು 13ನೇ ಮೇ 1921 ಆಗಿ ಇದರಲ್ಲಿ ಯಾವ ರೀತಿಯಾಗಿದೆ ಕೃಷ್ಣರಾಜಸಾಗರ ನಾಲಾದಿಂದ ನೀರು ಕೊಡುವ ಬಗ್ಗೆ ವಿವರಗಳಿವೆ. ಇದು ಈ ರೀತಿ ಇದೆ:

"Canals that should be adopted: The possible Canals are as noted below:

K. R. S. Reservoir:

		Net Irrigable area commanded.
1.	High Level Left Bank Canal from K.R.S.	1,50,000 to 1,70,000 acres. The Canal commands a total area of 3,70,000 acres of which, 2,84,000 is cultivable, but water will not be available for more than 1,50,000 to 1,70,000 acres under this canal according to the Agreement.
2.	Right Bank High Level Canal from K. R. S.	... 50,000 acres.

Kabini Reservoir:

3.	Kabini Left Bank Canal	... 10,200 acres.
4.	Kabini Right Bank Canal	... 36,000 acres.
5.	Suvarnavathy Canal	... 6,000 acrrs.
6.	Extension of C.D.S. Canal	... 15,000 acres.

There is water in the K.R.S. only for (1) or (2) but not for both. If the High Level Canal on the Left Bank is to be avoided, the combined area under (2), (3), (4), (5) and (6) is about 117,000 acres which is only one half of the area of 2,35,000 acres which Mysore is entitled to irrigate according to the Agreement.

It would in our opinion, be financially disadvantageous to divide the extension of irrigation below the reservoir on the two banks. There is a far greater need for extension of irrigation in the Mandya and Malavalli Taluks than in Mysore, Srirangapatna, Nanjangud or T. Narsipur Taluks."

(ಶ್ರೀ ಎಂ. ನಾಗಪ್ಪ)

ಆಗಲೇ ಮಂಡ್ಯದಲ್ಲಿ ನೀರಾವರಿ ಸೌಕರ್ಯ ಹೆಚ್ಚು ಮಾಡಬೇಕು ಎಂದಿತ್ತು. ಈಗ ವರುಣ ನಾಲಾ ಮಾಡಿ ರೈಟ್ ಬ್ಯಾಂಕ್ ಚಾನಲ್ ಮೂಲಕ ನಾಲೆ ತೆಗೆಯಬೇಕು ಎಂದರೆ ಇದಕ್ಕೆ ನೀರು ಮೈಸೂರು ತಾಲ್ಲೂಕು ಹಾಗೂ ಶ್ರೀರಂಗಪಟ್ಟಣಗಳ ಮೂಲಕ ನೀರನ್ನು ಒದಗಿಸಬೇಕು ಎನ್ನುವ ದೃಷ್ಟಿ ಇತ್ತು ಎಂದು ತೋರುತ್ತದೆ. ಬಹುಶಃ ಆಗ ಮಂಡ್ಯ, ಮಳವಳ್ಳಿ ಹಾಗೂ ಮದ್ದೂರು ಇವರ ದೃಷ್ಟಿಯಲ್ಲಿರ ಲಿಲ್ಲ. ಹಿಂದೆ ಲೇಟ್ ಕೃಷ್ಣ ಅಯ್ಯರ್ ಎನ್ನುವವರು ಚೀಫ್ ಇಂಜನಿಯರಾಗಿದ್ದರು ಎಂದು ಕಾಣುತ್ತದೆ. ಅವರೂ ಕೂಡ ಆಗ ಸರಕಾರಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ರೈಟ್ ಬ್ಯಾಂಕ್ ಚಾನಲ್ ಎಂದು ಮಾಡುವುದು ಸರಿಯಲ್ಲ ಎಂದು ಆಗಲೇ ಹೇಳಿದ್ದಾರೆ ಮತ್ತು 32 ಮೈಲಿಗಳವರೆಗೆ ನೀರನ್ನು ಇದರಲ್ಲಿ ಉಪಯೋಗಿಸುವುದಕ್ಕೆ ಆಗುವುದಿಲ್ಲ ಎಂದೂ ಹೇಳಿದ್ದಾರೆ. ಆದುದರಿಂದ ಮತ್ತೆ ಈಗ ಕೃಷ್ಣರಾಜಸಾಗರದಿಂದ ರೈಟ್ ಬ್ಯಾಂಕ್ ಚಾನಲ್ ಎಂದು ಮಾಡುವುದು ಆಗಲೇ ಫೇವರಬಲ್ ಆಗಿಲ್ಲ ಎನ್ನುವ ಅಭಿಪ್ರಾಯವನ್ನು ಸ್ಪಷ್ಟವಾಗಿ ಕೊಟ್ಟಿದ್ದಾರೆ. ಮೈಸೂರಿನವರು ಕಾವೇರಿ ನೀರನ್ನು ಸರಿಯಾಗಿ ಉಪಯೋಗ ಮಾಡುತ್ತಿಲ್ಲ. ನೀರು ವೇಸ್ಟ್ ಮಾಡುತ್ತಿದ್ದಾರೆ. ಮದ್ರಾಸಿನವರು ಆಗಲೇ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಅವರು ಅಲ್ಲಲ್ಲಿ ಕಟ್ಟೆಗಳನ್ನು ಕಟ್ಟುತ್ತಿದ್ದಾರೆ. 1967–68 ರ ಹೊತ್ತಿಗೆ ಲೆಫ್ಟ್ ಬ್ಯಾಂಕ್ ಚಾನಲ್ ಮೂಲಕ 1,50,000 ಎಕರೆಗಳಿಗೆ ನೀರು ಉಪಯೋಗಿಸಬೇಕು ಎಂದು ಇತ್ತು. ಇದರಲ್ಲಿ 1,07,000 ಎಕರೆಗಳಿಗೆ ಮಾತ್ರ ನೀರು ಸಿಕ್ಕಿ ಇರಿಗೇಷನ್ ಡೆವಲಪ್ ಮಾಡಲು ಆಯಿತು ಮತ್ತು 1924 ರಲ್ಲಿ ಆದ ಅಗ್ರಿಮೆಂಟಿನಲ್ಲಿ ಕೂಡ ಇದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಗಳನ್ನೂ ಕೊಟ್ಟಿದ್ದಾರೆ. 1952 ರಲ್ಲಿ ಅನಂತಾಚಾರ್ ಕಮಿಟಿ ಮಾಡಿದಾಗಲೇ ಈ ಪ್ರಶ್ನೆಯನ್ನು ಕೂಲಂಕಷವಾಗಿ ವಿಚಾರ ಮಾಡಿ ಒಂದು ಅಭಿಪ್ರಾಯಕ್ಕೆ ಬಂದಿದ್ದರು. ಆಗಲೇ ರೈಟ್ ಬ್ಯಾಂಕು ಚಾನಲ್ ಮಾಡಲಾಗುವುದಿಲ್ಲ ಮತ್ತು ಇದಕ್ಕೆ ಸರಿಯಾದ ಯಾವ ಪ್ರಾಜೆಕ್ಟ್ ಕೂಡ ಇಲ್ಲ ಎಂದೂ ಹೇಳಿದ್ದರು. ಆದರೆ ಈಗ ಪುನಃ ಇದನ್ನು ಯಾವ ಕಾರಣಕ್ಕಾಗಿ ತರುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಸರಕಾರ ಈಗಾಗಲೇ ಸುಮಾರು 30-40 ವರ್ಷಗಳಿಂದಲೂ ವಿಶ್ವೇಶ್ವರಯ್ಯ ನಾಲಾದಲ್ಲಿರುವ ರೈತರಿಗೆ ನೀರು ಕೊಡುತ್ತಿದ್ದಾರೆ. ಇದಕ್ಕೆ ಇಲ್ಲಿನ ಸಾವಿರಾರು ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಅಬಾದು ಮಾಡಿದ್ದಾರೆ ಮತ್ತು ಇಲ್ಲಿ ಬತ್ತ ಕಬ್ಬು ಅಲ್ಲದೆ ಇತರ ಪೆರಿನ್ನಿಯಲ್ ಕ್ರಾಪ್‌ಗಳೆಂದು ಅವನ್ನೂ ಬೆಳೆಮಾಡುತ್ತಿದ್ದಾರೆ. ಇದನ್ನು ಯಾವ ತಜ್ಞರೂ ಕೂಡ ಒಪ್ಪಿಲ್ಲ ಮತ್ತು ಇಲ್ಲಿನ ಜನರಿಗೆ ಬರುವ ನೀರನ್ನು ತಪ್ಪಿಸಿದರೆ ಅವರು ಮುಂದೆ ವ್ಯವಸಾಯ ಮಾಡುವುದಕ್ಕೇ ಆಗುವುದಿಲ್ಲ. 1942 ರಲ್ಲೇ ಇಂತಹ ಒಂದು ನಾಲೆ ಮಾಡಬೇಕು ಎನ್ನುವ ವಿಚಾರ ಬಂದಾಗ ಇದನ್ನು ಮಾಡಲಾಗುವುದಿಲ್ಲ ಎಂದು ಕೈ ಬಿಡಲಾಗಿತ್ತು. ಸುಮಾರು ನಲವತ್ತು ವರ್ಷಗಳಿಂದಲೂ ವಿಶ್ವೇಶ್ವರಯ್ಯ ನಾಲಾದವರಿಗೆ ನೀರು ಕೊಡುತ್ತಿದ್ದಾರೆ. ಅದನ್ನು ಇಲ್ಲಿ ಉಪಯೋಗ ಮಾಡುತ್ತಿದ್ದಾರೆ. ಮತ್ತು ಈಗ ಹೊಸದಾಗಿ ರೈಟ್ ಬ್ಯಾಂಕ್ ಚಾನಲ್ ಮಾಡಬೇಕು ಎಂದು ಇದರ ಆರ್ಗನೈಸರುಗಳು ಮಾಡಲು ಸರಿಯಾದ ಯಾವ ಒಂದು ಪ್ರಾಜೆಕ್ಟ್ ರಿಪೋರ್ಟ್ ಕೂಡ ಇಲ್ಲ. ಆಗ ಇದ್ದ ತಜ್ಞರು ಕೂಡ ಇದರ ಬಗ್ಗೆ ಒಪಿನಿಯನ್ ಕೊಟ್ಟು ಇದು ಸಾಧುವಾದುದಲ್ಲ ಎಂದೂ ಹೇಳಿದ್ದಾರೆ. ಯಾವಾಗಲಾದರೂ ಇಂತಹ ಒಂದು ನಾಲಾ ಮಾಡಬೇಕಾದರೆ ಅದಕ್ಕೆ ತಕ್ಕ ಹಾಗೆ ಒಂದು ಯೋಜನೆ ಮಾಡಬೇಕು. ಹೀಗೆ ಯಾವ ಯೋಜನೆಯೂ ಇಲ್ಲದೆ ಮಾಡುವುದು ಅರ್ಥವಿಲ್ಲದ ಪ್ರಯತ್ನವಾಗುತ್ತದೆ. ಈಗಾಗಲೇ ಕೃಷ್ಣರಾಜಸಾಗರದಿಂದ ಬರುವ ನೀರೇ ಕಡಿಮೆಯಾಗುತ್ತ ಬರುತ್ತಿದೆ. ಆದುದರಿಂದ ಸರಕಾರದವರು ರೈಟ್ ಬ್ಯಾಂಕ್ ಚಾನಲ್ ಮಾಡಬೇಕು ಎಂದು ಹೇಳುವ ನೀತಿ ಸರಿಯಾದುದಲ್ಲ ಎಂದು ಇಲ್ಲಿ ಹೇಳಬೇಕಾಗಿದೆ.

ಪ್ರತಿವರ್ಷವೂ 8-10 ಸಾವಿರ ಎಕರೆಗಳಿಗೆ ರೆಮಿಷನ್ ಕೊಡುತ್ತಾ ಇದ್ದಾರೆ. ಈ ಸಭೆಯ ಸದಸ್ಯರ ಒಂದು ಡೆಲಿಗೇಷನ್ ಕಳುಹಿಸಿ. ಇಲ್ಲಿಂದ ದಾರಿಯಲ್ಲಿ ಹೋಗುತ್ತಾ ನೋಡಿದರೆ ಗೊತ್ತಾಗುತ್ತದೆ. ಪ್ರತಿದಿವಸವೂ ರೈತರು ಲ್ಯಾಂಟೀನ್ ಹಿಡಿದುಕೊಂಡು ಹೋಗುತ್ತಾರೆ. ಅಲ್ಲಿ ನೀರೇ ಇರುವುದಿಲ್ಲ. ಕಬ್ಬಿಗೆ ನೀರು ಇಲ್ಲದೇ ಒಣಗಿಹೋಗುತ್ತಾ ಇದೆ. ಹೀಗೆ ಒಣಗಿ ಹೋಗುತ್ತಾ ಇರುವ ಬೆಳೆಗೆ ತೊಂದರೆಯಾಗುತ್ತಾ ಇದೆ. 40 ವರ್ಷದಿಂದಲೂ ಭತ್ತ ಬೆಳೆಯುತ್ತಾ ಇರುವ ಕಡೆ ಕಬ್ಬು ಬೆಳೆಯಿರಿ ಎಂದು ಹೇಳಿಬಿಟ್ಟು ಈಪೊತ್ತು ಕಿತ್ತುಹಾಕಬೇಕು ಎನ್ನುವ ಯೋಚನೆ ಮಾಡುತ್ತೀರಾ ?

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬರುವ ಸಂದರ್ಭದಲ್ಲಿ ಶ್ರೀಮಾನ್ ರಾಜಗೋಪಾಲಾಚಾರಿಯವರು ಹಿಂದೂಸ್ಥಾನಕ್ಕೆ ಸ್ವಾತಂತ್ರ್ಯ ಬರಬೇಕಾದರೆ ಹಿಂದೂಸ್ಥಾನ ಪಾಕೀಸ್ಥಾನ ಒಟ್ಟಿಗೆ ಇದ್ದರೆ

ಬರುವುದಿಲ್ಲ ಎಂದು ಹೇಳಿದರು ಅದರಂತೆ ಹಿಂದೂಸ್ಥಾನ ಪಾಕೀಸ್ಥಾನ ಆದಮೇಲೆ ಸ್ವಾತಂತ್ರ್ಯ ಬಂತು. ಸರ್ಕಾರ ಒಂದುವೇಳೆ ತಪ್ಪು ಮಾಡಿದರೆ ಅದನ್ನು ತಿದ್ದುವುದು ಶ್ರೀಮಾನ್ ಶಿವಪ್ಪನವರಿಗೆ ಗೊತ್ತಿಲ್ಲವೇ? ಏನಾದರೂ ನ್ಯೂನತೆಗಳು ಆದರೆ ಅದು ದೇಶಕ್ಕೆಲ್ಲಾ ಅನ್ವಯಿಸುತ್ತದೆ ಎಂದು ತಿಳಿದುಕೊಳ್ಳಬೇಕು. ಈ ನಾಯಕರ ಮೇಲೆ ಅಂತಹ ವಿಶ್ವಾಸವನ್ನು ಇಟ್ಟುಕೊಂಡಿದ್ದುದರಿಂದಲೇ ನಾವು ಅವರನ್ನು ಚುನಾವಣೆ ಮಾಡಿದ್ದೇವೆ. ಕೆಲವು ವಿಷಯಗಳಲ್ಲಿ ತಪ್ಪು ಇದ್ದರೆ ತಿದ್ದೋಣ. ತಮ್ಮಲ್ಲಿ ಒಂದು ವಿಷಯ ಹೇಳುವುದಾದರೆ ಈಗ 2 ವರ್ಷದ ಹಿಂದೆ ಒಂದು ಸಕ್ಕರೆ ಕಂಪನಿಯ ಲೈಸನ್ಸ್ ವಿಷಯದಲ್ಲಿ ನಾನು ನನ್ನ ಮಿತ್ರರೂ ಡೆಲ್ಲಿಗೆ ಹೋಗಿದ್ದೆವು. ಅಲ್ಲಿ ತಜ್ಞರ ಅಭಿಪ್ರಾಯ ಒಂದು ತರಹ ಇದ್ದರೆ ಲೈಸನ್ಸ್ ಕೊಡುವವರ ಅಭಿಪ್ರಾಯ ಬೇರೆ ತರಹ ಇತ್ತು. ಇವರು ತಜ್ಞರಿಗೆ ನಾವೇ ಹೇಳುತ್ತೇವೆ ಎಂದರು. ಈ ರೀತಿ ನಡೆಯಿತು. ಆದುದರಿಂದ ಈ ವರುಣಾ ನಾಲೆ ಬಗ್ಗೆ ಏನೂ ತೀರ್ಮಾನ ತೆಗೆದುಕೊಳ್ಳದೇ ಇದ್ದರೆ ಹೇಗೆ? ಆದುದರಿಂದ ಸರ್ಕಾರದವರು ಇದನ್ನು ಕೂಲಂಕಷವಾಗಿ ವಿಚಾರಿಸಿ ಈ ಅಚ್ಚುಕಟ್ಟು ಪ್ರದೇಶ ಏನು ಇದೆ ಅವರ ಕಷ್ಟಸುಖಗಳನ್ನು ವಿಚಾರಿಸಿ. ಯಾವುದೇ ದೃಷ್ಟಿಯಿಂದ ಅವರಿಗೆ ಅನ್ಯಾಯ ಮಾಡಬೇಡಿ. ಈಗ 40 ವರ್ಷದಿಂದ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಜಮೀನುಗಳನ್ನು ಆಬಾದು ಮಾಡಿದ್ದಾರೆ. ಅವರಿಗೆ ಖಂಡಿತವಾಗಿ ನೀರು ಸಾಕಾಗುವುದಿಲ್ಲ. ಆದುದರಿಂದ ಈ ವರುಣಾ ನಾಲೆಯನ್ನು ಕೈ ಬಿಡುವುದು ಸೂಕ್ತ ಎಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಇಷ್ಟೊಂದು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ. ಎಸ್. ನಾಡಕರ್ಣಿ (ಅಂಕೋಲ).—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರದ ಮುಖ್ಯ ಉದ್ದೇಶ ಡೆಮೋಕ್ರ್ಯಾಟಿಕ್ ಸೋಷಿಯಾಲಿಸಮ್ ಆಗಿದೆ. ಅದರ ಪ್ರಕಾರ ನಾವು ನಮ್ಮ ರಾಜ್ಯದ ಉತ್ಪನ್ನದಿಂದ ಹೆಚ್ಚು ಹಣವನ್ನು ಸರ್ಕಾರಿ ವಲಯದ ಉದ್ಯಮಗಳಲ್ಲಿ ತೊಡಗಿಸಬೇಕು. ಇದರ ಜೊತೆಗೆ ಕೇಂದ್ರ ಸರ್ಕಾರದಿಂದಲೂ ಹಣಕಾಸನ್ನು ತೆಗೆದುಕೊಂಡು ಉದ್ಯಮಗಳಿಗೆ ಹಾಕಬೇಕು. ಇದರ ಮುಖ್ಯ ಉದ್ದೇಶ ಕರಭಾರ ಕಡಿಮೆ ಮಾಡಬೇಕು ಎನ್ನುವುದು. ಆದರೆ ಇವೊತ್ತಿನ ದಿವಸ ಏನಾಗಿದೆ ಎಂದರೆ ನಮ್ಮ ಸರ್ಕಾರದ ಉದ್ಯಮಗಳಲ್ಲಿ ನಷ್ಟವಾಗುತ್ತಾ ಇದೆ ಎಂದು ಹೇಳಿದ್ದಾರೆ. ಮತ್ತು ಸರ್ಕಾರಿ ವಲಯಗಳಲ್ಲಿರುವ ಉದ್ಯಮಗಳನ್ನು ಖಾಸಗಿ ವಲಯಕ್ಕೆ ಕೊಡಬೇಕೆಂದು ಹೇಳುತ್ತಿದ್ದಾರೆ. ಬೇರೆ ದೇಶದಲ್ಲಿ ಹೋಗಿ ನೋಡಿದರೆ ಅಲ್ಲಿ ಉದ್ಯಮಗಳು ಬೇಕಾದಷ್ಟು ಹಣವನ್ನು ಸಂಪಾದನೆ ಮಾಡಿ ಸರ್ಕಾರದ ಇತರ ಕೆಲಸಗಳಿಗೆ ಉಪಯೋಗಿಸುತ್ತಿದ್ದಾರೆ. ನಮ್ಮಲ್ಲಿ ನಷ್ಟವಾಗುತ್ತಾ ಇವೆ. ಆದರೆ ಖಾಸಗಿ ಕ್ಷೇತ್ರಗಳಲ್ಲಿ ಉದ್ಯಮಗಳು ಚೆನ್ನಾಗಿ ನಡೆದು ರಾಜ್ಯಕ್ಕೆ 10 ಆಣೆ, 12 ಆಣೆ, 14 ಆಣೆ ಇನ್‌ಕಂ ಟ್ಯಾಕ್ಸ್ ಕೊಟ್ಟು ಲಾಭ ಮಾಡುತ್ತಿದ್ದಾರೆ. ಪಬ್ಲಿಕ್ ಸೆಕ್ಟಾರ್‌ನಿಂದ ಉತ್ಪನ್ನ ಕಡಿಮೆಯಾಗಿ ನಷ್ಟ ಜಾಸ್ತಿಯಾಗಿದೆ. ಇದರಿಂದ ಅವಕ್ಕೆ ಹಾಕಿರತಕ್ಕಂಥ ದುಡ್ಡು ಸರ್ಕಾರದ ಬೊಕ್ಕಸಕ್ಕೆ ಬರುತ್ತಾ ಇಲ್ಲ. ಇದು ಏತಕ್ಕೆ ಎನ್ನುವುದನ್ನು ಪರೀಕ್ಷೆ ಮಾಡಬೇಕು. ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಈ ಉದ್ಯಮಗಳಲ್ಲಿ ನೇಮಿಸಿಕೊಳ್ಳತಕ್ಕಂಥ ನೌಕರರು ಅವರು ಬಹಳ ಮಟ್ಟಿಗೆ ಯೋಗ್ಯತೆ ಇಲ್ಲದೇ ಇರತಕ್ಕಂಥಹವರು ಮತ್ತು ಎಷ್ಟು ಬೇಕೋ ಅದಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಅವರನ್ನು ನೇಮಿಸಿಕೊಂಡಿದ್ದಾರೆ. ಅದರಲ್ಲಿ ತಮಗೆ ಬೇಕಾದವರಿಗೆ, ಮಿನಿಸ್ಟರ್ಸ್, ಎಂ.ಎಲ್.ಎ. ಇಂತಹವರ ಸಂಬಂಧಿಕರನ್ನು ನೇಮಿಸಿಕೊಂಡಿದ್ದಾರೆ. ಈ ರೀತಿ ನಾನಾ ಅಧಿಕಾರಿಗಳಿಗೆ ಪಗಾರ ಹೆಚ್ಚು ಹೋಗುತ್ತಾ ಇದೆ. ಆ ರೀತಿ ನೇಮಿಸಿಕೊಳ್ಳಲಿ, ಅದರ ಕೆಲಸ ಇಲ್ಲವೇ ಇದ್ದರೂ ಕೂಡ ಈ ರೀತಿ ನೇಮಿಸಿಕೊಂಡಿರುವುದು ತಪ್ಪು. ಉದಾಹರಣೆ ಹೇಳುವುದಾದರೆ ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್, ಭದ್ರಾವತಿ.

ಮೈಸೂರು ಐರನ್ ಅಂಡ್ ಸ್ಟೀಲ್ ವರ್ಕ್ಸ್ ಭದ್ರಾವತಿ ಇವರಿಗೆ ಬಿಲ್‌ಟ್ಸ್ ಬೇಕೆಂದು ಮೆಸರ್ಸ್ ಭಾರತ್ ಸ್ಟೀಲ್ ರಿ-ರೋಲಿಂಗ್ ಮಿಲ್ಸ್, ವೈಟ್‌ಫೀಲ್ಡ್ ಇವರಿಗೆ 7 ಲಕ್ಷ ರೂಪಾಯಿ ಸರ್ಕಾರದವರು ಸಾಲ ಕೊಟ್ಟರು. ಅದು ಕೆಲಸ ಮಾಡುತ್ತಾ ಇಲ್ಲ. ಮತ್ತು ಈಗಾಗಲೇ ಆ ಕಂಪನಿ ಮೇಲೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದವರದ್ದು 8 ಲಕ್ಷ ರೂಪಾಯಿಯಷ್ಟು ಸಾಲ ಇದೆ. ಮತ್ತು ಅದರ ಬಡ್ಡಿಯೂ ಇದೆ. ಇದು ಮೊದಲನೇ ಛಾರ್ಜು. ಈ 7 ಲಕ್ಷ ರೂಪಾಯಿ ಕೊಟ್ಟಿರತಕ್ಕಂಥಾದ್ದನ್ನು ಸೆಕೆಂಡ್ ಛಾರ್ಜು ಎಂದು ಮಾಡಿದ್ದಾರೆ. ಇದು ಜನಗಳ ಕಣ್ಣು ಒರೆಸುವುದಕ್ಕೆ ಮಾಡತಕ್ಕಂಥಾದ್ದು. ಇದಲ್ಲದೆ ಒಂದು ಸ್ಪೆಷಲ್ ಜಿ.ಓ. ಆಯಿತು. ಏನೆಂದರೆ ಎಂ.ಎಸ್. ರೌಂಡ್ಸ್ ಪರ್ಚೇಸ್ ಮಾಡಬೇಕಾದರೆ 33 ಪರ್ಸೆಂಟು ರಿಸರ್ವ್ ಆಗಿರಬೇಕೆಂದು ಮಾಡಿದ್ದಾರೆ. ಆದರೆ 12 ಪರ್ಸೆಂಟ್ ಮೇಲೆ ತೆಗೆದುಕೊಳ್ಳುತ್ತಾ ಇಲ್ಲ. ಏತಕ್ಕೆಂದರೆ ಅಲ್ಲಿ ಫೇವರಿಟಿಸಮ್ ಇದೆ. ಇದನ್ನು ಎಕ್ಸಿಕ್ಯೂಟೀವ್ ಎಂಜನೀಯರ್ ಚೀಫ್ ಇಂಜನೀಯರ್‌ಗೆ ರಿಪೋರ್ಟ್ ಮಾಡಿದರೂ ಕೂಡ ಯಾರೂ ಗಮನ ತೆಗೆದುಕೊಳ್ಳುತ್ತಾ ಇಲ್ಲ. ಕೆಲವು ಕಚ್ಚಾ ಮಾಲುಗಳನ್ನೂ ತೆಗೆದುಕೊಳ್ಳುತ್ತಾರೆ.

(ಶ್ರೀ ಡಿ. ಎಸ್. ನಾಡಕರ್ಣಿ)

ಉಳಿದುದನ್ನು ಬೇರೆ ಪ್ರೈವೇಟ್ ಕಂಪನಿಯಿಂದ ತೆಗೆದುಕೊಳ್ಳುತ್ತಾರೆ. ಇದರಿಂದ ಅವರಿಗೆ ಸಹಾಯವಾಗುತ್ತದೆ. ಭದ್ರಾವತಿಯಲ್ಲಿ ವಿಪರೀತ ಕರಪ್ಷನ್ ಇದೆ. ಸಣ್ಣಸಣ್ಣ ಉದ್ಯಮದಲ್ಲೂ ಕೂಡ ಇದ್ದೇ ಇದೆ. ಓರ್‌ನ್ನು ತೆಗೆದುಕೊಳ್ಳುವುದರಲ್ಲೂ ಕೂಡ ಲಂಚಗುಳಿತನ ಇದ್ದೇ ಇದೆ ಇದರಿಂದ ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್ ತೃಪ್ತಿಕರವಾಗಿ ಕೆಲಸ ಮಾಡದೇ ಇರುವುದರಿಂದ ಲಾಭ ಸಂಪಾದನೆ ಮಾಡುತ್ತಾ ಇಲ್ಲ.

ಇನ್ನು ಇದೇ ತರಹ ಜೋಗ್ ಫಾಲ್ಸ್ ಟೂರಿಸ್ಟ್ ಸೆಂಟರ್ ವಿಷಯ. ಜೋಗ ಫಾಲ್ಸ್‌ನ್ನು ಒಂದು ಟೂರಿಸ್ಟ್ ಸೆಂಟರ್ ಮಾಡಿ ಅಲ್ಲಿ ಇಮ್ಮಾರತ್ ಹೋಟೇಲ್ ಬಿಲ್ಡಿಂಗ್‌ನ್ನೂ ಒಬ್ಬ ಖಾಸಗೀ ವ್ಯಕ್ತಿಗೆ ವರ್ಷಕ್ಕೆ 500 ರೂಪಾಯಿಯಂತೆ ಗೊತ್ತುಪಾಡಿ 5 ವರ್ಷಕ್ಕೆ ಗುತ್ತಿಗೆಗೆ ಕೊಟ್ಟಿದ್ದಾರೆ. ಆ ವ್ಯಕ್ತಿ ಒಂದು ಕೋಣೆಗೆ ಒಂದು ದಿವಸಕ್ಕೆ 10 ರೂಪಾಯಿ ಛಾರ್ಜು ಮಾಡುತ್ತಾನೆ. ಇದರಿಂದ ಅವರಿಗೆ ಕನಿಷ್ಠಪಕ್ಷ ವರ್ಷಕ್ಕೆ 50 ಸಾವಿರ ರೂಪಾಯಿ ಉತ್ಪತ್ತಿ ಬರುತ್ತದೆ. ಅದಲ್ಲದೆ ಫುಡ್ ಅಂಡ್ ಅದರ್ ಛಾರ್ಜಸ್ ಬೇರೆ. ವರ್ಷಕ್ಕೆ 10 ತಿಂಗಳೂ ಕೂಡ ಚೆನ್ನಾಗಿ ನಡೆಯುತ್ತದೆ. ಅದನ್ನು ಟೆಂಡರ್ ಕರೆಯದೆ ಒಬ್ಬ ವ್ಯಕ್ತಿಗೆ ಸಹಾಯ ಮಾಡುವುದಕ್ಕೆ ಈ ರೀತಿ ಮಾಡಿದ್ದಾರೆ. ಬೇರೆಯವರಿಗೆ ಅಷ್ಟು ಉತ್ಪತ್ತಿ ಬಂದರೂ ಕೂಡ ನಮ್ಮ ಸರ್ಕಾರ ಅದನ್ನು ನಡೆಸುವುದಕ್ಕಾಗುವುದಿಲ್ಲ.

5-30 P.M.

ಕೃಷ್ಣರಾಜಸಾಗರ ಹೋಟೆಲ್, ಹೋಟೆಲ್ ಮೆಟ್ರೋಪೋಲ್ ಮತ್ತು ಕೃಷ್ಣರಾಜಸಾಗರದಲ್ಲಿರುವ ರೆಸ್ಟೋರೆಂಟ್ ಇಷ್ಟೂ ಕೂಡಿ ವರ್ಷಕ್ಕೆ 3,000 ರೂಪಾಯಿಗಳಿಗೆ ಕೊಟ್ಟಿದ್ದಾರೆಂದು ಕೇಳಿದ್ದೇನೆ. ಅದನ್ನು ಬಿ ಆರ್ F ಕಂಪೆನಿಗೆ ಕೊಟ್ಟಿದ್ದಾರೆ. ಅವರು ಚುನಾವಣಾ ನಿಧಿಗೆ ಹಣ ಕೊಡುತ್ತಿದ್ದಾರೆ. ಅವರು ಒಂದು ಕೋಣೆಗೆ ಒಂದು ದಿವಸಕ್ಕೆ 50 ರೂಪಾಯಿ ಬಾಡಿಗೆ ತೆಗೆದುಕೊಳ್ಳುತ್ತಾರೆ. ಅದು ವಿನಾ ರೆಸ್ಟೋರೆಂಟ್‌ನಲ್ಲಿ ಒಂದೇ ಒಂದು ದಿವಸದಲ್ಲಿ ಒಂದು ಸಾವಿರ ರೂಪಾಯಿ ಉತ್ಪನ್ನವಿದೆ. ಈ ಪ್ರಕಾರದಲ್ಲಿ ನಡೆಯುತ್ತಿದೆ. ಅವರ ಕಂಟ್ರಾಕ್ಟು ಮುಗಿಯುತ್ತಾ ಬಂದಿದೆ ಎಂದು ಕೇಳುತ್ತೇನೆ. ಇನ್ನು ಮುಂದಾದರೂ ಸಂಬಂಧಪಟ್ಟ ಮಂತ್ರಿಗಳು ಟೆಂಡರ್ ಕರೆದು ಯಾರು ಹೆಚ್ಚು ಕೊಡುತ್ತಾರೆ ಅವರಿಗೆ ಕೊಡಬೇಕೆಂದು ಸೂಚಿಸುತ್ತೇನೆ.

ಬೆಂಗಳೂರು ನಗರದಲ್ಲಿ ಬಿ.ಟಿ.ಎಸ್. ಬಸ್ಸುಗಳು 350ರ ಮೇಲೆ ಓಡಾಡುತ್ತಿವೆ. ಅದರಲ್ಲಿ ಅಡ್ವರ್ಟೈಸ್‌ಮೆಂಟ್ ಇದೆ. ರೈಲ್ವೆ ಖಾತೆಯವರು ರೈಲ್ವೆ ನಿರ್ವಹಣದಲ್ಲಿ ಎರಡು ಲಕ್ಷ ರೂಪಾಯಿ ಉತ್ಪನ್ನವನ್ನು ಅಡ್ವರ್ಟೈಸ್‌ಮೆಂಟ್‌ನಿಂದ ಪಡೆಯುತ್ತಿದ್ದಾರೆ. ಅದೇ ಬಿ.ಟಿ.ಎಸ್. ಎಷ್ಟು ಉತ್ಪನ್ನ ಮಾಡುತ್ತಿದೆ ? ಇದರಲ್ಲಿ ಎಂಟು ಸಾವಿರ ರೂಪಾಯಿಗಳಿಗೆ ಎಂಟು ವರ್ಷಗಳ ಕಾಲಕ್ಕೆ ಗುತ್ತಿಗೆಗೆ ಕೊಟ್ಟಿದ್ದಾರೆ. ಇದರಿಂದ ಎಷ್ಟು ಲುಕ್ಸಾನಾಗುತ್ತದೆ ? ಇದರಲ್ಲಿ ಕಂಟ್ರಾಕ್ಟು ಪಡೆದಿರುವ ವ್ಯಕ್ತಿಗಳು ಅದನ್ನು ಬೇರೆಬೇರೆಯವರಿಗೆ ಬೋರ್ಡ್ ಹಚ್ಚಲಿಕ್ಕೆ ಕೊಡುತ್ತಿದ್ದಾರೆ ಮತ್ತು ಅವರಿಂದ ಒಂದು ಬಸ್ಸಿಗೆ 200–300 ರೂಪಾಯಿ ತೆಗೆದುಕೊಳ್ಳುತ್ತಾರೆ.

ವಿದ್ಯುಚ್ಛಕ್ತಿ ಮಂಡಲಿ ವಿಚಾರ ತೆಗೆದುಕೊಂಡರೆ ಅಲ್ಲಿ ಚೇರ್‌ಮನ್ ಆಗಿ ಇದ್ದವರು 25 ಲಕ್ಷ ರೂಪಾಯಿಗಳ ಸಾಮಾಗ್ರಿಗಳನ್ನು ಖರೀದಿ ಮಾಡಿದರು. ಅದಕ್ಕೆ ಟೆಂಡರ್ ಕರೆಯಲಿಲ್ಲ. 25 ಲಕ್ಷ ರೂಪಾಯಿಗಳ ವ್ಯವಹಾರ ಮಾಡಿ ಹೊರಟಿದ್ದಾರೆ. ಅದರಲ್ಲಿ ಬಂದಂಥ ಪ್ರತಿಫಲ ಯಾರಿಗೆ ಹೋಯಿತು ಎಂದು ನಾನು ಬಿಡಿಸಿ ಹೇಳಬೇಕಾಗಿಲ್ಲ.

ಸ್ವಜನ ಪಕ್ಷಪಾತ ಮಾಡುತ್ತಾರೆ ಎನ್ನುವುದಕ್ಕೆ ಒಂದು ವಿಚಾರ ಹೇಳುತ್ತೇನೆ. ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಯುತ್ತಿದೆ. ಅದು ವರ್ಷೇ ವರ್ಷೇ ನಡೆಯುತ್ತಿದೆ. ಅದಕ್ಕೆ ಸಾವಿರಾರು ರೂಪಾಯಿ ಬೆಲೆ ಬಾಳುವ ಕಾರುಗೇಟೆಡ್ ಷೀಟುಗಳನ್ನು ಕೊಡುತ್ತಾರೆ. ಅದನ್ನು ಕಾಳಸಂತೆಯಲ್ಲಿ ಮಾರಿ ಅದರಿಂದ ಬರುವ ಹಣ ಯಾರ ಜೇಬಿಗೆ ಹೋಗುತ್ತದೆ ? ಹೀಗೆ ಹೇಳಲಿಕ್ಕೆ ಹೋದರೆ ಅನೇಕ ವಿಷಯಗಳುಂಟು. ಹೆಚ್ಚು ವೇಳೆ ಇಲ್ಲದ್ದರಿಂದ ಅವನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ.

ಈ ರೀತಿ ಮಾಡುತ್ತಿರಬೇಕಾದರೆ ಸಮಾಜವಾದದಲ್ಲಿ ವಿಶ್ವಾಸ ಎಲ್ಲಿದೆ ? ಚುನಾವಣೆಗಳ ಸಮಯದಲ್ಲಿ ಮಾತ್ರ ಸಮಾಜವಾದದ ವಿಷಯವನ್ನು ಹೇಳುತ್ತಾರೆ. ಇವರು ಮಾಡುವುದೇನೆಂದರೆ ಈ ತರಹ ಸರ್ಕಾರಕ್ಕೆ ಬರುವಂಥ ಉತ್ಪನ್ನವನ್ನು ತಮ್ಮ ಜೇಬಿಗೆ ಹಾಕಿಕೊಂಡು ಹೋಗುತ್ತಿ

ದ್ದಾರೆ. 'ಸ್ಲೋ ಡೆತ್' ಎನ್ನುವ ಹಾಗೆ ನಿಧಾನವಾಗಿ ಸಮಾಜವಾದವನ್ನು ಸಾಯಿಸುವುದಕ್ಕೆ ಹೊರಟಿದ್ದಾರೆ. ಈ ವರ್ಷ ಗಾಂಧಿ ಶತಾಬ್ದಿ ವರ್ಷ ಎಂದು ಹೇಳುತ್ತಿದ್ದಾರೆ. ಈ ಸಲ ಸಮಾಜವಾದವನ್ನು ಸಂಪೂರ್ಣವಾಗಿ ಮುಗಿಸಿಬಿಡುತ್ತಾರೆ; ಅದನ್ನು ಸಮಾಧಿ ಮಾಡಲಿಕ್ಕೆ ಹೊರಟಿದ್ದಾರೆ.

ನಾಲ್ಕನೆ ಯೋಜನೆ ಸಂಬಂಧದಲ್ಲಿ ಒಂದು ಮಾತು. ಪ್ಲಾನಿಂಗ್ ಕಮಿಷನ್ ಉಪಾಧ್ಯಕ್ಷರಾದ ಶ್ರೀ ಗಾಡ್ಗಿಲ್ ಅವರು ಗುಜರಾತ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ಮೈಸೂರು ರಾಜ್ಯಕ್ಕೆ ಬರುವಂಥ ಪಾಲು ಸರಿಯಾಗಿ ಬರಲಿಲ್ಲ. ರಾಷ್ಟ್ರದಲ್ಲಿರುವ 13 ರಾಜ್ಯಗಳಲ್ಲಿ ಮೈಸೂರು 9ನೇ ಸ್ಥಾನವನ್ನು ಪಡೆದಿದೆ. ಕೆಲವು ಕಡೆ 500 ಕೋಟಿ ರೂಪಾಯಿ, ಕೆಲವು ಕಡೆ 250 ಕೋಟಿ ರೂಪಾಯಿ ಹೀಗೆಲ್ಲ ಕೊಡುತ್ತ ಬಂದು ನಮ್ಮ ಮೈಸೂರು ರಾಜ್ಯಕ್ಕೆ 30.03 ಕೋಟಿ ರೂಪಾಯಿ ಅಥವಾ ಸೇಕಡ 1.62 ಪ್ರಮಾಣದಲ್ಲಿ ಸಿಕ್ಕಿದೆ. ನಮಗಿಂತ ಕಡಮೆ ಪಂಜಾಬ್, ಅಸ್ಸಾಂ, ಕೇರಳ, ರಾಜಾಸ್ಥಾನ.

ನಮ್ಮ ದೇಶಕ್ಕೆ ವಿದೇಶಿ ವಿನಿಮಯ ಬೇಕಾಗಿದೆ. ಅದು ಸಿಕ್ಕಬೇಕಾಗಿದ್ದರೆ ರಫ್ತು ಮಾಡಬೇಕು. ಸುಲಭವಾಗಿ ನಮ್ಮಲ್ಲಿ ಖನಿಜಗಳು ಸಿಕ್ಕುತ್ತವೆ. ಇದನ್ನು ರಫ್ತು ಮಾಡಿದರೆ ನಮ್ಮಿಂದ ಖರೀದಿ ಮಾಡುವ ದೇಶಗಳು ಕಾಂಪಿಟಿಟಿವ್ ರೇಟ್ಸ್ ನೋಡುತ್ತವೆ. ಕಡಮೆ ದರದಲ್ಲಿ ಸಿಕ್ಕಿದರೆ ಅದನ್ನು ಅವರು ಒಯ್ಯಬಹುದು. ನಮ್ಮ ಸರ್ಕಾರ ಈ ದೃಷ್ಟಿಯಿಂದ ಯಾವ ಯೋಜನೆಯನ್ನೂ ಇಟ್ಟುಕೊಂಡಿಲ್ಲ ಎಂದು ಹೇಳಬೇಕಾಗಿದೆ.

ಉತ್ತಮವಾದ ಕಬ್ಬಿಣದ ಅದಿರು ಹೇರಳವಾಗಿ ಬಳ್ಳಾರಿ ಹೊಸಪೇಟೆ ಭಾಗದಲ್ಲಿ ಸಿಕ್ಕುತ್ತದೆ. ಅದನ್ನು ಕಡಮೆ ಖರ್ಚಿನಲ್ಲಿ ಹೊರಗಡೆಗೆ ಕಳಿಸುವುದು ಹೇಗೆ ಎಂದು ಯೋಚನೆ ಮಾಡಬೇಕು. ಕೆಲವು ತಜ್ಞರು ಕೊಟ್ಟಿರುವ ಅಭಿಪ್ರಾಯಗಳನ್ನು ಈ ಸಂಬಂಧದಲ್ಲಿ ನಾನು ಇಲ್ಲಿ ಒತ್ತಿ ಹೇಳಬಯಸುತ್ತೇನೆ.

> "Karwar port is one of the finest and safest natural harbours in the world. Its superiority over other ports is undisputed. The Chairman of the National Shipping Board has stated: Mysore, a major maritime State should have a ship-building yard. Karwar port is the third best port in the world and should be developed into a major port. Karwar, one of the best natural ports in the country has been neglected for a long time for various political reasons. Mysore has not made enough noise to make itself felt in the matter of port development."

ಇದು ಬೇರೆ ಯಾರೂ ಹೇಳಿದ್ದಲ್ಲ. ನ್ಯಾಷನಲ್ ಷಿಪಿಂಗ್ ಬೋರ್ಡ್ ಚೇರ್‌ಮನ್ ಅವರು ಹೇಳಿದ್ದು. ಇದನ್ನು ಒಂದು ಉದಾಹರಣೆಯಾಗಿ ಹೇಳಿದ್ದೇನೆ. ಇಷ್ಟೇ ಅಲ್ಲದೆ ಹೊಸಪೇಟೆ-ಹುಬ್ಳಿ-ಕಾರವಾರ ರೈಲು ಮಾರ್ಗವನ್ನು ಪೂರೈಸಿದರೆ ಅದಕ್ಕೆ 19 ಕೋಟಿ ರೂಪಾಯಿ ವೆಚ್ಚವಾದರೂ ಅದನ್ನು ಐದಾರು ವರ್ಷಗಳಲ್ಲಿ ಸಂಪೂರ್ಣವಾಗಿ ಹಿಂದಕ್ಕೆ ಪಡೆಯಬಹುದು. ಈ ಯೋಜನೆಯನ್ನು ಮಾಡದೆ ಬೇರೆ ರೀತಿಯಲ್ಲಿ ಯೋಚನೆ ಮಾಡುತ್ತ ಇದ್ದಾರೆ. ಗೋವ, ಮದ್ರಾಸ್ ಬಂದರುಗಳ ಮೂಲಕ ಅದಿರನ್ನು ಸಾಗಿಸುವುದಕ್ಕೆ ಹೋದರೆ ಸರ್ಕಾರಕ್ಕೆ ಲುಕ್ಸಾನಾಗುತ್ತದೆ.

ನಮ್ಮ ಜಿಲ್ಲೆಯೊಳಗೆ ಅರಣ್ಯ ಸಂಪತ್ತಿದೆ. ಆದರೆ ಅದರಿಂದ ನಮ್ಮ ಜಿಲ್ಲೆಯ ಅಭಿವೃದ್ಧಿಗೆ, ಅಲ್ಲಿಯ ಬಡತನದ ನಿವಾರಣೆಗೆ ಏನೂ ಸಹಾಯವಾಗುತ್ತಿಲ್ಲ. ಅಲ್ಲಿಗೆ ಬೇಕಾದ ಯಾವುದೂ ಯೋಜನೆಗಳನ್ನು ಮಾಡುವುದೂ ಇಲ್ಲ.

ಕಾರವಾರ ಜಿಲ್ಲೆಯಲ್ಲಿ ಬೇಕಾದಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಲಿಕ್ಕೆ ಶಕ್ಯವಿದೆ. ಮೈಸೂರು ರಾಜ್ಯದಲ್ಲಿ ಮೂರು ನಾಲ್ಕು ವರ್ಷಗಳಿಂದ ಹೆಚ್ಚು ವಿದ್ಯುತ್ತನ್ನು ಉತ್ಪಾದನೆ ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹೊಳೆಗಳು ಬಹಳ ಇವೆ. ಆದರೂ ಅಲ್ಲಿ ವಿದ್ಯುತ್ತನ್ನು ಉತ್ಪಾದನೆ ಮಾಡುವುದಕ್ಕೆ ಬೇಕಾದ ಯೋಜನೆಗಳನ್ನು ಮಾಡಿಲ್ಲ. ನಮ್ಮಲ್ಲಿ ಆಗುವ ವಿದ್ಯುತ್ತನ್ನು ನೆರೆ ರಾಜ್ಯಗಳಿಗೆ ಕೊಡುತ್ತಿದ್ದಾರೆ. ಆದರೆ ಅದನ್ನು ನಮ್ಮ ರಾಜ್ಯದಲ್ಲಿಯೇ ಉಪಯೋಗಿಸಿಕೊಳ್ಳುವ ಹಾಗೆ ರಾಜ್ಯದಲ್ಲಿ, ಮುಖ್ಯವಾಗಿ ಕಾರವಾರ ಜಿಲ್ಲೆಯಲ್ಲಿ ಯಾವ ಉದ್ಯೋಗಗಳನ್ನೂ

(ಶ್ರೀ ಡಿ. ಎಸ್. ನಾಡಕರ್ಣಿ)

ಕೈಕೊಳ್ಳುವುದಕ್ಕೆ ಬೇಕಾದ ಪ್ರಯತ್ನಗಳನ್ನು ಮಾಡಿಲ್ಲ. ನಮ್ಮ ರಾಜ್ಯಕ್ಕೆ ಇರುವ 200 ಮೈಲಿ ಕರಾವಳಿಯಲ್ಲಿ 100 ಮೈಲಿ ನಮ್ಮ ಜಿಲ್ಲೆಯಲ್ಲಿದೆ ಮೀನುಗಾರಿಕೆಗೆ ಬಹಳ ಅನುಕೂಲಗಳಿವೆ. ಆದರೂ ಯಾವುದೇ ನಿಶ್ಚಿತವಾದ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿಲ್ಲ. ನಮ್ಮಲ್ಲಿ 150 ಇಂಚು ಮಳೆ ಬರುತ್ತದೆ. ಆದರೆ ಆ ನೀರನ್ನು ಉಪಯೋಗ ಮಾಡಿಕೊಂಡು ಎರಡು ಮೂರು ಬೆಳೆ ತೆಗೆದುಕೊಳ್ಳುವಂಥ ಅವಕಾಶ ಇದ್ದರೂ ನೀರಾವರಿ ಅಭಿವೃದ್ಧಿ ಮಾಡಲಿಕ್ಕೆ ಯಾವ ತರಹ ಯೋಜನೆ ಯನ್ನೂ ಮಾಡದೆ ಮಳೆಯಿಂದ ಬಂದ ನೀರೆಲ್ಲ ಸಮುದ್ರಕ್ಕೆ ಹರಿಯುತ್ತಿದೆ. ಅಲ್ಲಿ ಬತ್ತ ಬೆಳೆಯತಕ್ಕ ಭೂಮಿ ಬಹಳ ಕಡಮೆ ಇದೆ. ನಮ್ಮ ಭಾಗದಲ್ಲಿ ಹಂದಿ ಕಾಟ ಜಾಸ್ತಿಯಾಗಿರುವುದರಿಂದ ಬತ್ತ ಹಾಕಿದರೆ ಅದನ್ನು ಹಂದಿಗಳು ತಿಂದು ಹಾಕಿ ನಮ್ಮ ಉಪಯೋಗಕ್ಕೆ ಹೆಚ್ಚಾಗಿ ಸಿಕ್ಕುವುದಿಲ್ಲ. ಈ ರೀತಿಯಲ್ಲಿ ಎಷ್ಟೋ ತೊಂದರೆಗಳು ಇದ್ದರೂ ಲೆವಿ ಹಾಕುತ್ತಾರೆ. ಇದರಿಂದ ನಮಗೆ ಮುನಾಫೆ ಇಲ್ಲ. ಈ ಬಜೆಟ್ಟಿನಲ್ಲಿ ನಮ್ಮ ಜಿಲ್ಲೆಯ ಮಟ್ಟಿಗೆ ಯಾವುದೇ ಯೋಜನೆಗಳಿಲ್ಲ. ಆದುದರಿಂದ ಇದನ್ನು ವಿರೋಧ ಮಾಡಿ, ಅಧ್ಯಕ್ಷರು ಇಷ್ಟು ಸಮಯ ಕೊಟ್ಟಿದ್ದಕ್ಕೆ ಅವರಿಗೆ ಅಭಿವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗಮ್ಮ (ಕಲಮಾಲ).—ಮಾನ್ಯ ಅಧ್ಯಕ್ಷರೇ, ಈ ಬಜೆಟ್ಟಿನಮೇಲೆ ಒಂದೆರಡು ಮಾತುಗಳನ್ನಾಡಬೇಕೆಂದು ನಾನು ನಿಂತಿದ್ದೇನೆ. ಇನ್ನೂ ಬಂಗಾಲ ತಪ್ಪಿಲ್ಲ. ಮೈಸೂರು ಜನರಿಗೆ ಅಲ್ಲಲ್ಲಿ ಡ್ಯಾಂ ಕಟ್ಟಿ ನೀರಾವರಿ ಸೌಕರ್ಯ ಮಾಡಿದ್ದರೂ ಕೂಡ ನೀರು ಕೆಲವು ಕಡೆಗೆ ಇನ್ನೂ ಬಂದಿಲ್ಲ, ಒಂದು ಭಾಗಕ್ಕೆ ಬಂದಿದೆ, ಮೂರು ಭಾಗಕ್ಕೆ ಬಂದಿಲ್ಲ. ಇದರ ಸಲುವಾಗಿ ಡ್ಯಾಂ ನಿಂದ ನೀರು ಬರುವಂತೆ ಕಾಲುವೆ ತೆಗೆಸಬೇಕೆಂದು ಕೇಳಿಕೊಳ್ಳುತ್ತೇನೆ. ಚಂದ್ರಬಂಡಎರಿಯ ಕಾಲುವೆ ಮಾಡಿ ನೀರು ಕೊಡಬೇಕು, ಕೃಷ್ಣ ಹೊಳೆಯ ನೀರನ್ನು ಉಪಯೋಗಿಸಲು ಲಿಫ್ಟ್ ಇರಿಗೇ ಷನ್ ಅವಕಾಶ ಮಾಡಿ ಕೊಡಬೇಕು ಎಂದು ಎಸ್ಟಿಮೇಟ್ ಮಾಡಿದ್ದಾರೆ. ಆ ಕೆಲಸ ಮಂಜೂರು ಮಾಡಿಕೊಡಬೇಕು. ಸರಕಾರ ಬೇಕಾದಷ್ಟು ಅನುಕೂಲಮಾಡಿದೆ. ಆದರೂ ವಿರೋಧ ಪಕ್ಷದವರು ಕಾಂಗ್ರೆಸ್ ಆಡಳಿತವಿದೆಯೆಂದು ಬೇಕಾದಷ್ಟು ಟೀಕೆ ಮಾಡುತ್ತಾರೆ. 8 ಕೋಟಿ ರೂಪಾಯಿ ಗಳನ್ನು ತಾಲ್ಲೂಕುಬೋರ್ಡುಗಳಿಗೆ ಖರ್ಚು ಮಾಡಿದ್ದಾರೆಂದು ಹೇಳುತ್ತಿದ್ದರು. ಆದರೆ ಅದಕ್ಕೆ ಅಂಕಿ ಅಂಶ ಉಂಟು, ಲೆಕ್ಕ ಆಡಿಟ್ ಆಗುತ್ತದೆ. ಹೀಗಿರುವಾಗ ಅದನ್ನು ನೋಡಬೇಕು, ಹಾಗೆ ಮಾಡದೆ ವಕೀಲರಾಗಿ ಸಣ್ಣಪುಟ್ಟ ಮಾತುಗಳನ್ನಾಡಬಾರದು. ಇದು ದೇವಲೋಕದ ಸಭೆ ಇದ್ದ ಹಾಗಿದೆ, 8 ಕೋಟಿ ಖರ್ಚು ಮಾಡಿರುವುದನ್ನು ತೋರಿಸುತ್ತೇವೆ, ಒಂದೊಂದು ಜಿಲ್ಲೆಗೂ ಮಾನ್ಯ ಮಂತ್ರಿಗಳು ಹೋಗಿ ಎಷ್ಟು ಕೆಲಸವಾಗಿದೆ, ರಸ್ತೆ ಎಷ್ಟಾಗಿವೆ ಎಂದು ನೋಡಿದ್ದಾರೆ, ಲೆಕ್ಕಪತ್ರ ಇದೆ. ತಾಲ್ಲೂಕು ಬೋರ್ಡ್ ಛೇರ್ಮನ್ ಎಂ. ಎಲ್. ಎ. ಕೂಡಿಕೊಂಡು ಹೋಗಿ ನೋಡಿ ಬಂದಿದ್ದೇವೆ. ಇಷ್ಟು ಕೆಲಸ ಮಾಡಿದ್ದರೂ ಸರಕಾರ ವ್ಯರ್ಥ ಮಾಡಿದೆ ಎಂದು ವಿರೋಧ ಪಕ್ಷ ಹೇಳು ತ್ತಿದೆ. ಈ ರೀತಿ ಹೇಳಬಾರದು. ಹೊಟ್ಟೆಕಿಚ್ಚು ಏಕೆ? ನಮಗೆ ನೀರಿನ ಸೌಕರ್ಯ ಮಾಡಿಕೊಡ ಬೇಕು, ಕಾಲುವೆ ಮಾಡಬೇಕು, ರಸ್ತೆ ಮಾಡಬೇಕು, ಬಾವಿಗಳಿಗೆ ಅವಕಾಶ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹಾಗೆ ಬೇಕಾದ್ದನ್ನು ಕೇಳದೆ ಭೂತದ ವಿಚಾರ, ಚಾಮುಂಡಿ ಬೆಟ್ಟದ ಮೇಲಿರುವ ಮಹಿಷಾಸುರನ ವಿಚಾರ ಮುಂತಾದ್ದನ್ನೆಲ್ಲಾ ಹೇಳುತ್ತಾರೆ. ಯಾವಾಗಲೂ ಸರಿಯಾದ ಮಾತನಾಡಬೇಕು. ನಮ್ಮ ಸಮಾಜ ಕಲ್ಯಾಣ ಮಂತ್ರಿಗಳು ತಪಶೀಲಾಗಿ ವರದಿಮಾಡಿ ದ್ದಾರೆ. ಏನೇನು ಕೆಲಸವಾಗಿದೆ ಎಂಬುದನ್ನು ಹೇಳಿದ್ದಾರೆ. ಕಾಯಿದೆ ಕಾನೂನು ಇರುವಾಗ ಅದರ ಪ್ರಕಾರ ಖರ್ಚು ಮಾಡುತ್ತಿದ್ದಾರೆ. ಯಾವುದನ್ನು ಹೇಳಬೇಕಾದರೂ ತಿಳಿದುಕೊಂಡು ಹೇಳ ಬೇಕು. ಈ ಮನೆಯಲ್ಲಿ ಹೇಗೆ ಮಾತನಾಡಬೇಕೆಂಬುದನ್ನರಿತು ಶಾಂತವಾಗಿ ಮಾತನಾಡಬೇಕು. ಇಲ್ಲಿಯ ಸದಸ್ಯರಿಗೆ ಬಹಳ ಜವಾಬ್ದಾರಿಯುಂಟು. ಇಲ್ಲಿ ನಡೆಯುವ ಕಾರ್ಯಕಲಾಪಗಳನ್ನು ನೋಡುವುದಕ್ಕೆ ಅನೇಕರು ಬಂದಿರುತ್ತಾರೆ. ನಮಗೆ ಬೇಕಾದ ಕೆಲಸ ಮಾಡಿಕೊಡಬೇಕೆಂದು ಕೇಳುವುದನ್ನು ಬಿಟ್ಟು ಮಹಿಷಾಸುರನ ಕಥೆ ತೆಗೆದುಕೊಂಡು ಏನೇನೋ ಹೇಳುವುದು ಸರಿಯಲ್ಲ. ಭೂತ ಬೆಟ್ಟದಿಂದ ಬೆಟ್ಟಕ್ಕೆ ಓಡುವಹಾಗೆ ಏನೇನೋ ಹೇಳುತ್ತಾರೆ. ಅದು ಯೋಗ್ಯವಲ್ಲ. ನಮ್ಮ ರೈತರಿಗೆ ಲಿಫ್ಟ್ ಇರಿಗೇಷನ್ ಅನುಕೂಲವಾಗಬೇಕು. ಮೈಸೂರು ಜಿಲ್ಲೆಯಲ್ಲಿ 5 ಲಕ್ಷ 80 ಸಾವಿರ ಎಕರೆಗೆ ನೀರಾವರಿ ಸೌಕರ್ಯ ಕೊಡಲು ಅಂದಾಜಿರುವಾಗ 2 ಲಕ್ಷ ಎಕರೆಗೆ ಅನುಕೂಲ ವಾಗಿರಬಹುದು. ಇನ್ನೂ 3 ಲಕ್ಷ 80 ಸಾವಿರ ಎಕರೆಗೆ ಅನುಕೂಲವಾಗದೆ ಹಾಗೇ ಇದೆ, ಇದಕ್ಕೆ ನೀರನ್ನೊದಗಿಸಬೇಕೆಂದು ಕೇಳುತ್ತಿದ್ದೇವೆ. ಆದರೆ ವ್ಯವಸಾಯ ಇಲಾಖೆಯವರು ಕೊಡುವುದಿಲ್ಲ ವೆಂದು ಹೇಳುತ್ತಿದ್ದಾರೆ. ಮಂತ್ರಿಗಳಿಗೆ ಇದನ್ನು ತಿಳಿಸುತ್ತೇನೆ, 15-20 ವರ್ಷ ಆಗಿದೆ, ಇನ್ನೂ ಎರಡು ಲಕ್ಷ ಎಕರೆ ನೀರಾವರಿಯಾಗಿಲ್ಲ. ಇದುವರೆಗೆ ಎರಡೂವರೆ ಲಕ್ಷ ಎಕರೆ ನೀರಾವರಿಯಾಗಿರ

ಬಹುದು. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಯಾವಾಗ ಆಗುವುದೋ ಏನೋ. ಅದಾಗುವವರೆಗೆ ನಾವಿರುವುದಿಲ್ಲ. ಆದುದರಿಂದ ನೀರನ್ನು ಜಾಗ್ರತೆ ಕೊಟ್ಟು ವ್ಯವಸಾಯಗಾರರಿಗೆ ಸಂತೋಷವನ್ನುಂಟುಮಾಡಬೇಕೆಂದು ಒತ್ತಾಯಮಾಡಿ ಹೇಳುತ್ತೇನೆ. ಇದನ್ನು ಪದೇ ಪದೇ ಹೇಳುತ್ತಿದ್ದೇನೆ. ಅಭಾವ ಪರಿಸ್ಥಿತಿ ಇರುವುದರಿಂದ ಬಾವಿಗಳಿಗೆ ಇನ್ನೂ ಹೆಚ್ಚು ಅವಕಾಶ ಕೊಡಬೇಕು, ಈಗ ಸಾಕಷ್ಟು ಅವಕಾಶ ಕೊಟ್ಟಿದ್ದರೂ ಅದು ಸಾಲದು.

ಇನ್ನೊಂದು ವಿಷಯ. ಹರಿಜನರ ಸಲುವಾಗಿ ಮನೆಗಳಿಗೆ ಮೂರುವರೆ ಕೋಟಿ ರೂಪಾಯಿ ಕೊಟ್ಟಿದ್ದು ಸಾಲದು, ಇದಕ್ಕೆ ಇನ್ನೂ ಮೂರೂವರೆ ಕೋಟಿ ಬೇಕು, ಅಷ್ಟನ್ನು ಕೊಟ್ಟರೆ ಸ್ವಲ್ಪ ಅನುಕೂಲವಾಗಬಹುದು. ಈಗ ಎಂಟು ಸಾವಿರ ಅರ್ಜಿಗಳು ಬಂದಿವೆ, ಇನ್ನೂ ಬರುತ್ತಿವೆ. ಆದುದರಿಂದ ತೀವ್ರವಾಗಿ ಮೂರೂವರೆ ಕೋಟಿ ಕೊಟ್ಟು ಹರಿಜನರಿಗೆ ಮತ್ತು ಗಿರಿಜನರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಅನುಕೂಲ ಮಾಡಿ ಕೊಡಬೇಕು. ಹರಿಜನರಿಗೆ ಮರ ಕೊಡುತ್ತಾರೆ, 200 ರೂಪಾಯಿ ಬೆಲೆಬಾಳುವ ಮರಗಳನ್ನು ಕೊಡುತ್ತಾರೆ. ಕೆಲವು ಕಡೆ ಹೆಚ್ಚು ಕೊಡಬೇಕಾಗುತ್ತದೆ. ಶಿವಮೊಗ್ಗ, ದಾಂಡೇಲಿಗಳಲ್ಲಿ ಹೆಚ್ಚು ಬೇಕಾಗುತ್ತದೆ, ಇದನ್ನು ಮಂತ್ರಿಗಳಿಗೆ ಹೇಳಿದ್ದೇನೆ, ಅವರು ಮಾಡೋಣ ಎಂದು ಹೇಳಿದರು. ಅದರ ಸಲುವಾಗಿ ಮಾನ್ಯ ಮಂತ್ರಿಗಳನ್ನು ಪದೇ ಪದೇ ಮನವಿ ಮಾಡಿಕೊಳ್ಳುತ್ತೇನೆ. ಲಿಫ್ಟ್ ಇರಿಗೇಷನ್ ಬಗ್ಗೆ ಆದಷ್ಟು ಸೌಕರ್ಯಗಳನ್ನು ಒದಗಿಸಿಕೊಡಬೇಕೆಂದು ಮನವಿ ಮಾಡಿಕೊಂಡು ನನ್ನ ಚಿಕ್ಕ ಭಾಷಣವನ್ನು ಮುಗಿಸುತ್ತೇನೆ.

Sri N. B. SIRDESAI (Khanapur).— Mr. Speaker, while opposing the budget estimates for 1969–70, I would like to point out that in the last year's budget estimate in the beginning there was a surplus of Rs. 11.98 crores. The budget had to be revised and in the revised budget there was a deficit of 0.01 crore. This year there is a deficit of Rs. 13.22 crores. This clearly shows that the financial position of the State is going from bad to worse.

On going through the budget speech and the budget figures, I cannot but call it a bad budget because year by year the deficit is increasing. By placing this deficit budget before the House, I think the Hon'ble Finance Minister has thrown a challenge to the patience of the people of this State and also the administrative ability of this Government. He could have placed a balanced budget before this House by effecting more economy measures. He could not place a balanced budget. Then what of the surplus of the budget ? How is the State going to fill up the deficit ? It must be through Central assistance or local resources or through loans from the public or through overdraft. But whether the Government has attempted to mobilise the local resources is the question to be considered here. It appears that the Government have not tried their level best to mobilise the local rural resources. Now there are no quick-yielding projects and whatever projects this Government has taken up are not yet yielding income. This Government has also not achieved any progress in the agricultural and industrial spheres. This Government has failed to achieve progress in agricultural production and industrial output and so this State shall have to face a very difficult future.

It is disgraceful to note that only about 10 per cent of the cultivable land in the State is under irrigation. It is mentioned on page 3 that the Government has invested money on works of a productive and protective nature. But I may mention here that the works which have

(SRI N. B. SIRDESAI)

been undertaken by the Government are not of a productive and protective nature because the tanks which are restored and constructed are not in a position to irrigate even fifty per cent of the area under their command.

At page 2 of the Budget Speech it is mentioned that this Government is going to spend about Rs. 10 crores for relief works. I have brought to the notice of the Government by putting questions here that the Government is spending uselessly on relief works because they are not being carried out properly and that Government and the departmental heads should exercise strict vigilance in this behalf; but the Hon'ble Minister for Revenue replied to my L. A. question that the works are commensurate with the money spent on them. The works which are feasible are not being undertaken by this Government. At least in Khanapur Taluk, the works which are proposed by the Taluk Development Board and the local M. L. As are not being undertaken and they are being treated as unfeasible though they are feasible. That is why agricultural production has suffered much.

Another reason for the failure to achieve agricultural production is that this Government has not got any definite price policy. As a result the agriculturists are being discouraged and they are losing confidence and enthusiasm because they are not getting a good price for their agricultural produce. They are being discouraged each year and the Government have failed to achieve progress in agriculture.

At page 11, para 20 of the booklet, the Hon'ble Minister has said that about Rs. 3.20 crores have been reserved for the construction and restoration of reservoirs under minor irrigation. But in malnad area such minor works are not being undertaken. Though representations have been submitted and though the local M. L. As have requested many a time, the Government have not paid any heed to their request. For months together applications for the supply of power are being delayed and power supply is not given to the electric pumps for months together by the M. S. E. B. Even the oil engines and electric motors are not being sanctioned for months together by the Agro-Industries Corporation and there are concrete instances of this type from taluka. How then can this Government expect increase in agricultural production?

As regards industrialisation, there is great disappointment in this State. At page 20, para 40, the Hon'ble Finance Minister has said that many facilities are being offered for the industrialists such as land, water, power, etc. If that were so, many industrialists would have come forward and set up new industries in this State and the Government need not have invited industrialists from outside. For months together their applications are delayed and they are

disappointed and discouraged. That is why the local industrialists are not forthcoming to take up industries here. It is said that one High Power Committee is also constituted under the Chairmanship of the Chief Minister. But of what good it is to those who are not getting benefits from that Committee ? Sir, from all angles, this Budget appears to be more pessimistic, but the Hon. Minister for Finance appears to be over-optimistic.

6–00 P.M.

At page 15, para 29, it is stated that provision of Rs. 65 lakhs is made for drinking water wells. The drinking water wells, which have been constructed by the defunct District Boards, go dry immediately after the rainy season ; from November to June they are without water. The Government says that it has decided to leave no village without a drinking water well. I would like to submit here that in villages, wherein the existing drinking water wells go dry, new wells should be sanctioned and constructed.

At page 16, para 32 of the booklet, it is rightly said by the Hon. Minister for Finance that educational system in this country has undergone many changes and sufficient attention is not paid for the improvement of the quality of education. As a beginning for the qualitative improvement, this Government has decided to appoint 325 Graduate Head Masters for the higher primary schools. I think, the Graduate Head Masters appointed for the Joint Central Schools under the Bombay Rules, should not be treated on par with these new Graduate Head Masters. Their cadre should be equalised with the cadre of A. D. E. I. s of the Education Department. Government is slow and is hesitating to abolish District School Boards and have a uniform administration of the primary education. Government intends to constitute a new body on the lines of the existing District School Boards at district level for all Districts. It would be a new form and it is done just to provide some facilities for their pets, and they do not want to abolish the District School Boards. I suggest that this administration should be entrusted to the Taluk, Development Boards or the Department should take over the administration of these primary schools.

According to the recent decision of the Mysore Government, no grant will be given for the High Schools for Boys for five years which are under the private management. Of course, it is discouraging to the persons who want to open new schools. Without having regard to the demand of the public in rural areas or the needs of public of rural areas, this Government has decided not to give grant for five years to the High Schools under private management. I suggest that at least for malnad rural areas, where there is great need and where the Government is not going to open new High Schools, such rigid rules should not be made applicable.

(SRI N. B. SRIDESAI)

Coming to Co-operative Societies, I would like to say that these societies have become just like grazing lands for office bearers. These societies are in a shattered condition and they are not functioning properly. Really speaking, they are just like the back-bone to build up the assets of the State. But, they are not functioning properly and the money is going a waste. I request the concerned Hon. Minister to look into this matter and see that these co-operative societies function properly and help the State to build up the assets.

There is no special provision for low-paid Government servants such as Patils, Talaties and Shanubhogues. Only Rs. 65 lakhs have been reserved for payment of remuneration for Patels, and One crore of rupees for the payment of salaries to Village Accountants. They are full-fledged servants and therefore some additional provision should have been made for low-paid servants.

Much of the forest revenue is consumed by the officials of the Department of Police. It is deplorable that such things are allowed to happen in this State. Smuggling of Sandalwood and timber is allowed with the connivance of the Government servants. In the beginning they join hands with the businessmen and allow them to take sandalwood and timber, and afterwards they try to make a show by attaching some one or two lorries and prosecute some people nominally. This must be stopped if the Government really intends to bridge the gap of the deficit.

Under economy measures, Government in their letter of 8th October 1968 indicated an economy cut in expenditure to the tune of Rs. 5.47 crores by not permitting filling up of vacant posts in the Government departments. On the other hand, more economy could have been suggested by stopping lavish expenditure in Government Departments. Under public health, a saving of Rs. 0.38 lakhs is shown. I would like to ask the concerned Hon. Minister whether this amount includes the unpaid amount of salary and honoraria to the S.M.P. Doctors serving under the Taluk Boards of Belgam District, because in spite of representations and requests made to the Hon. Minister and the concerned officers, the salaries of these Doctors have not been paid since last one year, and as such they were made to work without any remunerasion. I would like to ask whether the Government wants to effect economy by withholding the salaries and increments of these Government servants ?

Forest lands are not being released for cultivation, though cultivable forest land is available to the turn of 4,000 acres in my Taluk. Government is only making a show by saying that forest land would be released for cultivation. At the time of releasing revenue lands, this Government is levying fee of T.T. Fine for no fault of the cultivators.

Sir, I had no mind to talk about Shiva Sena during the budget speech. But, some hon. members have raised this matter. They should not have raised it. It is being criticised without finding the facts and truth as to who have committed the attrocities. It is no use criticising or condemning a party unless the facts are verified. I do not admit the atrocities committed by any party in this country. Sir, as this matter has been discussed on the floor of this House separately, I think, during the discussion on the Budget, the hon. Members stick to speak only on matters pertaining to the Budget.

I thank the hon. Chair and conclude my speech.

ಶ್ರೀ ಎಸ್. ಬಿ. ವಸ್ತ್ರದ್ (ತಿಕೋಟ).—ಸನ್ಮಾನ್ಯ ಅಧ್ಯಕ್ಷರೇ, ಅರ್ಥಸಚಿವರಾದ ಮಾನ್ಯ ಶ್ರೀ ರಾಮಕೃಷ್ಣ ಹೆಗಡೆಯವರು 1969–70ನೇ ಸಾಲಿನ ಬಗ್ಗೆ ಮಂಡಿಸಿರತಕ್ಕ ಬಡ್ಜೆಟ್ಟನ್ನು ಸಮರ್ಥಿಸಿ ಕೆಲವು ಸಲಹಾಸೂಚನೆಗಳನ್ನು ಕೊಡಲು ಅಪೇಕ್ಷೆ ಪಡುತ್ತೇನೆ.

ಪ್ರಥಮವಾಗಿ ನಮ್ಮ ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿಯನ್ನು ನಿವಾರಿಸುವುದಕ್ಕಾಗಿ ಸರ್ಕಾರದವರು ಸಾಕಷ್ಟು ತೀವ್ರಗತಿಯಿಂದ ಶೀಘ್ರವಾದ ಕಾರ್ಯಕ್ರಮಗಳನ್ನು ತೆಗೆದುಕೊಂಡು ಅನೇಕ ಕೂಲಿಗಾರರ ಜನತೆಯನ್ನು ಕಾಪಾಡಿದರು. ಅಲ್ಲದೆ ಈ ಬಗ್ಗೆ ಎಷ್ಟು ಹಣ ಖರ್ಚುಮಾಡ ಬೇಕಾಗಿತ್ತೋ ಅದಕ್ಕಿಂತ ಕೆಲವು ಜಿಲ್ಲೆಗಳಲ್ಲಿ ಹೆಚ್ಚಿಗೆ ಹಣ ವ್ಯಯವಾಗಿದೆ. ಕೊಡಬೇಕಾದ ಹಣ ವನ್ನು ಇನ್ನೂ ಸಾಕಷ್ಟು ಜಿಲ್ಲೆಗಳಿಗೆ ಕೊಡಬೇಕಾಗಿದೆ. ಅದನ್ನು ಕೂಡಲೇ ಆಯಾ ಜಿಲ್ಲೆಗಳಿಗೆ ಕೊಡಬೇಕೆಂದು ನನ್ನ ಸಲಹೆ. ಏಕೆಂದರೆ, ಇನ್ನೂ ಅನೇಕ ಕಾಮಗಾರಿಗಳು ಅಪೂರ್ತಿಯಾಗಿವೆ. ಅಪೂರ್ತಿಯಾಗಿರತಕ್ಕ ಕಾಮಗಾರಿಗಳನ್ನು ಪೂರ್ತಿಯಾಗಿ ಮಾಡುವುದಕ್ಕೆ ಸರ್ಕಾರದವರು ಸಾಕಷ್ಟು ಹಣವನ್ನು ಒದಗಿಸಿಕೊಡಬೇಕು. ಹಣವನ್ನು ಒದಗಿಸಿದ್ದರೂ ಕೂಡ ಪೂರ್ತಿಯಾಗದೇ ಇರುವ ಕೆಲಸಗಳನ್ನು ಜಾಗ್ರತೆಯಾಗಿ ಪೂರ್ತಿಮಾಡಬೇಕೆಂದು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ಹೇಳುತ್ತೇನೆ. ಆದರೆ ಪ್ರತ್ಯಕ್ಷವಾಗಿ ಕೆಲವು ಜಿಲ್ಲೆಗಳಲ್ಲಿ ನೋಡಿದರೆ ಯಾವ ಕೆಲಸವೂ ಕೂಡ ಮುಂದುವರಿದಿಲ್ಲ. ಎಲ್ಲಾ ಕೆಲಸಕಾರ್ಯಗಳೂ ಬಂದ್ ಆಗಿವೆ. ಅಪೂರ್ತಿ ಯಾಗಿರತಕ್ಕ ಕಾಮಗಾರಿಗಳನ್ನು ಪೂರ್ತಿಗೊಳಿಸುವುದಕ್ಕಾಗಿ ಸರ್ಕಾರದವರು ಬೇಗನೆ ಸಂಬಂಧ ಪಟ್ಟವರಿಗೆ ಸಲಹೆ ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ನನ್ನ ಇಚ್ಛೆಯನ್ನು ವ್ಯಕ್ತಪಡಿಸುತ್ತೇನೆ. ಅಲ್ಲದೆ ಈಗ ಕೆಲವು ಸಲಹಾಸೂಚನೆಗಳನ್ನು ಕೊಡಬೇಕೆಂದರೆ, ಮೋಜಣಿ ಇಲಾಖೆ ಏನಿದೆ ಅದಕ್ಕೆ ಮೊದಲು ಒಂದು ಸೂಚನೆ ಕೊಡಬೇಕು. ಯಾವ ಒಬ್ಬ ರೈತ ಮೋಜಣಿ ಮಾಡಬೇಕೆಂದರೆ, ಒಂದು ವರ್ಷ, 6 ತಿಂಗಳು, 3 ವರ್ಷಗಳಾದರೂ ಕೂಡ ಮೋಜಣಿಯಾಗದೆ ಬಹಳ ತೊಂದರೆಪಡು ತ್ತಾನೆ. ಈ ಮೋಜಣಿ ಕೆಲಸ ಕನಿಷ್ಠಪಕ್ಷ 3–4 ತಿಂಗಳಲ್ಲಾದರೂ ಮಾಡಿಕೊಡಬೇಕೆಂದು ನಾನು ಸೂಚಿಸಬಯಸುತ್ತೇನೆ.

ಇನ್ನೊಂದು ವಿಷಯ. ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಅಲ್ಲಿರ ತಕ್ಕ ಒಂದು ಗ್ರಾಮರಸ್ತೆ ಏನಿದೆ ಅದು ಅತಿಕ್ರಮಣವಾಗಿ ಅನೇಕ ತೊಂದರೆಗೆ ಜನಗಳು ಒಳ ಗಾಗುತ್ತಿದ್ದಾರೆ. ಅದೇ ರೀತಿಯಾಗಿ ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗ ಬೇಕಾದರೆ ಇತ್ತೀಚೆಗೆ ಚಕ್ರಬಂಡಿಯಲ್ಲಾಗಲೀ, ಟ್ರಕ್‌ನಲ್ಲಾಗಲೀ, ಮೋಟಾರ್‌ನಲ್ಲಾಗಲೀ, ಎದುರಾಗಿ ಹೋಗಿ ಬರುವುದಕ್ಕೆ ಆಗುವುದಿಲ್ಲ. ಅಲ್ಲಿ ಬಹಳ ಶೋಚನೀಯ ಪರಿಸ್ಥಿತಿ. ಅತಿ ಕ್ರಮಣವಾಗಿರತಕ್ಕ ಗ್ರಾಮದಿಂದ ಹೋಗುವ ರಸ್ತೆಗಳನ್ನು ಸುಗಮವಾಗಿ ಹೋಗುವ ಹಾಗೆ ಮಾಡಿ ರಸ್ತೆ ಸೌಕರ್ಯಗಳನ್ನು ಏರ್ಪಾಡುಮಾಡಿಕೊಡಬೇಕು. ಅಲ್ಲದೆ ಬಾವಿ ಸಲುವಾಗಿ ಕೊಡುವ ಹಣ 5 ಸಾವಿರ ರೂಪಾಯಿಗಳಿಗಿಂತ ಜಾಸ್ತಿ ಇಲ್ಲ. ಅದನ್ನು ಜಿಲ್ಲಾಧಿಕಾರಿಗಳು ಕೊಡುವ ಏರ್ಪಾಡು ಇದೆ. ಅದಕ್ಕಾಗಿ ಪ್ರಕರಣಗಳು ಬರುವುದು ಆಗಿದೆ. ಮೊದಲು ತಹಸೀಲ್ದಾರ್ ಎಲ್ಲಾ ನೋಡಿದ ಮೇಲೆ ಎಗ್ಜಿಕ್ಯುಟಿವ್ ಇಂಜನಿಯರ್ ಪುನಃ ನೋಡಿ ಶಿಫಾರಸುಮಾಡಬೇಕಾಗಿದೆ. ಆದ್ದರಿಂದ ಎಗ್ಜಿಕ್ಯುಟಿವ್ ಇಂಜನಿಯರಿಗೆ ಅದನ್ನು ಕಳುಹಿಸುವ ಅವಶ್ಯಕತೆ ಇಲ್ಲ. ಅದನ್ನು ಲಘುವಾಗಿ ಮಾಡಿದರೆ ಜಾಗ್ರತೆಯಾಗಿ ಜನಗಳಿಗೆ ಅದರ ಸೌಕರ್ಯ ಸಿಗುತ್ತದೆ.

ಇನ್ನು ಬಂಡಿಂಗ್ ವಿಷಯ. ನಮ್ಮ ಜಿಲ್ಲೆಯಲ್ಲಿ ಈಗಾಗಲೇ ಬಹಳ ದುಷ್ಕಾಲ ಪರಿಸ್ಥಿತಿ ಇದೆ. ಒಡ್ಡು ಹಾಕುವ ಕೆಲಸ ಮತ್ತು ಮಣ್ಣಿನ ರಸ್ತೆಯ ಕೆಲಸ ಒಳ್ಳೆಯ ರೀತಿಯಾಗಿದೆ. ಆದರೆ ಬಂಡಿಂಗ್ ಕಾರ್ಯಕ್ರಮದಲ್ಲಿ ಹಿಂದಿನ ರೈತರಿಗೆ ಇದಕ್ಕಾಗಿ ಎಷ್ಟು ಖರ್ಚಾಗುತ್ತಿತ್ತೋ ಅದನ್ನು

(ಶ್ರೀ ಎಸ್. ಬಿ. ವಸ್ತ್ರದ್)

ಈಗಿನ ರೈತ ವಸೂಲುಮಾಡುವ ಪದ್ಧತಿ ಇದೆ. ಸಾಮಾನ್ಯವಾಗಿ ಒಬ್ಬ ರೈತನ ಜಮೀನು 4-8 ಎಕರೆ ಇದ್ದರೆ ಅದರ ಕಿಮ್ಮತ್ತು 500-600 ರೂಪಾಯಿಗಳು ಇದ್ದರೆ ಬಂಡಿಂಗ್ ಕೆಲಸದ ಕಿಮ್ಮತ್ತು 1,200 ರೂಪಾಯಿಗಳಾಗುತ್ತದೆ. ಈ ದೃಷ್ಟಿಯಿಂದ ಈ ಬಂಡಿಂಗ್ ಹಾಕುವುದು ಬೇಡವೆಂದು ಅನೇಕ ಜನ ರೈತರು ತಕರಾರು ಮಾಡುತ್ತಿದ್ದಾರೆ. ನಾನು ಇದನ್ನು ಪದೇಪದೇ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ನನ್ನ ದೃಷ್ಟಿಯಲ್ಲಿ ಈ ಬಂಡಿಂಗ್ ಹಾಕುವ ಕೆಲಸ ಬಹಳ ಯೋಗ್ಯವಾದುದು. ಆದ್ದರಿಂದ ಕ್ಷಿಪ್ರವಾಗಿ ಬಂಡಿಂಗ್‌ನ ಖರ್ಚು ಎಷ್ಟು ಬರುತ್ತದೋ ಅದರ ಅರ್ಧದಷ್ಟು ಸರ್ಕಾರದವರು ಸಬ್ಸಿಡಿಯಾಗಿ ಕೊಡಬೇಕೆಂದೂ, ಉಳಿದ ಅರ್ಧದಷ್ಟನ್ನು ರೈತರಿಂದ ವಸೂಲು ಮಾಡಬೇಕೆಂದೂ ನನ್ನ ಸಲಹೆ.

ಇನ್ನು ರೆವಿನ್ಯೂ ಅಧಿಕಾರಿಗಳಿಗೆ ಮತ್ತು ತಹಸೀಲ್ದಾರ್ ಅವರಿಗಾಗಲೀ ಸುಮಾರು 100—120 ಗ್ರಾಮಗಳು ಇರುತ್ತವೆ. ಅವರು ಅಲ್ಲೆಲ್ಲಾ ತಿರುಗಾಡುವುದಕ್ಕೆ ಸರಿಯಾಗಿ ವಾಹನ ಸೌಕರ್ಯವಿಲ್ಲ. ಜೀಪುಗಳ ಸೌಕರ್ಯವಿಲ್ಲ. ಪ್ರತಿಯೊಬ್ಬ ತಹಸೀಲ್ದಾರರಿಗೆ ಹಾಗು ಪ್ರತಿಯೊಂದು ವಿಭಾಗದಲ್ಲಿಯೂ ಇರತಕ್ಕ ರೆವಿನ್ಯೂ ಅಧಿಕಾರಿಗಳಿಗೆ ಒಂದೊಂದು ಜೀಪನ್ನು ಏರ್ಪಾಡುಮಾಡಿ ಕೊಡಬೇಕೆಂದು ನನ್ನ ಸಲಹೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಸುಮಾರು 30 ಸಾವಿರ ಎಕರೆಯಷ್ಟು ಜಮೀನು ಸವಳು ಆಗಿ ಇದುವರೆಗೂ ಸಾಗುವಳಿಯಾಗಿಲ್ಲ. ಎಂ.ಎಲ್.ಎ. ಮತ್ತು ಎಂ.ಎಲ್.ಸಿ.ಗಳು ಇದು ತೀವ್ರಗತಿಯಿಂದಾಗಬೇಕೆಂದು ಹೇಳಿದ್ದಾರೆ. ದೋಣಾನದಿ ತಗ್ಗಾಗಿ ಹರಿಯುವ ಪ್ರವಾ ತೆಗೆದುಕೊಳ್ಳಬೇಕು. ಇದರಿಂದ ಸರ್ಕಾರಕ್ಕೂ ಕೂಡ ದೇಶದ ಹಿತದೃಷ್ಟಿಯಿಂದ ಹಾಗೂ ರಾಷ್ಟ್ರ ಹಿತದೃಷ್ಟಿಯಿಂದ ಬಹಳವಾಗಿ ಹಾನಿಯಾಗುವ ಪರಿಸ್ಥಿತಿ ದೂರಮಾಡಬೇಕು. ಈ 30 ಸಾವಿರ ಎಕರೆಯನ್ನು ಸಾಗು ಮಾಡುವುದರಿಂದ ಬಿಜಾಪುರ ಜಿಲ್ಲೆಯ ಬಾಗೇವಾಡಿ ತಾಲ್ಲೂಕು, ಬಿಜಾಪುರ ತಾಲ್ಲೂಕು ಮತ್ತು ಸಿಂಧನೂರ್ ತಾಲ್ಲೂಕು ಪ್ರದೇಶಗಳಿಗೆ ಹೆಚ್ಚಿನ ಅನುಕೂಲವುಂಟು. ದೋಣಾನದಿಯ ಭೂಮಿ ಸರಿಯಾಗಿ ಸಾಗುವಳಿಯಾಗಿಲ್ಲ. ಈ ದೋಣಾನದಿಯ ಬಳಿ ಬಹಳ ಅತ್ಯುತ್ತಮವಾದ ಭೂಮಿ ಇದೆ. ಆದ್ದರಿಂದ ಇಂತಹ ಬೆಲೆಯಾಗಿರತಕ್ಕ ಭೂಮಿಯನ್ನು ಚೆನ್ನಾಗಿ ರಕ್ಷಣೆಮಾಡಬೇಕು. ಅಲ್ಲಿ ಹೆಚ್ಚು ಬೆಳೆಯುವ ಹಾಗೆ ಮಾಡಬೇಕು. ಈ ಯೋಜನೆಯನ್ನು ತೀವ್ರದಲ್ಲಿ ಕೈಗೊಂಡು ಈ ಜಮೀನಿನಲ್ಲಿ ಹೆಚ್ಚು ಬೆಳೆ ಬೆಳೆಯುವುದಾದರೆ ರೈತರಿಗೆ ಹೆಚ್ಚು ಅನುಕೂಲವಾಗುವುದು. ತನ್ಮೂಲಕ ರಾಜ್ಯಕ್ಕೆ ಒಳ್ಳೆಯ ಲಾಭವಾಗುವುದು. ಒಟ್ಟಿನಲ್ಲಿ ತೀವ್ರಗತಿಯಿಂದ ಈ ಯೋಜನೆಯನ್ನು ಕೈಗೊಂಡು ಈ 30 ಸಾವಿರ ಎಕರೆ ಭೂಮಿಯನ್ನು ಫಲವತ್ತಾದ ಹಾಗೂ ಸಾಗುವಳಿಗೆ ಯೋಗ್ಯವಾದ ಪ್ರದೇಶವನ್ನಾಗಿ ಮಾಡಬೇಕೆಂದು ನಾನು ಹೇಳುತ್ತೇನೆ.

ಬಿಜಾಪುರ ಜಿಲ್ಲೆಯಲ್ಲಿ ಲಿಫ್ಟ್ ಇರ್ರಿಗೇಷನ್ ಸ್ಕೀಂ ಬಗ್ಗೆ ಸಾಕಷ್ಟು ಪ್ಲಾನ್ ಮತ್ತು ಎಸ್ಟಿಮೇಟ್ ಸಿದ್ಧವಾಗಿದೆ. ಅವುಗಳನ್ನು ಕ್ರಮೇಣವಾಗಿ ಸರ್ಕಾರದವರು ತೆಗೆದುಕೊಂಡು ರೈತರಿಗೆ ಹೆಚ್ಚಿಗೆ ನೀರಾವರಿಯಾಗುವಂತೆ ಅನುಕೂಲಮಾಡಿಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ನೀರಾವರಿಯ ವಿಷಯದ ಬಗ್ಗೆ ಹೇಳುವುದಾದರೆ, ಅಪ್ಪರ್‌ಕೃಷ್ಣಾದ ಸಲುವಾಗಿ ಸುಮಾರು ಎರಡು ಕೋಟಿ ರೂಪಾಯಿ ಒದಗಿಸಿದ್ದಾರೆ. ಅದು ಬಹಳ ಕಡಿಮೆ. ಅದು 140 ಕೋಟಿ ಇದ್ದಂತಹ ಯೋಜನೆ ಇದೆ. ಅದಕ್ಕೆ ಎರಡು ಕೋಟಿ ಕೊಟ್ಟರೆ ಏನೂ ಸಾಲದು. ಹೆಚ್ಚು ಒದಗಿಸುವುದಕ್ಕೆ ಸಾಧ್ಯವಿಲ್ಲವೆಂದು ಹೇಳುತ್ತಿದ್ದಾರೆ. ಆದ್ದರಿಂದ ಅಪ್ಪರ್ ಕೃಷ್ಣಾ ಯೋಜನೆಯ ಸಲುವಾಗಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ, ಕೇಂದ್ರ ಸರ್ಕಾರದವರೇ ಈ ಯೋಜನೆಯನ್ನು ವಹಿಸಿಕೊಳ್ಳುವಂತೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆರೋಗ್ಯದ ವಿಚಾರ ಹೇಳುವುದಾದರೆ, ಬಿಜಾಪುರ ಪಟ್ಟಣದಲ್ಲಾಗಲಿ ಅಥವಾ ಬಿಜಾಪುರ ಜಿಲ್ಲೆಯಲ್ಲಾಗಲಿ, ಈ ಒಂದು ಮಹಾ ರೋಗದಿಂದ ಜನರು ನರಳುತ್ತಿದ್ದಾರೆ. ಅವರು ಆರ್ತಧ್ವನಿಯಲ್ಲಿ ಕೂಗಾಡುತ್ತಿದ್ದಾರೆ. ಅವರು ರಸ್ತೆಗಳಲ್ಲಿ ಕೂಡ ಕೂಗಾಡುತ್ತಿದ್ದಾರೆ ಎಂದು ಕೇಳಿದ್ದೇನೆ, ಕಂಡಿದ್ದೇನೆ. ಅವರ ಸಲುವಾಗಿ ಒಂದು ಯೋಜನೆ ಮಾಡಿ, ಇಡೀ ಮೈಸೂರು ರಾಜ್ಯದಲ್ಲೇ, ಈ ಮಹಾ ರೋಗದ ಸರ್ವೆ ಮಾಡಿ, ಇದು ಇಲ್ಲದ ಹಾಗೆ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಉದ್ಯಮದ ಸಲುವಾಗಿ ಬಿಜಾಪುರ ಜಿಲ್ಲೆಯಲ್ಲಿ ತಾಳಿಕೋಟೆ ಎಂಬ ಸಿಟಿ ಇದೆ. ಅಲ್ಲಿ ಒಂದು ಸಿಮೆಂಟ್ ಕಾರ್ಖಾನೆಯಾಗುವಂತೆ ಯೋಜನೆ ಇದೆ. ಅದನ್ನು ಸರ್ಕಾರದವರು ಪರಿಶೀಲನೆ

ಮಾಡಿದ್ದಾರೆ, ಅಲ್ಲಿ ಕಚ್ಚಾಮಾಲೂ ಸಿಗುತ್ತದೆ. ಇದರ ಬಗ್ಗೆ ತಜ್ಞರೂ ಒಳ್ಳೆಯ ಅಭಿಪ್ರಾಯವನ್ನೂ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರದವರು ಈ ಒಂದು ಸಿಮೆಂಟ್ ಕಾರ್ಖಾನೆಯನ್ನು ಪ್ರಾರಂಭ ಮಾಡಬೇಕು, ಮತ್ತು ಇದರಿಂದ ಅಲ್ಲಿನ ಜನರಿಗೂ ಒಂದು ಉದ್ಯೋಗಕ್ಕೆ ಅವಕಾಶ ಸಿಕ್ಕಿದಂತಾಗುತ್ತದೆ ಎಂದು ಹೇಳುತ್ತೇನೆ.

ಶಿಕ್ಷಣದ ವಿಷಯದಲ್ಲಿ ಒಂದು ಉದಾಹರಣೆ ಹೇಳುತ್ತೇನೆ. ಶಿಕ್ಷಣದ ಸಲುವಾಗಿ ಹೆಚ್ಚು ಹಣವನ್ನು ಒದಗಿಸಿದ್ದಾರೆ. ಕೆಲವು ಶಾಲಾ ಕಾಲೇಜು ಪ್ರಾರಂಭ ಮಾಡಿದ್ದಾರೆ. ಅದು ಒಳ್ಳೆಯದು. ನಮ್ಮ ಜಿಲ್ಲೆಯಲ್ಲಿ ಕೆಲವು ಸಂಚಾರಿ ಶಾಲೆಗಳು ಇವೆ. ಅವು ಹನುಮನಕೇರಿ, ನಾಗನೂರು, ಅರೆಮೂರು, ತೇಜ್‌ಪೂರ್, ಚಿಕ್ಕಮಾಸಳಿ, ಬನ್ನಿಹಾಳ ಮುಂತಾದ ಕಡೆಗಳಲ್ಲಿ ಈ ಶಾಲೆಗಳಿವೆ. ಸಂಚಾರಿ ಶಾಲೆಗಳೆಂದರೆ, ಮುಂಜಾನೆ ಒಂದು ಶಾಲೆಯಾದರೆ, ಮಧ್ಯಾಹ್ನ ಆ ಉಪಾಧ್ಯಾಯನು ಬೇರೊಂದು ಊರಿಗೆ ಹೋಗಿ ಕಲಿಸಬೇಕು. ಇದರಲ್ಲಿ ಒಂದೊಂದು ಊರಿಗೆ ಹೋಗುವುದನ್ನು ಮಧ್ಯ ತಪ್ಪಿಸಿಕೊಳ್ಳುತ್ತಾರೆ. ನಮ್ಮಲ್ಲಿ 5 ಸಂಚಾರಿ ಶಾಲೆಗಳು ಇವೆ. ಆ ದೃಷ್ಟಿಯಿಂದ ಪ್ರತಿಯೊಂದು ಗ್ರಾಮಕ್ಕೂ ಕೂಡ ಸ್ವತಂತ್ರವಾದಂತಹ ಸರ್ಕಾರಿ ಶಾಲೆಗಳನ್ನು ಮಾಡಬೇಕು. ಈ ಬಗ್ಗೆ ಬಿಜಾಪುರ ಜಿಲ್ಲಾ ಸ್ಕೂಲ್ ಬೋರ್ಡಿನವರು ಠರಾವು ಮಾಡಿ ಕಳಿಸಿದ್ದಾರೆ. ಇದನ್ನು ಸರ್ಕಾರದವರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟ ವಿಚಾರ. ಇಲ್ಲಿನ ನಮ್ಮ ಕೆಲಸಕಾರ್ಯಗಳು ತ್ವರಿತವಾಗಿ ಆಗುತ್ತಾ ಇಲ್ಲ. ಅಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಇನ್ನಿತರ ಅಧಿಕಾರಿಗಳನ್ನು ಕರಕೊಂಡು ಹೋಗಿ, ಅಲ್ಲಿ ಸಾಕಷ್ಟು ವಿಚಾರ ವಿನಿಮಯ ಮಾಡಿದ್ದಾಗಿದೆ ಈ ಬಗ್ಗೆ ಒಂದು ಕಾರ್ಯಕ್ರಮದ ಪಟ್ಟಿ ಮಾಡಿಕೊಂಡು ಅಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕು. ಅಲ್ಲಿನ ನೀರಾವರಿ ಬಾವಿಗಳಿಗೆ ಮತ್ತು ವಿದ್ಯುತ್ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಸಿಗದೆ ಬಹಳ ನಿಧಾನವಾದ ಕೆಲಸ ನಡೆಯುತ್ತಿದೆ. ಬಿಜಾಪುರದಲ್ಲಿ ಆರು ಲಾರಿಗಳಿವೆ, ಅವುಗಳಲ್ಲಿ ಎರಡು ಮೂರು ಕೆಟ್ಟು ಹೋಗಿದೆ ಮತ್ತು ಸ್ಟಾಫ್ ಹೆಚ್ಚು ಇಲ್ಲವೆಂದು ಹೇಳುತ್ತಿದ್ದಾರೆ. ಈ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಯವರಿಗೆ ಕಾಗದ ಬರೆದಿದ್ದೇನೆ. ಉತ್ತರ ಇನ್ನೂ ಬಂದಿಲ್ಲ. ಇನ್ನು ಜಿಜ್ಜಿರಗಿಯಲ್ಲಿ 4–5 ನೂರು ಬಾವಿಗಳಿವೆ. ಸುಮಾರು 100 ರೈತರು ಡಿಪಾಸಿಟ್ ಹಣ ಕಟ್ಟಿದ್ದಾರೆ. ಇವತ್ತು ಸುಮಾರು 80 ಜನ ರೈತರು ವಿದ್ಯುಚ್ಛಕ್ತಿ ಪಂಪ್‌ಸೆಟ್ಟು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿದ್ದಾರೆ. ಅಲ್ಲಿಯ ಜನರೆಲ್ಲಾ ಒಳ್ಳೆಯವರಾಗಿದ್ದಾರೆ. 80 ಮಂದಿ ಸ್ವಂತ ಖರ್ಚಿನಿಂದ ತಾವೇ ದುಡ್ಡು ಹಾಕಿ ಇಟ್ಟುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಈಗ ತಿಕೋಟಾ ಗ್ರಾಮಕ್ಕೆ ವಿದ್ಯುಚ್ಛಕ್ತಿ ಕೊಟ್ಟಿದ್ದಾರೆ. ಅಲ್ಲಿಂದ ಇದು 5–6 ಮೈಲಿ ಇದೆ. ಇವತ್ತು ಅಲ್ಲಿನ ಜನರ ಟೆಲಿಗ್ರಾಮ್ ಕೂಡ ಬಂದಿದೆ. ನಾಳೆ ಇಲ್ಲಿಗೆ 5–6 ಜನ ರೈತರು ಕೂಡ ಬರುವವರಿದ್ದಾರೆ, ಬಿಜಾಪುರ ಜಿಲ್ಲೆಯ ಒಂದು ಡಿವಿಜನ್‌ನ ವಿಚಾರ ಹೇಳುವುದಾದರೆ ಸುಮಾರು ಎರಡು ಸಾವಿರ ರೈತರು ಪಂಪ್‌ಸೆಟ್ ಎಲೆಕ್ಟ್ರಿಸಿಟಿಯ ಸಲುವಾಗಿ ಡಿಪಾಸಿಟ್ ಹಣ ಕಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ತೆಗೆದುಕೊಳ್ಳುವಂತೆ, ಅಲ್ಲಿಗೆ ಬೇಕಾದ ಹೆಚ್ಚಿನ ಸೌಕರ್ಯ, ಸಹಾಯವನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಸಲಹೆ ಏನೆಂದರೆ, ನಮ್ಮ ಉತ್ಪಾದನೆ ಜಾಸ್ತಿ ಮಾಡಬೇಕಾದರೆ, ಈ ಮನೋರಂಜನೆಯ ತೆರಿಗೆಯಾದ, ಸಿನಿಮಾ ತೆರಿಗೆ, ಕುದುರೆ ಜೂಜಿನ ತೆರಿಗೆ, ಮೋಟಾರ್ ವಾಹನದ ತೆರಿಗೆ, ರೇಡಿಯೋ ತೆರಿಗೆ ಇದನ್ನು ಸಾಕಷ್ಟು ರೀತಿಯಲ್ಲಿ ಜಾಸ್ತಿ ಮಾಡಬೇಕು. ಇದನ್ನು ಎಷ್ಟು ಹೆಚ್ಚು ಮಾಡಿದರೂ, ಯಾರೂ ಇದನ್ನು ಬಿಡುವುದಿಲ್ಲ. ಇನ್ನು ಏನು ಒಂದು ಲಾಟರಿ ಸ್ಕೀಂ ಮಾಡಬೇಕೆಂದು ಇದ್ದಾರೆ, ಅದನ್ನು ಎಲ್ಲಾ ಕಡೆಗಳಿಂದ ಸಲಹೆಗಳನ್ನು ತೆಗೆದುಕೊಂಡು ಮಾಡಿದರೆ, ನಾವು ಹೆಚ್ಚಿನ ಸಂಪನ್ಮೂಲಗಳನ್ನು ಕ್ರೋಢೀಕರಿಸುವಂತಾಗಿ, ನಮ್ಮ ಹೆಚ್ಚಿನ ಬೇಡಿಕೆಗಳನ್ನು ಪೂರೈಸುವುದಕ್ಕೆ ಸುಲಭವಾಗುತ್ತದೆ. 69–70ನೇ ಸಾಲಿನಲ್ಲಿ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಯೋಜನೆ ಮಾಡುತ್ತೇವೆಂದು ಭರವಸೆ ಕೊಟ್ಟಿದ್ದಾರೆ. ನಮ್ಮ ಬಿಜಾಪುರ ಜಿಲ್ಲೆಯಲ್ಲಿ ಬಹಳ ಗ್ರಾಮಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದಕ್ಕೆ ಸರ್ಕಾರದವರು ಹೆಚ್ಚು ಹಣ ಒದಗಿಸಿ ಕೊಟ್ಟು ಸಹಾಯ ಮಾಡಬೇಕೆಂದು, ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಭಾಸ್ಕರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಆರ್ಥಿಕ ಮಂತ್ರಿಯವರು ಈ ಸಭೆಯ ಮುಂದೆ ಮಂಡಿಸಿರುವ 1969–70 ನೇ ವರ್ಷದ ಆಯವ್ಯಯ ಪತ್ರವನ್ನು ವಿರೋಧ ಮಾಡುತ್ತಾ ಒಂದೆರಡು ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡಲಚ್ಛಿಸುತ್ತೇನೆ.

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಈ ಆಯವ್ಯಯ ಪತ್ರವನ್ನು ಕೂಲಂಕಷವಾಗಿ ಅವಲೋಕಿಸಿದರೆ, ನಮ್ಮ ಆರ್ಥಿಕ ಪರಿಸ್ಥಿತಿಯು ದಿವಾಳಿಯ ಹಾದಿಯನ್ನು ತುಳಿಯುತ್ತಾ ಇದೆ ಎಂದು ಹೇಳಿದರೆ, ಅತಿಶಯೋಕ್ತಿಯಾಗಲಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಏಕೆಂದರೆ, 1968–69ರಲ್ಲಿ ನಮ್ಮ ಸಾಲ 342 ಕೋಟಿ 80 ಲಕ್ಷ ಇದ್ದರೆ, 1969-70 ರಲ್ಲಿ 425 ಕೋಟಿ 95 ಲಕ್ಷಕ್ಕೆ ಹೋಗಿದೆ. ಹಾಗೆ ನಮ್ಮ ವರಮಾನವನ್ನು ತೆಗೆದು ನೋಡಿದರೆ, 1968–69ಕ್ಕೆ 194 ಕೋಟಿ 74 ಲಕ್ಷ, 1969–70 ರಲ್ಲಿ 213 ಕೋಟಿ 26 ಲಕ್ಷ. ಈ ವರಮಾನದಲ್ಲಿ ಬರುವ ವ್ಯತ್ಯಾಸ 18 ಕೋಟಿ 52 ಲಕ್ಷ. ಈ ವರ್ಷ ವರಮಾನ ಜಾಸ್ತಿಯಾಗಿದೆ. ಅದರಲ್ಲಿ ಸಾಲದ ಲೆಕ್ಕಾಚಾರ ನೋಡುವಾಗ 83 ಕೋಟಿ 19 ಲಕ್ಷ ಸಾಲ ಒಂದು ವರ್ಷದಲ್ಲಿ ಏರಿ ಹೋಗಿದೆ. ಸಾಲ ಮೂಲಗಳ ವ್ಯವಹಾರಗಳನ್ನು ನೋಡುವಾಗ ವರಮಾನ ಒಂದು ಪಾಲಷ್ಟು ಹೆಚ್ಚಿದರೆ, ಸಾಲ 5 ಪಾಲಷ್ಟು ಹೆಚ್ಚಾಗಿದೆ. ಇದು ಒಂದು ವರ್ಷದ ಮಾತನ್ನು ನಾನು ಹೇಳುತ್ತಿದ್ದೇನೆ. ನಮ್ಮ ಬಡ್ಡಿ ಲೆಕ್ಕಾಚಾರ ತೆಗೆದು ನೋಡಿದರೆ, 20 ಕೋಟಿ 27 ಲಕ್ಷ ರೂಪಾಯಿ, ಅಂದರೆ, ವರಮಾನದ ಶೇಕಡಾ 10 ಪರ್‌ಸೆಂಟ್ ನಾವು ಬಡ್ಡಿಯನ್ನು ಕೊಡುತ್ತಿದ್ದೇವೆ.

6–30 P.M.

ನಮ್ಮ ಆರ್ಥಿಕ ಮಂತ್ರಿಗಳು ಹೋದ ವರ್ಷದ ಬಡ್ಜೆಟ್ ಭಾಷಣಕ್ಕೆ ಉತ್ತರ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ನೀವು ಸಾಲವಾಗಿದೆ ಎಂದು ಹೆದರಬೇಡಿ. ಸಾಲಕ್ಕಾಗಿ ನಮ್ಮಲ್ಲಿ ಆಸ್ತಿಗಳು ಇವೆ. ಶರಾವತಿ, ತುಂಗಭದ್ರಾ, ಭದ್ರಾವತಿಯ ಕಾರ್ಖಾನೆ, ವಿಧಾನ ಸೌಧ ಇದನ್ನೆಲ್ಲಾ ತೋರಿಸಿದ್ದಾರೆ. ನಾನಾದರೂ ಹೇಳುತ್ತೇನೆ. ಭದ್ರಾವತಿಯ ಕಾರ್ಖಾನೆ, ತುಂಗಭದ್ರಾ ಪ್ರಾಜೆಕ್ಟ್, ಶರಾವತಿಯ ಯೋಜನೆಗಳಿಂದ ಮುಂದಿನ ಸಾಲಕ್ಕಾಗಿ ಅವುಗಳು ಈಡಾಗುವುದೇ ಎಂದು ನನಗೆ ಅನುಮಾನ ಇದೆ. ನಮ್ಮ ದೇಶದಲ್ಲಿ ಬಡ್ಡಿ ಕೊಡುವುದು ಮಾರ್‍ವಾಡಿ ಬಡ್ಡಿಯಾಗಿದೆ. ಬಡ್ಡಿ ಕೊಡುವುದು ವಿಪರೀತವಾಗಿ ನಮ್ಮ ಆದಾಯದ ಶೇಕಡಾ 10 ರಷ್ಟು ಬಡ್ಡಿಯನ್ನು ಸರ್ಕಾರದವರು ಕೊಡುತ್ತಿದ್ದಾರೆ. ಯಾವ ಸರ್ಕಾರ ಕೂಡ ಈ ರೀತಿಯಲ್ಲಿ ಸರ್ಕಾರವನ್ನು ನಡೆಸುವುದಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ದಿವಾಳಿತನದ ಆರ್ಥಿಕ ಪರಿಸ್ಥಿತಿಯಾಯಿತು. ದುರದೃಷ್ಟವಶಾತ್ ನಾವು ನಮ್ಮ ಮುಂದಿನ ಪೀಳಿಗೆಗೆ ಸಾಲದ ಹೊರೆಯನ್ನು ಹೇರಿ, ದಿವಾಳಿ ಸರ್ಕಾರವನ್ನು ಅವರ ತಲೆಯಮೇಲೆ ಹೇರಿ ಹೋಗುವಂತಹ ಸರ್ಕಾರವನ್ನು ನಡೆಸುತ್ತಾ ಹೋದರೆ ಎಷ್ಟರತನಕ ಸರ್ಕಾರ ನಡೆಯಬಹುದು ಎನ್ನುವುದನ್ನು ತಾವಾದರೂ ಆಲೋಚನೆ ಮಾಡಬೇಕು. ಈಗ ಸಾಲದ ಲೆಕ್ಕಾಚಾರವನ್ನು ನೋಡುವುದಾದರೆ ಈ ಪ್ರಜಾಪ್ರಭುತ್ವ ಸರ್ಕಾರ ಪ್ರತಿಯೊಬ್ಬರ ತಲೆಯ ಮೇಲೆಯೂ 170 ರೂಪಾಯಿ 50 ಪೈಸೆ ಸಾಲವನ್ನು ಹೇರಿದ್ದಾರೆ. ಆರ್ಥಿಕ ಪ್ರಗತಿಯನ್ನು ಹೊಂದಿರುವಂತಹ ಯಾವುದೇ ದೇಶವಾಗಲೀ ಸಾಲ ಮಾಡದೇ, ಕೊರತೆಯ ಬಡ್ಜೆಟ್ಟನ್ನು ಇಡದೆ ಗತ್ಯಂತರವಿಲ್ಲ ಎಂದು ಹೇಳಿದ್ದಾರೆ. ನಮಗೆ ಸ್ವಾರಾಜ್ಯ ಸಿಕ್ಕುವ ಸಂದರ್ಭದಲ್ಲಿ ಎರಡನೇ ಮಹಾ ಯುದ್ಧ ಆದದ್ದು ನಿಜ. ಆಗ ಜಪಾನ್, ಜರ್ಮನಿ ಮುಂತಾದ ದೇಶಗಳು ಯಾವ ಪರಿಸ್ಥಿತಿಯಲ್ಲಿದ್ದುವು ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಅವು ಎಷ್ಟರಮಟ್ಟಿಗೆ ಮುಂದುವರಿದಿವೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ ಪಾಶ್ಚಿಮಾತ್ಯ ದೇಶಗಳಿಗೆ ನಮ್ಮ ಮಂತ್ರಿಗಳನ್ನು ಕಳುಹಿಸುತ್ತಿದ್ದೇವೆ. ಅವರು ಅಲ್ಲಿಗೆ ಹೋಗಿ ಸುಮ್ಮನೆ ಮಜಾ ಮಾಡಿಕೊಂಡು ಬರುತ್ತಿದ್ದಾರೆ. ಅವರು ಪರದೇಶಗಳಿಗೆ ಹೋದಾಗ ಅಲ್ಲಿನ ಆರ್ಥಿಕ ಪರಿಸ್ಥಿತಿ ಯಾವರೀತಿ ಇದೆ ಎಂಬುದನ್ನು ತಿಳಿದುಕೊಂಡು ಬಂದು 22 ವರ್ಷಗಳ ಕಾಂಗ್ರೆಸ್ಸಿನವರ ಆಡಳಿತದಲ್ಲಿ ಏನೇನು ಸಾಧಿಸಿದ್ದಾರೆ ಎನ್ನುವ ವಿಷಯವನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಬಹಳ ಚೆನ್ನಾಗಿ ಹೇಳಿದ್ದಾರೆ. ನಾವು ಖರ್ಚು ಮಾಡಿದ್ದಕ್ಕೆ ತಕ್ಕಂತೆ ಪ್ರತಿಫಲ ಸಿಕ್ಕದೇ ಹೋದರೆ ನಾವು ಸ್ವಾವಲಂಬಿಗಳಾಗಿ ಕೈಗಾರಿಕೆಯಲ್ಲಿ ಪ್ರಗತಿಯನ್ನು ಹೊಂದುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಬಾಬಿಗೆ ನಾವು ಎಷ್ಟು ಖರ್ಚು ಮಾಡಿದ್ದೇವೆ, ಇದರಿಂದ ಎಷ್ಟು ಪ್ರತಿಫಲ ಸಿಕ್ಕಿದೆ ಎನ್ನತಕ್ಕ ಲೆಕ್ಕಾಚಾರವನ್ನು ಇಡಬೇಕು. ಸುಮ್ಮನೆ ಹೀಗೆ ಸಾಲಮಾಡುತ್ತಾ ಹೋದರೆ ಇವರು ಹೆಚ್ಚುಕಾಲ ಬದುಕುವುದಿಲ್ಲ. ಇನ್ನು ಮುಂದೆ ಕಾಂಗ್ರೆಸ್ ಸರ್ಕಾರ ಬೇಡ ಕಿಚಡಿ ಸರ್ಕಾರ ಬರಲಿ ಎಂದು ಹೇಳುತ್ತಿದ್ದಾರೆ. ಈ ಸರ್ಕಾರದವರು ಈ ರೀತಿ ರುಣ ಭಾರವನ್ನು ಹೊರಿಸಿ ಮುಂದಿನ ಪೀಳಿಗೆಗೆ ಯಾವ ರೀತಿ ಒಳ್ಳೆಯ ಕೆಲಸವನ್ನು ಮಾಡಿದೆ ? ಹೀಗೆಯೇ ಇವರು ಮುಂದಿನ ಪೀಳಿಗೆಗೆ ರುಣ ಭಾರವನ್ನು ಬಿಟ್ಟುಕೊಟ್ಟು ಹೋಗುತ್ತಾರೆ. ಇದು

ಎಷ್ಟು ಮಾತ್ರಕ್ಕೂ ಸರಿಯಲ್ಲ. ಮಾತ್ರವಲ್ಲದೆ ಇವರು ಖರ್ಚು ಮಾಡುವ ದುಡ್ಡಿನಲ್ಲಿ ಶೇಕಡಾ ಎಷ್ಟು ದುಡ್ಡು ನಿಜವಾಗಿ ದೇಶಕ್ಕೆ ಜನತೆಗೆ ಖರ್ಚಾಗಿದೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ ಯನ್ನು ಕೊಡುತ್ತೇನೆ. ಕನಕಮಾಲಾ ಯೋಜನೆ ಯಾವಾಗ ಪ್ರಾರಂಭವಾಯಿತು, ಅದಕ್ಕೆ ಎಷ್ಟು ಖರ್ಚು ಮಾಡಿದ್ದಾರೆ, ಅದರ ಅಂದಾಜು ವೆಚ್ಚ ಎಷ್ಟು ಎಂಬುದನ್ನು ನೋಡಿದರೆ ಇದಕ್ಕೆ ಆದಿ ಅಂತ್ಯ ಯಾವುದೂ ಇಲ್ಲ. ಈ ಯೋಜನೆ 50 ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಶುರು ಆಯಿತು. ಈಗಾಗಲೇ ಒಂದು ಕೋಟಿ ರೂಪಾಯಿಗಳವರೆಗೂ ಖರ್ಚಾಗಿದೆ. ಆದರೆ ಅದು ಇನ್ನೂ ಅಂತ್ಯ ವಾಗುವ ಪರಿಸ್ಥಿತಿಯಲ್ಲಿಲ್ಲ. ಒಂದು ವೇಳೆ ಅದು ಕಂಪ್ಲೀಟ್ ಆದರೂ ಕೂಡ ಅದರಲ್ಲಿ ಸಾಕಷ್ಟು ನೀರೇ ಇಲ್ಲ. ನೀರೆಲ್ಲಾ ಬತ್ತಿ ಹೋಗಿದೆ. ಇದು ಏನಾಗಿದೆ ಎಂದರೆ ಮಹಾತ್ಮಾ ಗಾಂಧೀಜಿ ಯವರು ಪ್ರತಿ ನಿತ್ಯ ಈಶ್ವರ ಅಲ್ಲಾ ತೇರೇನಾಂ ಸಬಕೋ ಸನ್‌ಮತಿ ದೇ ಭಗವಾನ್ ಎನ್ನು ತ್ತಿದ್ದರು. ಈಗ ನೀವು ಏನು ಹೇಳುತ್ತಿದ್ದೀರಿ ಎಂದರೆ ತಾತಾ ಬಿರ್ಲಾ ತೇರೇನಾಂ ಲೈಸೆನ್ಸ್ ಪರ್ಮಿಟ್ ದೇ ಭಗವಾನ್ ಎಂದು ಹೇಳುತ್ತಿದ್ದೀರಿ. ಇವರ ಕಂಟ್ರ್ಯಾಕ್ಟದಾರರಿಗೆ ಇವರ ಇನ್‌ಫ್ಲೂ ಯೆನ್ಸ್‌ದಾರರಿಗೆ ಹಣ ಕೊಡುವುದಕ್ಕೆ ಯೋಜನೆಗಳನ್ನು ತಯಾರು ಮಾಡುತ್ತಿದ್ದಾರೆ ಎಂದು ಅನಿಸುತ್ತದೆ. ನಿಜವಾಗಿಯೂ ಇದರಲ್ಲಿ 100ಕ್ಕೆ 50 ಕ್ಕಿಂತ ಜಾಸ್ತಿ ಹಣ ದೇಶಕ್ಕೆ ಖರ್ಚಾಗಿಲ್ಲ ಎಂಬುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಆಡಳಿತದಲ್ಲಿ ಎಷ್ಟರತನಕ ಆಡಳಿತದ ಲಗಾಮು ಏನಿದೆ ಅದನ್ನು ಸರಿಯಾಗಿ ಹಿಡಿಯುವುದಿಲ್ಲವೋ ಅಷ್ಟರವರೆಗೆ ಎಷ್ಟೇ ಸಾಲ ಮಾಡಿದರೂ, ಎಷ್ಟೇ ಯೋಜನೆಗಳನ್ನು ಕೈಗೊಂಡರೂ ಕೂಡ ಆ ಯೋಜನೆಗಳು ಫಲಕಾರಿಯಾಗುವುದಿಲ್ಲ.

ಇನ್ನೊಂದು ವಿಷಯ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಕೇಂದ್ರ ಸರ್ಕಾರ ದವರು ನಮ್ಮ ವಿಚಾರದಲ್ಲಿ ತಾರತಮ್ಯವನ್ನು ತೋರಿಸುತ್ತಿದ್ದಾರೆ ಎಂದು ಅವರು ಒಂದು ಸಭೆಯಲ್ಲಿ ಹೇಳಿದ್ದಾರೆ. ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಲೈಸೆನ್ಸ್ ಕೊಡುವುದರಲ್ಲಿ ವಿಳಂಬ ಮಾಡುತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. 1952ನೇ ಇಸವಿಯಿಂದ ಕೇಂದ್ರ ಸರ್ಕಾರದವರು ಕೈಗಾರಿಕೆಗಳ ಮೇಲೆ ಹೂಡಿರುವ ಬಂಡವಾಳ ದಲ್ಲಿ ಮೈಸೂರು ರಾಜ್ಯಕ್ಕೆ ಯಾವುದೂ ಕೊಟ್ಟಿಲ್ಲ ಎಂದರೆ ಇದು ನಾಚಿಕೆಗೇಡಿನ ವಿಷಯ. ನಿಮ್ಮಿಂದ ಈ ರಾಜ್ಯಕ್ಕೆ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ 22 ವರ್ಷಗಳಿಂದ ಕೊಟ್ಟಿರತಕ್ಕಂಥ ಅಂಕೆ ಸಂಖ್ಯೆಗಳನ್ನು ನೋಡುವುದಾದರೆ ಕೇಂದ್ರಸರ್ಕಾರಕ್ಕೆ ಆದಾಯದ ದೃಷ್ಟಿ ಇದೆ. ಮುಂದೆ ಅನುಕೂಲ ವಾಗಬಹುದು ಎನ್ನುವ ಆಶೆಯನ್ನು ಇಟ್ಟುಕೊಂಡರೆ ಕೇಂದ್ರದಲ್ಲಿ ನಿಮ್ಮ ರಾಜ್ಯದ ನಾಯಕರ ಮಾತನ್ನು ಯಾರೂ ಕೇಳುವುದಿಲ್ಲ. ನಿಮಗೆ ಕೇಂದ್ರದಲ್ಲಿ ಬೆಲೆಯಿಲ. ಇದನ್ನು ಮುಖ್ಯ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಇನ್ನು ಮುಂದಕ್ಕೆ ಕೇಂದ್ರದಿಂದ ಹಣ ಸಹಾಯ ಸಿಕ್ಕುವ ಪರಿಸ್ಥಿತಿಯಲ್ಲಿ ಇಲ್ಲ. ಈ ರಾಜ್ಯ ಯಾವ ದೃಷ್ಟಿಯಿಂದಲಾದರೂ ಕೇಂದ್ರ ಸರ್ಕಾರದಿಂದ ಸಹಾಯವನ್ನು ಪಡೆದು ಅಭಿವೃದ್ಧಿಯಾಗುತ್ತದೆ ಎಂದರೆ ಅದು ಆಗುವುದಿಲ್ಲ. ಹಣವನ್ನು ಪೋಲು ಮಾಡುವಂತಹ ಈ ಆಯವ್ಯಯ ಪಟ್ಟಿಯನ್ನು ನಾನು ಬಲವಾಗಿ ವಿರೋಧಿಸುತ್ತೇನೆ. ಮಾನ್ಯ ಅರ್ಥಿಕ ಮಂತ್ರಿಗಳು ಆಯವ್ಯಯ ಪತ್ರದಲ್ಲಿ 13—32 ಕೋಟಿ ರೂಪಾಯಿಗಳ ಕೊರತೆಯ ಆಯವ್ಯಯ ಮುಂಗಡ ಪತ್ರವನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. ಈ 13—32 ಕೋಟಿ ರೂಪಾಯಿಗಳನ್ನು ಹೇಗೆ ಸಂಪಾದನೆ ಮಾಡುತ್ತಾರೆ. ಯಾವ ರೀತಿಯಲ್ಲಿ ಜನತೆಯಿಂದ ವಸೂಲು ಮಾಡುತ್ತಾರೆ. ಬೇರೆ ಬೇರೆ ಮೂಲಗಳಿಂದ ಹೇಗೆ ಹಣವನ್ನು ಸಂಪಾದನೆ ಮಾಡುತ್ತಾರೆ ಎನ್ನುವುದನ್ನು ಬಜೆಟ್ಟಿನಲ್ಲಿ ತೋರಿಸಿಲ್ಲ. ಕಳೆದ ಬಜೆಟ್ ಅಧಿವೇಶನದಲ್ಲಿ ಮಾನ್ಯ ಅರ್ಥಿಕ ಮಂತ್ರಿಗಳು ಸಂಪನ್ಮೂಲಗಳನ್ನು ವರಮಾನವನ್ನು ಹೆಚ್ಚು ಮಾಡುವುದಕ್ಕಾಗಿ ಲಾಟರಿ ನಡೆಸುತ್ತೇವೆಂದು ಹೇಳಿದ್ದರು. ಆದರೆ ಅದನ್ನು ಮಾಡಲಿಲ್ಲ. ಮದ್ರಾಸ್ ಸರ್ಕಾರದವರು ಲಾಟರಿಯನ್ನು ಮಾಡಿದ್ದಾರೆ, ಕೇರಳ ಸರ್ಕಾರದವರು ಮಾಡಿದ್ದಾರೆ. ಮೈಸೂರಿನಲ್ಲಿ ಲಾಟರಿ ಮಾಡುತ್ತೇವೆ, ಆದ್ದರಿಂದ 4—5ಕೋಟಿ ರೂಪಾಯಿಗಳು ಉತ್ಪತ್ತಿ ಬರಬಹುದು ಎಂದು ಲೆಕ್ಕಾಚಾರವನ್ನು ಹಾಕಿದ್ದರು. ಆದರೆ ಅದರ ಬಗ್ಗೆ ಏನು ಮಾಡಿದರು ಎಂಬುದನ್ನು ಬಜೆಟ್ಟಿನಲ್ಲಿ ತೋರಿಸಿಲ್ಲ. ಈ ಬಗ್ಗೆ ನನ್ನ ವೈಯ್ಯಕ್ತಿಕ ಅಭಿಪ್ರಾಯವೇನೆಂದರೆ ಬೇರೆ ಬೇರೆ ರಾಜ್ಯಗಳವರು ಲಾಟರಿಯನ್ನು ನಡೆಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆಂದು ನಾನು ಕೇಳಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯವರು ಒಬ್ಬರು ಬೆಂಗಳೂರಿನಲ್ಲಿ ಇದ್ದಾರೆ. ಅವರು ಹೇಳಿದರು ಬೆಂಗಳೂ ರಿನಲ್ಲಿ ಒಂದು ತಿಂಗಳಿಗೆ 20 ಲಕ್ಷ ರೂಪಾಯಿಗಳ ಲಾಟರಿ ಟಿಕೆಟ್ ಮಾರಾಟವಾಗುತ್ತಿದೆ ಎಂದು ಹೇಳಿದರು, ಎಂದ ಮೇಲೆ ನಮ್ಮ ರಾಜ್ಯದವರು ಲಾಟರಿಯನು ಏತಕ್ಕೆ ಮಾಡಲಿಲ್ಲ. ಆದ್ದರಿಂದ ನಮ್ಮ ರಾಜ್ಯದ ಹಣವನ್ನು ಬೇರೆ ರಾಜ್ಯಗಳ ಲಾಟರಿಗಳಿಗೆ ಕೊಡುವುದಕ್ಕಿಂತ ನಮ್ಮ ರಾಜ್ಯದಲ್ಲೇ ಲಾಟರಿಯನ್ನು ಪ್ರಾರಂಭ ಮಾಡಿದರೆ ನಮ್ಮ ರಾಜ್ಯದ ವರಮಾನವನ್ನು ಹೆಚ್ಚಿಸಿ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ಕೊಳ್ಳಲು ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ನಮ್ಮ ಆರ್ಥಿಕ ಮಂತ್ರಿಗಳು ಕಳೆದ ಸಾಲಿನಲ್ಲಿ ತಮ್ಮ ಬಡ್ಜೆಟ್‌ನಲ್ಲಿ ಹೇಳಿದ ಕೆಲವು ಸಂಗತಿಗಳನ್ನು ಈ ಸಾರಿಯ ಬಡ್ಜೆಟ್‌ನಲ್ಲಿ ಪ್ರಸ್ತಾಪ ಮಾಡಿಲ್ಲ ಆ ಬಗ್ಗೆ ಮರೆತಿದ್ದಾರೆಂದು ಕಾಣುತ್ತದೆ. ಈಗ ಪಾನನಿರೋಧ ವನ್ನು ರದ್ದು ಮಾಡಿದ್ದಾರೆ. ಯಾರು ಎಷ್ಟು ಬೇಕಾದರೂ ಕುಡಿಯಬಹುದು. ಈ ಬಾಬಿನಿಂದ 14 ಕೋಟಿ ರೂಪಾಯಿಗಳ ವರಮಾನ ಸರ್ಕಾರಕ್ಕೆ ಬರುತ್ತಿದೆ. ಶೇಂದಿ ಮತ್ತು ಷರಾಬನ್ನು ತಯಾರು ಮಾಡಿ ಜನರಿಗೆ ಒದಗಿಸುವಾಗ, ಆ ಬಗ್ಗೆ ಎಚ್ಚರಿಕೆ ವಹಿಸಿ ಅದರಲ್ಲಿ ಏನಾದರೂ ಬದಲಾವಣೆ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಏಕೆಂದರೆ ಜನರು ಬೇರೆ ರೀತಿಯಲ್ಲಿ ತಯಾರು ಮಾಡಿದ ಶೇಂದಿ ಷರಾಬನ್ನು ಕುಡಿದು ಹಾಳಾಗುತ್ತಿದ್ದಾರೆ. 1968—1969ರಲ್ಲಿ ಬಡ್ಜೆಟ್ ಬಗ್ಗೆ ಈ ವಿಷಯದಲ್ಲಿ ಮಾನ್ಯ ಆರ್ಥಿಕ ಮಂತ್ರಿಗಳು ಮಾತನಾಡುವಾಗ ಒಂದು ವಿಚಾರವನ್ನು ಹೇಳಿದ್ದರು, ಏನೆಂದರೆ, ಜನರು ಕೆಟ್ಟ ಪಾನೀಯ ಗಳನ್ನು ಕುಡಿದು ಹಾಳಾಗುವುದನ್ನು ತಪ್ಪಿಸುವುದಕ್ಕಾಗಿ, ಅವರ ಒಂದು ದುಶ್ಚಟವನ್ನು ತಪ್ಪಿಸುವ ಸಲುವಾಗಿ ಮದ್ಯಪಾನವನ್ನು ಕುಡಿಯುವುದರಿಂದ ಆಗುವ ದುಷ್ಪರಿಣಾಮ ಗಳನ್ನು ಸಾರ್ವಜನಿಕರಿಗೆ ತಿಳಿಸುವುದಕ್ಕಾಗಿ ಒಂದು ಪಾನನಿರೋಧ ಸಮಿತಿಯನ್ನು ರಚಿಸಬೇಕೆಂದಿದ್ದೇವೆ. ಇದರಿಂದ ಮಾನ್ಯ ಸದಸ್ಯರುಗಳಿಗೆ ಸಂತೋಷವಾದೀತೆಂದು ನಾನು ಭಾವಿಸಿದ್ದೇನೆ ಎಂಬುದಾಗಿ ಹೇಳಿದ್ದರು. ಈ ಸಮಿತಿಗಳು ಎಲ್ಲಿ ಹೋದವು ಎಂದು ಕೇಳುತ್ತೇನೆ. ಜನರ ದುಶ್ಚಟವನ್ನು ತಪ್ಪಿಸುವುದಕ್ಕೆ ಈ ಸರ್ಕಾರದಿಂದ ಆಗಲಿಲ್ಲ. ಆದಕಾರಣ ಈಗ ಇರುವ 29 ಜನ ಮಂತ್ರಿಗಳು ಪ್ರತಿಯೊಂದು ಶೇಂದಿ ಅಂಗಡಿಗಳ ಮುಂದೆ ಒಬ್ಬೊಬ್ಬರು ನಿಂತುಕೊಂಡು ಈ ಬಗ್ಗೆ ಭಾಷಣ ಬಿಗಿಯುವುದು ಒಳ್ಳೆಯದು.

ಶ್ರೀ ಎಸ್. ಶಿವಪ್ಪ.—ಅವರೇ ಕುಡಿಯುತ್ತಾರೆ ?

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈ ಅಂಗಡಿಗಳನ್ನು ನಡೆಸುತ್ತಿರುವವರಲ್ಲಿ ಕಾಂಗ್ರೆಸ್ ಸಂಸ್ಥೆಯವರೇ ಹೆಚ್ಚು ಜನರಿದ್ದಾರೆ. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ನಾನು ತಿಳಿದಮಟ್ಟಿಗೆ ಹೆಂಡ ಷರಾಬ್ ಮಾರಾಟ ಮಾಡುತ್ತಿರುವವರಲ್ಲಿ ಸೆಂಟ್ ಪರ್‌ಸೆಂಟ್ ಕಾಂಗ್ರೆಸ್ ಮೆಂಬರ್‌ಗಳಾಗಿದ್ದಾರೆ. ನಮ್ಮ ಆಹಾರ ಮಂತ್ರಿಗಳು ನಮ್ಮ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರುವಾಗ ಮಧ್ಯದಲ್ಲಿ ತಮ್ಮ ಕಾರ್ಯಕ್ರಮವನ್ನು ಬದಲಾವಣೆ ಮಾಡಿಕೊಂಡು ಮಧ್ಯಾಹ್ನ ನನ್ನ ಕ್ಷೇತ್ರಕ್ಕೆ ಕಾಫಿಗೆ ಬರುತ್ತೇನೆಂದು ನನಗೆ ಕಾಗದ ಬರೆದಿದ್ದರು. ಆ ಕಾಗದದಲ್ಲಿ ಯಾವ ಕಾರ್ಯಕ್ರಮಕ್ಕಾಗಿ ಬರುತ್ತೇನೆ ಎಂಬುದನ್ನು ತಿಳಿಸಿರಲಿಲ್ಲ. ಮಧ್ಯಾಹ್ನ ಅಲ್ಲಿಗೆ ಬಂದು ಹೊರಟು ಹೋದರು. ನಂತರ ನಾನು ಅವರು ಏತಕ್ಕೆ ಬಂದಿದ್ದರು ಎಂದು ವಿಚಾರಿಸಿದಾಗ, ಒಬ್ಬ ದೊಡ್ಡ ಷರಾಬ್ ಕಂಟ್ರಾಕ್ಟರ್‌ಗೆ ಊಟ ತಯಾರು ಮಾಡಲಿಕ್ಕೆ ಹೇಳಿದ್ದರು, ಅದರಂತೆ ಊಟ ಮಾಡಿಕೊಂಡು ಹೋಗುವುದಕ್ಕೆ ಬಂದಿದ್ದರು ಎಂದು ತಿಳಿದುಬಂತು. ಈ ಮಂತ್ರಿಗಳಿಗೆ ಊಟ ತಯಾರು ಮಾಡಲು ಷರಾಬ್ ಕಂಟ್ರಾಕ್ಟರೇ ಆಗಬೇಕು. ಮಂತ್ರಿಗಳು ಬಂದರೆ ಅವರ ಹಿಂದೆ 50 ಜನರು ಬರುತ್ತಾರೆ. ಅಧಿಕಾರಿಗಳು, ನೆಂಟರು, ಸಂಬಂಧೀಕರು ಮುಂತಾಗಿ ಎಲ್ಲರೂ ಬರುತ್ತಾರೆ. ಆಫೀಸರ್‌ಗಳಿಗೆ ಸರ್ಕಾರದವರು ಕೊಡುವ ಭತ್ಯ ಊಟಕ್ಕೆ ಸಾಕಾಗುವುದಿಲ್ಲವೆಂದು ಕಾಣುತ್ತದೆ, ಅದಕ್ಕಾಗಿ ಮಂತ್ರಿಗಳ ಜೊತೆಯಲ್ಲಿ ಊಟಕ್ಕೆ ಬರುತ್ತಾರೆ. ಇಷ್ಟೊಂದು ಜನಕ್ಕೆ ಊಟ ತಯಾರು ಮಾಡುವವರು ಬೇರೆ ಯಾರು ಸಿಗಲಾರರೆಂದು ತಿಳಿದುಕೊಂಡು ಈ ಷರಾಬ್ ಕಂಟ್ರಾಕ್ಟರನ್ನು ಹಿಡಿದಿದ್ದಾರೆ. ನಾನಾದರು ಇಷ್ಟು ಮಾತ್ರ ಹೇಳುತ್ತೇನೆ, ಈ ದೇಶದಲ್ಲಿ ಗಾಂಧಿವಾದವನ್ನು ಬೆಳೆಸಬೇಕೆಂದಿದ್ದರೆ, ಗಾಂಧಿವಾದವನ್ನು ಜಾರಿಗೆ ತರಬೇಕೆಂದಿದ್ದರೆ ನಮ್ಮ ಆರ್ಥಿಕ ಮಂತ್ರಿಗಳು ಹೇಳಿರುವ ಪ್ರಕಾರ ಪಾನನಿರೋಧ ಪ್ರಚಾರ ಸಮಿತಿಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಒಂದು ವಿಚಿತ್ರ ಸಂಗತಿ ಏನೆಂದರೆ, ಈ ಜಿಲ್ಲೆ ಮದ್ರಾಸ್ ರಾಜ್ಯದಲ್ಲಿ ಸೇರಿದ್ದಾಗ ಅಲ್ಲಿಯ ಜನರು ಒಂದು ತರಹ ಇದ್ದರು. ಈಗ ಮೈಸೂರಿಗೆ ಸೇರಿದ ಮೇಲೆ ಅಲ್ಲಿಯ ಜನರು ನತದೃಷ್ಟರಾಗಿದ್ದಾರೆ. ಏತಕ್ಕಾಗಿ ಈ ಜಿಲ್ಲೆಯನ್ನು ಮಾದ್ರಾಸ್ ರಾಜ್ಯದಿಂದ ಮೈಸೂರು ರಾಜ್ಯಕ್ಕೆ ಸೇರಿಸಿದರೋ ಎನ್ನುವ ಪರಿಸ್ಥಿತಿಗೆ ಅಲ್ಲಿಯ ಜನರು ಬಂದಿದ್ದಾರೆ. ಈ ರಾಜ್ಯಕ್ಕೆ ಸೇರಿದಮೇಲೆ ನಮ್ಮ ರಾಜ್ಯದ ಜನರ ಪರಿಸ್ಥಿತಿ ಡೋಲಾಯಮಾನವಾಗಿದೆ. ಅಂಕಿ ಅಂಶಗಳ ಮೂಲಕ ಇದನ್ನು ಹೇಳುತ್ತೇನೆ. 1962ರಿಂದಲೂ ನಾನು ಈ ಸಭೆಯ ಸದಸ್ಯನಾಗಿದ್ದೇನೆ.

ಪ್ರತಿವರ್ಷದ ಬಡ್ಜೆಟ್‌ನಲ್ಲಿಯೂ ಸಹ ಈ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿ ಗೊಬ್ಬರದ ಕಾರ್ಖಾನೆ, ಅಲ್ಯೂಮಿನಿಯಂ ಕಾರ್ಖಾನೆ ಮುಂತಾದ ಕಾರ್ಖಾನೆಗಳು ಪ್ರಾರಂಭವಾಗುತ್ತದೆಂಬ ಆಶ್ವಾಸನೆಯ ಸುರಿಮಳೆಯನ್ನೇ ಕೊಡುತ್ತಾ ಬಂದಿದ್ದಾರೆ. ಆದರೆ ಈ ಸಾರಿಯ ಬಡ್ಜೆಟ್ ಪುಸ್ತಕವನ್ನು ತಿರುವಿ ಹಾಕಿದರೆ ಗೊಬ್ಬರದ ಕಾರ್ಖಾನೆಯ ಸುದ್ದಿಯೇ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೆ ಈ ವಿಚಾರದಲ್ಲಿ ಸರಿಯಾದ ಸಂಗತಿ ಗೊತ್ತಿಲ್ಲ. ಇವತ್ತು ಬೆಳಿಗ್ಗೆ ಪ್ರಶ್ನೋತ್ತರ ಕಾಲದಲ್ಲಿ ಈ ಗೊಬ್ಬರದ ಕಾರ್ಖಾನೆಯ ಬಗ್ಗೆ ಹೇಳುತ್ತಾ ವಿದೇಶಿ ಸಂಸ್ಥೆಯೊಂದಿಗೆ ಮಾತುಕತೆ ನಡೆದಿದೆ. ಇಷ್ಟರಲ್ಲಿಯೇ ಗೊಬ್ಬರದ ಕಾರ್ಖಾನೆ ಪ್ರಾರಂಭವಾಗುತ್ತದೆಂದು ಹೇಳಿದರು. ಆದರೆ ಸರ್ಕಾರದ ವಕ್ತಾರರು ಅಂದರೆ ಸರ್ಕಾರದ ಮುಖ್ಯಾಧಿಕಾರಿಗಳು 31 ಜನವರಿ 1969ರಲ್ಲಿ ಈ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟರು. ಅದು ಪತ್ರಿಕೆಗಳಲ್ಲಿ ಸಹ ಬಂದಿದೆ. ಏನೆಂದರೆ ಮೈಸೂರು ಸರ್ಕಾರ ಬ್ರಿಟಿಷ್-ಡಚ್ ಸಂಸ್ಥೆಯ ಸಹ ಭಾಗಿತ್ವದಲ್ಲಿ ಮಂಗಳೂರಿನಲ್ಲಿ ಒಂದು ರಾಸಾಯನಿಕ ಗೊಬ್ಬರ ಕಾರ್ಖಾನೆಯನ್ನು ಸ್ಥಾಪಿಸುವ ಸಲುವಾಗಿ ಮಾತುಕತೆಯಾಗಿದೆ, ಈ ಬಗ್ಗೆ ಕೇಂದ್ರ ಸರ್ಕಾರದ ಅಂತಿಮ ನಿರ್ಧಾರವನ್ನು ನಿರೀಕ್ಷಿಸುತ್ತಿದ್ದೇವೆ ಎಂದುದಾಗಿ. ಈ ವಿಚಾರ ಮುಖ್ಯ ಮಂತ್ರಿಗಳಿಗೆ ಗೊತ್ತಿಲ್ಲವೆಂದು ಕಾಣುತ್ತದೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಈ ಬಗ್ಗೆ ಒಂದು ಉದಾಹರಣೆಯನ್ನು ಕೊಟ್ಟರು, ಏನೆಂದರೆ ನನ್ನಂಥ ಹೆಡ್ಡರು ಬೇಕಾದರೆ ಮಕ್ಕಳಾಗುವುದಕ್ಕೆ ಮುಂಚೆ ಕುಲಾವಿಯನ್ನು ಹೊಲಿಸಿಡಬಹುದು. ಆದರೆ ಈ ಸರ್ಕಾರದವರು ಮದುವೆಗೆ ಮುಂಚೆಯೇ ಕುಲಾವಿಯನ್ನು ಹೊಲಿಸಿಡುತ್ತಿದ್ದಾರೆ ಎಂದು ಹೇಳಿದರು. ಅಂದರೆ ಈ ಗೊಬ್ಬರದ ಕಾರ್ಖಾನೆ ಇನ್ನೂ ಪ್ರಾರಂಭವಾಗಿಲ್ಲದಿದ್ದರೂ ಎರಡೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೀರು ಸರಬರಾಜಿನ ಯೋಜನೆಯನ್ನು ತಮ್ಮ ಕಡೆಯ ಕಂಟ್ರಾಕ್ಟರಿಗೆ ಸಹಾಯ ಮಾಡುವ ಸಲುವಾಗಿ ಪ್ರಾರಂಭ ಮಾಡಿದ್ದಾರೆ. ಇದು ಸರ್ಕಾರದ ಅಂಧ ನೀತಿಯೆಂದು ಹೇಳಬಹುದು. ಈ ಯೋಜನೆಗಾಗಿ ಆ ಕಂಟ್ರಾಕ್ಟರಿಗೆ 50 ಲಕ್ಷ ರೂಪಾಯಿಗಳ ಅಡ್ವಾನ್ಸ್ ಬೇರೆ ಕೊಟ್ಟಿದ್ದಾರೆ. ಮುಂದೆ ಈ ನೀರನ್ನು ಸಮುದ್ರಕ್ಕೆ ಬಿಡುತ್ತಾರೋ ಏನೋ ಗೊತ್ತಿಲ್ಲ. ಈ ಸಲದ ಬಡ್ಜೆಟ್‌ನಲ್ಲಿ ಈ ಗೊಬ್ಬರದ ಕಾರ್ಖಾನೆಯ ಬಗ್ಗೆ ಏನೂ ಹೇಳಿಲ್ಲದಿರುವುದರಿಂದ, ಈ ಬಗ್ಗೆ ಸರ್ಕಾರದಲ್ಲಿ ಯಾವ ಒಂದು ಮಾಹಿತಿಯೂ ಇಲ್ಲವೆಂದು ಕಾಣುತ್ತದೆ. ಈ ವಿಚಾರದಲ್ಲಿ ಯಾವ ಶಬ್ದವನ್ನು ಉಪಯೋಗಿಸಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಕೆಟ್ಟ ಶಬ್ದವನ್ನು ಉಪಯೋಗಿಸಬೇಕಾಗುತ್ತದೆ. ಈ ಅಂಧ ಸರ್ಕಾರದವರು ಯಾವುದನ್ನೂ ಸರಿಯಾಗಿ ಯೋಚನೆ ಮಾಡದೆ ತಪ್ಪು ಹೇಳಿಕೆ ಕೊಡುತ್ತಿದ್ದಾರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಮಾನ್ಯ ಮೀನುಗಾರಿಕೆಯ ಮಂತ್ರಿಗಳು ಪ್ರತಿ ದಿವಸ ಪತ್ರಿಕಾ ಹೇಳಿಕೆಯನ್ನು ಕೊಡುತ್ತಿರುತ್ತಾರೆ. ಮೊನ್ನೆ ಒಂದು ಪತ್ರಿಕಾ ಹೇಳಿಕೆ ಕೊಡುತ್ತಾ ಮೈಸೂರು ರಾಜ್ಯದಲ್ಲಿ ಮೂರು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಒಂದು ಫಿಷರೀಸ್ ಕಾರ್ಪೊರೇಷನನ್ನು ರಚನೆ ಮಾಡುತ್ತೇವೆಂದು ಹೇಳಿದ್ದಾರೆ. ಹಿಂದೆ ಇದೇ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದ ಶ್ರೀಮಾನ್ ದೇವರಾಜ ಅರಸ್ ಅವರೂ ಸಹ ಇದೇ ರೀತಿ ಹೇಳಿಕೆ ಕೊಡುತ್ತಿದ್ದರು. ಆದರೆ ಈ ಸಾಲಿನ ಬಡ್ಜೆಟ್‌ನಲ್ಲಿ ಫಿಷರೀಸ್ ಕಾರ್ಪೊರೇಷನ್ ಬಗ್ಗೆ ಏನೂ ಹೇಳಿಲ್ಲ. ಆ ಮೂರು ಕೋಟಿ ರೂಪಾಯಿಗಳು ಎಲ್ಲಿಗೆ ಹೋಯಿತು, ಗೊಬ್ಬರದ ಕಾರ್ಖಾನೆಯ ರೀತಿ ಇದೂ ಆಗಬಹುದೆಂದು ನಾನು ತಿಳಿಯುತ್ತೇನೆ. ಮತ್ತು ಈ ಕಾರ್ಪೊರೇಷನ್ ರಚನೆಯ ವಿಚಾರವೂ ಸಹ ಡೋಲಾಯಮಾನವಾಗಿದೆ. ಇನ್ನೊಂದು ವಿಶೇಷವಾದ ಸಂಗತಿ ಎಂದರೆ ಮೊನ್ನೆ ಮೀನುಗಾರಿಕೆಯ ಮಂತ್ರಿಗಳು ಅಖಿಲ ಭಾರತದ ಕಾಂಗ್ರೆಸ್ ಅಧ್ಯಕ್ಷರನ್ನು ಮಲ್ಪೆಗೆ ಕರೆದುಕೊಂಡು ಬಂದು, 9.56 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೀನುಗಾರಿಕೆ ಬಂದರಿನ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಸಲುವಾಗಿ ಅಡಿಗಲ್ಲನ್ನು ಹಾಕಿಸಿದರು. ಈ ಮಲ್ಪೆ ಬಂದರು ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿ ಸಿಕ್ಕಿಲ್ಲ ಎಂಬುದನ್ನು ಸರ್ಕಾರದವರೇ ತಿಳಿಸಿದ್ದಾರೆ. ಮಂಜೂರಾತಿ ಇಲ್ಲದ ಯೋಜನೆಗೆ ಅಡಿಗಲ್ಲನ್ನು ಹಾಕಿಸಿದ್ದಾರೆ. ಸರ್ಕಾರೀ ರಂಗಗಳಲ್ಲಿ ಪ್ರಾರಂಭವಾಗುವ ಕೆಲಸಗಳಿಗೆ ಅಡಿಗಲ್ಲನ್ನು ಯಾವ ರಾಜಕೀಯ ಪಕ್ಷಗಳ ಮುಖಂಡರೂ ಸಹ ಹಾಕಬಾರದೆಂದು ಸರ್ಕಾರದವರು ಆಜ್ಞೆ ಹೊರಡಿಸಿದ್ದಾರೆ. ಈ ರೀತಿ ಆರ್ಡರ್ ಇದ್ದರೂ ಸಹ ಅಖಿಲಭಾರತದ ಕಾಂಗ್ರೆಸ್ ಅಧ್ಯಕ್ಷರ ಕೈಯಲ್ಲಿ ಈ ಮಂಜೂರಾತಿ ಇಲ್ಲದ ಯೋಜನೆಗೆ ಅಡಿಗಲ್ಲನ್ನು ಹಾಕಿಸಿ ಕಾಂಗ್ರೆಸ್‌ನ ಪ್ರಚಾರ ಕಾರ್ಯವನ್ನು ಮಾಡಿದ್ದಾರೆ. ನಮ್ಮ ರಾಜ್ಯದ ಸ್ಥಿತಿ ಒಂದು ರೀತಿಯಾದ ಡೋಲಾಯಮಾನವಾದ ಸ್ಥಿತಿಯಲ್ಲಿ ನಡೆಯುತ್ತಿದೆ. ಇದೇಕೆ ಹೀಗೆ ಆಗುತ್ತಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಇಲ್ಲಿನ ಸದಸ್ಯರುಗಳು ಸರಕಾರದ ಬಗ್ಗೆ ಎಷ್ಟು ನ್ಯಾಯವಾಗಿ ಟೀಕೆ ಮಾಡಿದರೂ ಅದನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳುವುದಿಲ್ಲ. ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಹೇಳಿದಹಾಗೆ ಸರಕಾರದ ಚರ್ಮ ಬಹಳ ದಪ್ಪವಾಗಿ ಧಾರವಾಡದ ಎಮ್ಮೆಗಳಂತೆ ಬರಬರುತ್ತಾ ಆಗುತ್ತಿದೆ. ಇದಕ್ಕೆ ಎಷ್ಟು ದಪ್ಪ ದೊಣ್ಣೆ

(ಶ್ರೀ ಬಿ. ಭಾಸ್ಕರ ಶೆಟ್ಟಿ)

ತೆಗೆದುಕೊಂಡು ಹೋದರೂ ಅದರಿಂದ ಏನು ಉಪಯೋಗವಾಗುವುದಿಲ್ಲ. ಇಂತಹ ಒಂದು ಡೋಲಾಯಮಾನವಾದ ಪರಿಸ್ಥಿತಿ ಇಂದು ನಮ್ಮ ರಾಜ್ಯದಲ್ಲಿ ಇರುವುದರಿಂದ ಯಾವ ಯೋಜನೆಯೇ ಆಗಲೀ ಇಂದು ಪ್ರಯೋಜನವಾಗುತ್ತಿಲ್ಲ. ಇದರ ಕಡೆಗೆ ಸರ್ಕಾರ ಸೂಕ್ತವಾದ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಶಾಂತಿನಗರ—ಬೆಂಗಳೂರು ಅರ್ಬನ್).—ಮಾನ್ಯ ಅಧ್ಯಕ್ಷರೇ, ಹಣಕಾಸಿನ ಸಚಿವರು ಮಂಡಿಸಿರುವ ಬಜೆಟ್ಟನ್ನು ಸ್ವಾಗತ ಮಾಡುತ್ತಾ ಒಂದೆರಡು ಮಾತುಗಳನ್ನು ಇಲ್ಲಿ ಹೇಳಲು ಇಚ್ಛಿಪಡುತ್ತೇನೆ.

ಇಂದು ಸರಕಾರ ಟ್ಯಾಕ್ಸ್ ಎಂದು ಏನು ಹಾಕುತ್ತಿದ್ದಾರೆ ಅದರ ವಸೂಲಿ ಕಡೆಗೆ ಸರಕಾರ ಗಮನ ಕೊಡುತ್ತಿಲ್ಲ. ಇದರಿಂದ ಕೆಲವರು ಕಳ್ಳಲೆಕ್ಕಗಳನ್ನು ಇಟ್ಟುಕೊಂಡು ಇರುತ್ತಾರೆ. ಸೇಲ್ಸ್ ಟ್ಯಾಕ್ಸ್ ವಸೂಲಿಗೆ ತೋರಿಸುವುದು ಒಂದು ಲೆಕ್ಕ ಇನ್ನೊಂದು ಲೆಕ್ಕ ಯಾರಿಗೂ ತೋರಿಸುವುದಿಲ್ಲ. ಇದರಿಂದಾಗಿ ಎಷ್ಟೋ ಜನ ಅಧಿಕಾರಿಗಳಿಗೆ ಮಾಮೂಲು ಎಂದು ಬರುತ್ತಿದೆ ಮತ್ತು ಅವರಿಗೆ ಬೇಕಾದಹಾಗೆ ಸಂಪಾದನೆಯಾಗುತ್ತಿದೆ. ಸರಕಾರಕ್ಕೆ ಇದರಿಂದ ನ್ಯಾಯವಾಗಿ ಬರಬೇಕಾದ ಎಷ್ಟೋ ಹಣ ಬರುತ್ತಿಲ್ಲ. ದಿನ ನಿತ್ಯ ಇದರಲ್ಲಿರುವ ಅಧಿಕಾರಿಗಳು ಯಾವುದೋ ಒಂದು ನಿರ್ದಿಷ್ಟ ಕಾಲಕ್ಕೆ ಹೋಗಿ ಅವರ ಮಾಮೂಲುಗಳನ್ನು ವಸೂಲು ಮಾಡಿಕೊಳ್ಳಲು ಹೋಗುತ್ತಾರೆ. ಇದರಿಂದಾಗಿ ಸರಕಾರಕ್ಕೆ ಬರುವ ಹೆಚ್ಚಿಗೆ ದುಡ್ಡು ಹಾಳಾಗಿ ಹೋಗುತ್ತಿದೆ.

ಎರಡನೇದು ಸರಕಾರದಲ್ಲಿ ಲಾರಿಗಳನ್ನು ಚೆಕ್ ಮಾಡುವುದಕ್ಕಾಗಿ ಚೆಕ್‌ಪೋಸ್ಟುಗಳನ್ನು ನೇಮಕ ಮಾಡಿರುತ್ತಾರೆ. ಅಲ್ಲಿರುವ ಅಧಿಕಾರಿಗಳು ಲಾರಿಗಳು ಬಂದ ಕೂಡಲೇ ಅದಕ್ಕೆ ಸಂಬಂಧಪಟ್ಟ ಎಲ್ಲ ಬ್ರೇಕ್ ಇತ್ಯಾದಿಗಳು ಸರಿಯಾಗಿವೆಯೇ ಇಲ್ಲವೇ ಎನ್ನುವುದನ್ನೆಲ್ಲಾ ಸರಿಯಾಗಿ ನೋಡಿ ಅನಂತರ ಅದರ ಬಗ್ಗೆ ಫಿಟ್ ಸರ್ಟಿಫಿಕೇಟು ಕೊಡಬೇಕು. ಆದರೆ ಹೀಗೆ ಮಾಡದೆ ಇರುವುದರಿಂದ ಎಷ್ಟೋ ಲಾರಿಗಳ ಅಪಘಾತಕ್ಕೆ ಕಾರಣವಾಗಿವೆ. ಲಾರಿಗಳನ್ನು ತಂದಾಗ ಅವು ಸರಿಯಾಗಿಲ್ಲದೇ ಇದ್ದರೆ ಅಂತಹ ಲಾರಿಗಳಿಗೆ ಸರ್ಟಿಫಿಕೇಟನ್ನು ಕೊಡಲೇಬಾರದು ಮತ್ತು ಆರ್. ಟಿ. ಆಫೀಸುಗಳಲ್ಲಿ ಚೆಕ್ ಮಾಡಲು ಬ್ರೇಕ್ ಇನ್ಸ್‌ಪೆಕ್ಟರುಗಳು ಎಂದಿರುತ್ತಾರೆ. ಇವರುಗಳು ಲಾರಿಗಳು ಬಂದಾಗ ಅವನ್ನು ಸರಿಯಾಗಿ ನೋಡಿ ಚೆಕ್ ಮಾಡಬೇಕಾದುದು ಅಗತ್ಯ. ಆದರೆ ಈಗ ಹಾಗೆ ಮಾಡುತ್ತಿಲ್ಲ. ಲಾರಿಗಳಲ್ಲಿರುವ ಸ್ಪಿಡಾಮೀಟರು ಸರಿಯಾಗಿದೆಯೇ ಇದರ ಬ್ರೇಕುಗಳು ಸರಿಯಾಗಿವೆಯೇ ಇಲ್ಲವೇ ಎನ್ನುವುದೊಂದನ್ನೂ ನೋಡುತ್ತಿಲ್ಲ ಸುಮ್ಮನೆ ಒಂದು ಕಡೆ ಒಂದು ರೌಂಡು ಸುತ್ತಿಸಿ ಆ ನಂತರ ಕಳುಹಿಸುತ್ತಾರೆ. ಇದರಿಂದ ಎಷ್ಟೋ ಕಡೆಗಳಲ್ಲಿ ಓಡುವ ಲಾರಿಗಳು ಸರಿಯಾಗಿಲ್ಲದೆ ಇವೊತ್ತು ದಿನಂಪ್ರತಿ ಒಂದಲ್ಲ ಒಂದು ಕಡೆ ಲಾರಿ ಅಪಘಾತಗಳು ಆಗುತ್ತಿರುತ್ತವೆ ಎನ್ನುವುದನ್ನು ದಿನವಹೀ ಪೇಪರುಗಳಲ್ಲಿ ಓದುತ್ತಿರುತ್ತೇವೆ. ಆದುದರಿಂದ ಸರಕಾರದವರು ಇದರ ಕಡೆಗೆ ಗಮನ ಕೊಟ್ಟು ಇಲ್ಲಿರುವ ಬ್ರೇಕ್ ಇನ್ಸ್‌ಪೆಕ್ಟರುಗಳು ಸರಿಯಾಗಿ ಕೆಲಸ ಮಾಡುತ್ತಿದ್ದಾರೆಯೇ ಇಲ್ಲವೇ ಎನ್ನುವುದಕ್ಕೆ ಒಂದು ಕಮಿಟಿಯನ್ನಾದರೂ ಮಾಡಿ ಅದರ ಮೂಲಕ ಜನತೆಗೆ ಅನುಕೂಲ ಮಾಡಿದರೆ ಎಷ್ಟೋ ಸಹಾಯವಾಗುತ್ತದೆ. ಕಮಿಟಿಯವರು ಇದರ ಬಗ್ಗೆ ಹೋಗಿ ಬ್ರೇಕ್ ಇನ್ಸ್‌ಪೆಕ್ಟರ್‌ಗಳು ಸರಿಯಾಗಿ ಪರಿಶೀಲನೆ ಮಾಡಿ ಕೆಲಸ ಮಾಡುತ್ತಿದ್ದಾರೋ ಇಲ್ಲವೋ ಎನ್ನುವುದನ್ನೆಲ್ಲಾ ಪರಿಶೀಲನೆ ಮಾಡಿ ಸರಕಾರಕ್ಕೆ ವರದಿ ಕಳುಹಿಸಿದ ಮೇಲೆ ಅದರ ಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬಹುದು. ಅಲ್ಲದೆ ಡ್ರೈವರುಗಳು ಎಂದು ಲಾರಿ ಓಡಿಸುವವರಿಗೆ ಸರಿಯಾದ ತರಬೇತಿ ಇಲ್ಲದೆ ಇರುವುದರಿಂದ ಎಷ್ಟೋ ಕಡೆಗಳಲ್ಲಿ ಅಪಘಾತಕ್ಕೆ ಕಾರಣವಾಗಿರುತ್ತದೆ. ಈಚೀಚೆಗೆ ಬೆಂಗಳೂರಿನಲ್ಲಿ ಲಾರಿಗಳ ಅಪಘಾತಗಳು ದಿನೇ ದಿನೇ ಹೆಚ್ಚುತ್ತಿವೆ ಎನ್ನುವುದು ಪೇಪರುಗಳನ್ನು ನೋಡಿದರೆ ನಮಗೆಲ್ಲರಿಗೂ ಗೊತ್ತಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಬ್ರೇಕ್ ಇನ್ಸ್‌ಪೆಕ್ಟರುಗಳು ವೆಹಿಕಲ್‌ಗಳನ್ನು ಸರಿಯಾಗಿ ಇನ್ಸ್‌ಪೆಕ್ಟ್ ಮಾಡುತ್ತಿಲ್ಲ. ಇದರ ಕಡೆಗೆ ಸರಕಾರ ತೀವ್ರವಾದ ಗಮನ ಕೊಡಬೇಕಾಗಿದೆ.

ಮೂರನೇದು, ಬೆಂಗಳೂರು ನಗರದಲ್ಲಿ ಹಿಂದೆ ಐದು ಲಕ್ಷ ಜನಸಂಖ್ಯೆ ಇತ್ತು. ಇಂದು ನಗರ ಬಹಳ ದೊಡ್ಡದಾಗಿ ಬೆಳೆಯುತ್ತಾ ಬರುತ್ತಿದೆ. ಇದರಿಂದಾಗಿ ಜನಸಂಖ್ಯೆ ಕೂಡ ಸುಮಾರು 17-18 ಲಕ್ಷದವರೆಗೆ ಏರುತ್ತಿದೆ. ಇದಕ್ಕೆ ತಕ್ಕಂತೆ ಎಲ್ಲ ಕಡೆಗಳಲ್ಲಿಯೂ ಆಸ್ಪತ್ರೆಗಳನ್ನು ಹೆಚ್ಚು ಮಾಡಬೇಕು ಮತ್ತು ಜನಗಳಿಗೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕು. ಇವೊತ್ತಿನ ದಿವಸ ಇದರ ಲೆಕ್ಕ ತೆಗೆದುಕೊಂಡರೆ ಬೆಂಗಳೂರಿನಲ್ಲಿ ಇಲ್ಲಿನ ಜನಕ್ಕಿಂತ ಹೊರಗಿನಿಂದ ಬಂದ ಜನರೇ

ಹೆಚ್ಚಾಗಿರುತ್ತಾರೆ. ಆಸ್ಪತ್ರೆಗಳಲ್ಲಿ ಹೋಗಿ ನೋಡಿದರೆ ರೋಗಿಗಳಿಗೆ ಮಂಚಗಳಿಲ್ಲದೆ ವರಾಂಡದಲ್ಲಿ ನೆಲದ ಮೇಲೆ ಹಾಸಿಗೆಗಳನ್ನು ಹಾಕಿರುವುದು ಕಾಣುತ್ತದೆ. ಇದಕ್ಕೆ ಕಾರಣ ಆಸ್ಪತ್ರೆಗಳಲ್ಲಿ ಸ್ಥಳದ ಅಭಾವವಿರುವುದರಿಂದ ಎನ್ನುವುದು ಎಲ್ಲರಿಗೂ ಗೊತ್ತಾಗುತ್ತದೆ. ಇದನ್ನು ಸರಿಪಡಿಸುವುದರ ಕಡೆಗೆ ಸರಕಾರದವರು ಗಮನ ಕೊಡಬೇಕಾದುದು ಅಗತ್ಯ. ಇದರಲ್ಲಿ ಬೆಂಗಳೂರಿನವರಿಗೆ ಅನುಕೂಲ ಮಾಡಬೇಕೆಂದು ಹೇಳುತ್ತಿಲ್ಲ. ಎಲ್ಲರಿಗೂ ಅನುಕೂಲ ಮಾಡಿಕೊಡುವುದು ಅವಶ್ಯಕ. ಇವೊತ್ತು ನಾವು ಬೌರಿಂಗ್ ಆಸ್ಪತ್ರೆಯಲ್ಲಿ ನೋಡಿದರೆ ಅಲ್ಲಿರುವವರೆಲ್ಲ ಎಂ. ಎಲ್. ಎ. ಮತ್ತು ಆಫೀಸರುಗಳನ್ನು ನೋಡುತ್ತಾರೆ. ಬಡವರನ್ನು ನೋಡುವುದಿಲ್ಲ. ಸಾಧಾರಣ ಜನರು ಬಂದು ಆಸ್ಪತ್ರೆಗೆ ಅರ್ಜೆಂಟಾಗಿ ಸೇರಬೇಕು ಎಂದರೆ ಅವರಿಗೆ ಸರಿಯಾದ ಪ್ರಭಾವ ಇಲ್ಲದೇ ಹೋದರೆ ಅವರಿಗೆ ಸೇರಲು ಅವಕಾಶವೇ ಸಿಗುವುದಿಲ್ಲ. ಇವೊತ್ತು ಹಣವಂತರಾಗಿರುವವರು ಹೇಗಾದರೂ ದುಡ್ಡು ಕೊಟ್ಟುಕೊಂಡು ಅವರು ಆಸ್ಪತ್ರೆಗಳಿಗೆ ಸೇರುತ್ತಾರೆ. ಬಡ ಜನರಿಗೆ ನ್ಯಾಯವಾಗಿ ಸಿಗಬೇಕಾದ ಸೌಲಭ್ಯಗಳು ಇಂದು ಆಸ್ಪತ್ರೆಗಳಲ್ಲಿ ಸಿಗುತ್ತಿಲ್ಲ. ಅಲ್ಲದೆ ಈಗ ಇರುವ ಆಸ್ಪತ್ರೆಗಳು ಇಲ್ಲಿರುವ ಜನಸಂಖ್ಯೆಗೆ ಅನುಗುಣವಾಗಿಲ್ಲ. ನಗರ ದಿನೇ ದಿನೇ ದೊಡ್ಡದಾಗುತ್ತಾ ಬರುತ್ತಿದೆ. ಇದಕ್ಕಾಗಿ ರಾಜಾಜಿನಗರ, ಜಯನಗರ, ಶಾಂತಿನಗರ ಇತ್ಯಾದಿ ದೊಡ್ಡ ದೊಡ್ಡ ಬಡಾವಣೆಗಳಿರುವ ಕಡೆಗಳಲ್ಲಿ ಒಂದೊಂದು ಜನರಲ್ ಆಸ್ಪತ್ರೆಗಳನ್ನು ಸರಕಾರ ಮಾಡಲು ಏರ್ಪಾಡು ಮಾಡಬೇಕು. ನಾನು ಇದೇ ವಿಚಾರವಾಗಿ ಸಾಧಾರಣವಾಗಿ ಮಾನ್ಯ ಆರೋಗ್ಯ ಮಂತ್ರಿಗಳವರ ಗಮನಕ್ಕೂ ತರುತ್ತಿದ್ದೇನೆ ಮತ್ತು ಒಂದು ಕಾಗದ ಕೂಡ ಮಂತ್ರಿಗಳಿಗೆ ಬರೆದು ಸುಮಾರು ಒಂಬತ್ತು ತಿಂಗಳಾದರೂ ಇದುವರೆಗೆ ಆ ಕಾಗದಕ್ಕೆ ಯಾವ ಜವಾಬೂ ನನಗೆ ಬರಲಿಲ್ಲ. ಮತ್ತು ಒಂದು ಸಾರಿ ಒಬ್ಬ ಪೇಷಂಟನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಬೇಕು ಎಂದು ಒಂದು ಸಾರಿ ನಾನೇ ಕರೆದುಕೊಂಡು ಹೋಗಿದ್ದೆ. ಅಲ್ಲಿ ಅವರನ್ನು ಅಡ್ಮಿಟ್ ಮಾಡಲು ಸುಮಾರು ಒಂದೂವರೆ ಗಂಟೆಗಳ ಕಾಲ ಕಾಯಬೇಕಾಗಿ ಬಂತು. ನನ್ನಂತಹವನೇ ಹೀಗೆ ಕಾಯಬೇಕಾದರೆ ಇನ್ನು ಸಾಮಾನ್ಯ ನಾಗರೀಕನ ಪಾಡೇನು ? ಇದರ ಬಗ್ಗೆ ನಾನು ಕಾಗದ ಬರೆದು ಮಾನ್ಯ ಚೀಫ್ ಮಿನಿಸ್ಟರ್‌ರವರಿಗೆ ಹಾಗೂ ಹೆಲ್ತ್ ಮಿನಿಸ್ಟರಿಗೆ ಸುಮಾರು ಎಂಟು ತಿಂಗಳಾದರೂ ನನಗೆ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡು ಬಂದಿದ್ದಾರೆ ಎನ್ನುವುದಕ್ಕೆ ಯಾವ ವಿಚಾರಗಳನ್ನೂ ತಿಳಿಸಲಿಲ್ಲ. ಇದೂ ಅಲ್ಲದೆ ಬೌರಿಂಗ್ ಆಸ್ಪತ್ರೆಯಲ್ಲಿ ರಾತ್ರಿ ವೇಳೆ ರೋಗಿಗಳಿಗೆ ಕುಡಿಯಲು ನೀರೇ ಸಿಗುತ್ತಿಲ್ಲ. ನಾನು ರಾತ್ರಿ ಹೋಗಿದ್ದಾಗ ಒಂದು ಸಲ ನೀರು ಸಿಗದೇ ಬಹಳ ಕಷ್ಟಪಡಬೇಕಾಯಿತು. ಇದರ ಬಗ್ಗೆ ಆಗಲೇ ನಾನು ಹೆಲ್ತ್ ಮಿನಿಸ್ಟರಿಗೆ ಫೋನಿನ ಮೂಲಕ ತಿಳಿಸಿದ್ದೆ ಮತ್ತು ಇಲ್ಲಿರುವ ಎಲ್ಲ ಅಧಿಕಾರಿಗಳ ಗಮನಕ್ಕೂ ಇದರ ವಿಚಾರವಾಗಿ ಹೇಳಿದ್ದೆ. ಇದರ ಬಗ್ಗೆ ಪರಿಶೀಲನೆ ಮಾಡಿ ಏನು ಕಾರ್ಯಕ್ರಮ ತೆಗೆದುಕೊಂಡರು ಎನ್ನುವುದಕ್ಕೆ ತಿಳಿಸಬೇಕೆಂದು ನಾನು ಪತ್ರ ಬರೆದು ಕೇಳಿದ್ದರೂ ಇದುವರೆಗೂ ನನಗೆ ಇನ್ನೂ ತಿಳಿಸಲಿಲ್ಲ. ಇಂತಹ ಮುಖ್ಯವಾದ ವಿಚಾರದಲ್ಲೂ ಕೂಡ ಸರಕಾರ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದು ನೋಡಿದರೆ ನಿಜವಾಗಿಯೂ ಬಹಳ ವ್ಯಥೆಯಾಗುತ್ತದೆ. ನಾನು ಕಾರ್ಪೊರೇಷನ್ ಸದಸ್ಯನಾಗಿ ನಗರದ ಪ್ರತಿನಿಧಿಯಾಗಿ ಇಲ್ಲಿ ಬಂದು ಸರಕಾರಕ್ಕೆ ನಮ್ಮ ಮನವಿಗಳನ್ನು ಸಲ್ಲಿಸಿದರೂ ಇದರ ಬಗ್ಗೆ ಸರಕಾರ ಸರಿಯಾದ ಕೆಲಸಗಳನ್ನು ಮಾಡುತ್ತಿಲ್ಲ. ಅಲ್ಲದೆ ನಮ್ಮ ಬೆಂಗಳೂರು ನಗರದಲ್ಲಿ ಹಿಂದೆ ನಾವು ಸದಸ್ಯರಾಗಿದ್ದಾಗ ಮೂರು ಮೂರು ಡಿವಿಜನ್‌ಗಳಿಗೆ ಒಂದೊಂದು ಹೆರಿಗೆ ಆಸ್ಪತ್ರೆ ಕಟ್ಟಿದೆ ಎಂದು ಏನು ಮಾಡಲಾಗಿತ್ತೋ ಇಂದು ಅದೇ ರೀತಿ ಲೋಕಲ್ ಫಂಡ್ ಆಸ್ಪತ್ರೆಗಳು ಇವೆಯೇ ಹೊರತು ಇದರ ಸಂಖ್ಯೆಗಳನ್ನು ಜಾಸ್ತಿ ಮಾಡುತ್ತಿಲ್ಲ. ಹೆಚ್ಚು ಆಸ್ಪತ್ರೆಗಳು ಬೇಕು ಎಂದು ಕೇಳಿದರೆ ಸರಕಾರ ದುಡ್ಡಿಲ್ಲ ಎನ್ನುತ್ತಾರೆ. ಆದರೆ ದುಡ್ಡು ಕೊಡುತ್ತೇವೆ. ಇಲ್ಲಿಗೆ ಆಸ್ಪತ್ರೆ ಮಂಜೂರು ಮಾಡಿಸಿಕೊಡಿ ಎಂದು ಕೇಳಿದರೂ ಸರಕಾರದವರು ಇದರ ಕಡೆಗೆ ಗಮನ ಕೊಡುತ್ತಿಲ್ಲ. ಇಂದು ಮೈಕೋ ಫ್ಯಾಕ್ಟರಿ ಇಂದು ಆಡುಗೋಡಿಯಲ್ಲಿದೆ. ಇಲ್ಲಿ ಇದೇ ಕಂಪನಿಯವರು ಸುಮಾರು 38 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಆಸ್ಪತ್ರೆ ಕಟ್ಟಿಸುತ್ತೇವೆ ಎಂದು ಇದರ ಪ್ಲಾನ್ ಎಸ್ಟಿಮೇಟುಗಳನ್ನು ಕೊಟ್ಟು ಕಾರ್ಪೊರೇಷನ್‌ಗೆ ಅರ್ಜಿ ಹಾಕಿದ್ದರೂ ಇದುವರೆಗೂ ಇದು ಸರಕಾರದ ಗಮನಕ್ಕೆ ಬಂದಿಲ್ಲ ಎಂದು ಕೇಳುತ್ತೇವೆ. ಈಚೆಗೇನೋ ಕಾರ್ಪೊರೇಷನ್‌ರವರು ಸರಕಾರದವರ ಕಡೆಗೆ ಕಳುಹಿಸುತ್ತಾರೆಂದು ಕೇಳಿದೆ. ಇದರ ಪ್ಲಾನು ಮತ್ತು ಅಂದಾಜುಗಳೆಲ್ಲಾ ಸಿದ್ಧವಾಗಿವೆ. ಇದನ್ನು ನಾನು ಹೆಲ್ತ್ ಮಿನಿಸ್ಟರ ಗಮನಕ್ಕೂ ತಂದಿದ್ದೇನೆ. ಇಂತಹ ಒಂದು ಆಸ್ಪತ್ರೆ ಆದರೆ ಇಲ್ಲಿರುವ ಆಡುಗೋಡಿ, ನೀಲಸಂದ್ರ, ಬಿನ್ನಮಂಗಲ ಇತ್ಯಾದಿ ಪ್ರದೇಶಗಳಲ್ಲಿನ ಜನರಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರಕ್ಕೆ ಎಷ್ಟು ಒತ್ತಾಯ ಮಾಡುತ್ತಿದ್ದರೂ ಇನ್ನೂ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇದನ್ನು ನೋಡಿದರೆ ಸರಕಾರದ ಉದ್ದೇಶವೇನ ಎನ್ನುವುದು ನಮಗೆ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸರಕಾರ ತೀವ್ರವಾಗಿ ಗಮನ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಬಗ್ಗೆ ಹೆಲ್ತ್ ಡೆಪ್ಯುಟಿ ಮಿನಿಸ್ಟರಿಗೂ ತಿಳಿಸಿದ್ದೇನೆ.

(ಶ್ರೀ ಎ. ನಂಜಪ್ಪ)

ಇನ್ನು ನಮ್ಮ ಕಂಟೋನ್‌ಮೆಂಟು ಏರಿಯಾದಲ್ಲಿ ಒಂದು ಕಾಲೇಜು ಕೂಡ ಇಲ್ಲ. ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀ ಅಮರೇಶಪ್ಪನವರೂ ಕೂಡ ಜನಸಂಖ್ಯೆ ಇಲ್ಲಿ ಹೆಚ್ಚಾಗಿದೆ, ಇಲ್ಲಿಗೆ ಸರಕಾರದವರು ಒಂದು ಕಾಲೇಜು ಮಾಡಬೇಕೆಂದು ಹೇಳುತ್ತಲೇ ಇದ್ದರೂ ಇನ್ನೂ ಇದರ ಕಡೆಗೆ ಗಮನ ಕೊಡಲಿಲ್ಲ. ಸರಕಾರ ಇದಕ್ಕೆ ವೆಚ್ಚ ಮಾಡಕೂಡದು ಎಂದು ಇದ್ದರೆ ಇಲ್ಲಿ ಯಾರಾರು ದೊಡ್ಡ ಮನುಷ್ಯರು ಹಾಗೂ ಹಣ ಇರುವವರೂ ಇದ್ದಾರೋ ಅವರಲ್ಲಿ ಹೋಗಿ ಹೇಳಬಹುದು. ಅವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹಾಗೂ ಇಲ್ಲಿನ ಜನರ ಮಕ್ಕಳ ಎಲ್ಲರ ವಿದ್ಯಾಭ್ಯಾಸಕ್ಕೆ ಅನುಕೂಲ ವಾಗುವಂತೆ ಸುಮಾರು 50–60 ಸಾವಿರ ರೂಪಾಯಿಗಳಷ್ಟು ಡೊನೇಷನ್ ಕೊಡಿ ನಿಮ್ಮ ಹೆಸರಿನಲ್ಲೇ ಶಾಲೆಯನ್ನು ಕಟ್ಟಿಸಬಹುದು ಎಂದು ಹೇಳಿದರೆ ಉದಾರವಾಗಿರುವ ಕೆಲವರು ದುಡ್ಡು ಕೊಡುತ್ತಾರೆ. ಇದರ ಕಡೆಗೆ ಸರಕಾರ ಯಾವ ಪ್ರಯತ್ನವನ್ನೂ ಮಾಡುತ್ತಿಲ್ಲ. ಇದರಿಂದ ಸರಕಾರಕ್ಕೆ ಆಗುವ ಹಣದ ಉಳಿತಾಯವಾಗುತ್ತದೆ. ಇದೇ ರೀತಿ ಹೆಲ್ತ್ ಮಿನಿಸ್ಟರೂ ಕೂಡ ಹಣವಂತರನ್ನು ದುಡ್ಡು ಕೇಳಿ ಅವರ ಹೆಸರಿನಲ್ಲಿ ಒಂದೊಂದು ವಾರ್ಡು ಮಾಡುತ್ತೇವೆ ಎಂದು ಇದರಿಂದ ಜನಕ್ಕೆ ಅನುಕೂಲವಾಗುತ್ತದೆ ಎಂದು ಹೇಳಿದರೆ ಅಂತಹವರಿಂದಲೂ ದುಡ್ಡು ಸಿಗಬಹುದು.

7-00 P.M.

ಮೂರನೆಯದಾಗಿ ಬೆಂಗಳೂರು ಕಾರ್ಪೊರೇಷನ್ ವಿಚಾರವಾಗಿ ಹೇಳುತ್ತೇನೆ. ಈ ಬಗ್ಗೆ ಅನೇಕ ಸಲ ಈ ಹೌಸ್‌ಗೂ ತಿಳಿಸಿದ್ದೇನೆ. ಅಲ್ಲಿಯ ಅಧಿಕಾರಿಗಳನ್ನು ಬದಲಾಯಿಸಿ ಒಳ್ಳೆಯ ಅಧಿಕಾರಿಗಳನ್ನು ಹಾಕಿ ಎಂದು ಮಂತ್ರಿಗಳಿಗೂ ಹೇಳಿದ್ದೇನೆ. ಸೈಕಲ್ ಟ್ಯಾಕ್ಸ್ ಏನು ಇದೆಯೋ ಅದನ್ನು ತೆಗೆದಿದ್ದಾರೆ. ಕುಡಿಯುವ ನೀರಿಗೆ ಫ್ರೀ ಅಲೋಯನ್ಸ್ ಏನು ಮಾಡಬೇಕೋ ಅದನ್ನು 25 ಸಾವಿರ ಲೀಟರ್‌ವರೆಗೂ ಮುಫತ್ತಾಗಿ ಕೊಡಬೇಕೆಂದು ಮಾಡಿದ್ದಾರೆ. ಅದರೆ ಸರ್ಕಾರದವರು ಯಾವ ತೆರಿಗೆಯನ್ನೂ ಕೂಡ ಹಾಕದೇ ಇದ್ದ ಸಂದರ್ಭದಲ್ಲಿ ಕಾರ್ಪೊರೇಷನ್ನಿನವರು ಹೊಸ ತೆರಿಗೆಯನ್ನು ಹಾಕುತ್ತಾರೆ ಎಂದರೆ ವ್ಯಸನವಾಗುತ್ತದೆ. ಆದುದರಿಂದ ಕಾರ್ಪೊರೇಷನ್ನಿನವರು ಜನಗಳಿಗೆ ಯಾವ ಟ್ಯಾಕ್ಸನ್ನೂ ಹಾಕಬಾರದು. ಜನಗಳ ಪ್ರತಿನಿಧಿಗಳಾಗಿ ಕಾರ್ಪೊರೇಷನ್ನಿಗೆ ಚುನಾಯಿತರಾಗಿ ಬಂದರೆ ಆವಾಗ ಬೇಕಾದರೆ ಹಾಕಿಕೊಳ್ಳಿ. ಈಗ ಕಾರ್ಪೊರೇಷನ್ನಿನವರು ಯಾವ ರೀತಿಯ ಟ್ಯಾಕ್ಸನ್ನೂ ಹಾಕಬಾರದು ಎಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ, ಇನ್ನು ಕಾರ್ಪೊರೇಷನ್ನಿನವರು ಒ.ಡಿ.ಪಿ. ಮಾಡಿಕೊಂಡು ಜನರಿಗೆ ತೊಂದರೆ ಕೊಡುತ್ತಿದ್ದಾರೆ. ಮಾತನಾಡಿದರೆ ಒ.ಡಿ.ಪಿ. ಎನ್ನುತ್ತಾರೆ. ಷಾಪ್ ಏರಿಯಾದಲ್ಲಿ ಲೈಸನ್ಸ್ ಕೊಡುವುದಕ್ಕೆ ಪರ್ಮಿಷನ್ ಇದ್ದರೂ ಕೊಡುವುದಿಲ್ಲ. ಪ್ಲಾನ್‌ಸಬ್‌ಮಿಟ್ ಮಾಡಿದರೆ ರಿಜೆಕ್ಟ್ ಮಾಡುತ್ತಾರೆ. ಆದುದರಿಂದ ಸರ್ಕಾರದವರನ್ನು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಓಲ್ಡ್ ಮದ್ರಾಸ್ ರೋಡ್‌ನಲ್ಲಿ ಷಾಪ್ ಕಟ್ಟಬೇಕೆಂದು ಪ್ಲಾನ್ ಸಬ್‌ಮಿಟ್ ಮಾಡಿದರೆ ಪ್ಲಾನ್ ಸ್ಯಾಂಕ್ಷನ್ ಮಾಡುವುದಿಲ್ಲ. ಅದನ್ನು ಯಾವ ಕಾನೂನು ಪ್ರಕಾರ ಮಾಡುತ್ತಾರೋ ಗೊತ್ತಿಲ್ಲ. ಅದನ್ನು ಪ್ಲಾನ್ ಕೊಟ್ಟ 10 ತಿಂಗಳು ಆದ ಮೇಲೆ ರಿಜೆಕ್ಟ್ ಮಾಡಿದ್ದಾರೆ. ಜನಗಳಿಗೆ ಬಹಳ ತೊಂದರೆ ಕೊಡುತ್ತಿದ್ದಾರೆ. ಜನಗಳಿಂದ ಆರಿಸಿ ಬಂದವರು ಈ ರೀತಿ ಯಾವ ಮೋಸವನ್ನೂ ಮಾಡುವುದಿಲ್ಲ. ಒಬ್ಬ ಇಂಜನೀಯರ್ ಪ್ಲಾನ್ ಸಾಂಕ್ಷನ್ ಮಾಡಿದ್ದನ್ನು ಪುನಃ ರಿನ್ಯೂಯಲ್‌ಗೆ ಹಾಕಿ ರಿಜೆಕ್ಟ್ ಮಾಡಿದ್ದಾರೆ. ಸರ್ಕಾರದವರು ಅವರಿಗೆ ಸರಿಯಾದ ಇನ್‌ಸ್ಟ್ರಕ್ಷನ್ ಕೊಡಬೇಕು.

ಉಪಾಧ್ಯಕ್ಷರು.—ಈ ವಿಚಾರವನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಬಂದಾಗ ಮಾತನಾಡಬಹುದು.

ಶ್ರೀ ವಾಟಾಳ್ ನಾಗರಾಜ್.—ಅವರ ಮಾತನ್ನು ಇಲ್ಲಿ ಯಾರೂ ಕೇಳುವವರು ಇಲ್ಲ. ಮುಖ್ಯಮಂತ್ರಿಗಳೂ ಇಲ್ಲ. ಮಂತ್ರಿಗಳೂ ಇಲ್ಲ.

ಶ್ರೀ ಎ. ನಂಜಪ್ಪ.—ಇನ್ನು ಮುಖ್ಯ ಮಂತ್ರಿಗಳು ಸೈಕಲ್ ಟ್ಯಾಕ್ಸ್ ತೆಗೆದರು, ವಾಟರ್ ಅಲೋಯನ್ಸ್ ಕೊಟ್ಟರು. ಅವರು ಹಾಗೆ ಇವರು ಹೀಗೆ ಎಂದು ಭಾಷಣಮಾಡುವುದಕ್ಕೆ ಈ ಪ್ಲಾಟ್ ಫಾರಂನಲ್ಲಿ ಬರಲಿಲ್ಲ. ಜನಗಳಿಗೆ ಇನ್ನು ಹೆಚ್ಚು ಉಪಕಾರ ಮಾಡಲು ಕಾಂಗ್ರೆಸ್ ಸರಕಾರ

ತಯಾರಾಗಿದ್ದಾರೆ. ಮತ್ತು ಈಗ ಇರತಕ್ಕಂಥ ಅರಿಯರ್ಸ್‌ನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ವಿಚಾರವಾಗಿ ಎರಡು ವರ್ಷದಿಂದಲೂ ಹೇಳುತ್ತಿದ್ದೇನೆ. ಇದು ಅನ್ಯಾಯ. ಕಾನೂನು ಯಾವ ರೀತಿ ಇದೆಯೋ ಹಾಗೆ ಮಾಡಲಿ. ಅದು ಬಿಟ್ಟು ಯಾವುದಕ್ಕೆ ಲೈಸೆನ್ಸ್ ಹಾಕಿದರೂ ಕೂಡ ಒ.ಡಿ.ಪಿ. ಎನ್ನುತ್ತಾರೆ. ಈ ರೀತಿ ಪ್ಲಾನ್ ರಿನ್ಯೂ ಮಾಡದೇ ಹೋದರೆ ಏನು ಪ್ರಯೋಜನ ? ಆದುದರಿಂದ ಆ ಅಧಿಕಾರಿಗಳನ್ನು ಕರೆಸಿ ಹೇಳಬೇಕು ಎಂದು ಇನ್ನೊಂದು ಸಾರಿ ಹೇಳುತ್ತೇನೆ.

ಇನ್ನು ಬೆಂಗಳೂರು ಫುಟ್‌ಬಾಲ್ ಅಸೋಷಿಯೇಷನ್‌ಗೆ ಎಜುಕೇಷನ್ ಡಿಪಾರ್ಟ್‌ಮೆಂಟಿನವರು 26 ಸಾವಿರ ರೂಪಾಯಿ ಕೊಟ್ಟಿದ್ದಾರೆ. ಫುಟ್‌ಬಾಲ್ ಮ್ಯಾಚನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ನೋಡಬೇಕು. ಆದರೆ ಮ್ಯಾಚ್ ಆಗುವಾಗ ಗ್ಯಾಲರಿಗೆ ಒಂದೂವರೆ ರೂಪಾಯಿ ಟಿಕೆಟ್ ಹಾಕಿ ಇಟ್ಟಿದ್ದಾರೆ. ಅಲ್ಲಿ ಬಹಳ ಬಿಸಿಲು ಇದೆ. ಷೆಲ್ಟರ್ ಇಲ್ಲ ಹುಡುಗರು ಅನ್ಯಾಯವಾಗಿ ಬಿಸಿಲಿನಲ್ಲೇ ನಿಂತು ಒಣಗುತ್ತಾರೆ. ಮೊನ್ನೆ ಇದೇ ಕ್ವಾರ್ಟರ್ ಫೈನಲ್ ಮ್ಯಾಚ್ ಆದಾಗ ಇದನ್ನು ನೋಡಿದೆ. ಹುಡುಗರು ಇಷ್ಟು ಕಷ್ಟದಿಂದ ನೋಡುವುದಾದರೆ ಈ ಅಸೋಷಿಯೇಷನ್‌ಗೆ ಸರ್ಕಾರದವರು ಏತಕ್ಕೆ ದುಡ್ಡು ಕೊಡಬೇಕು. ಇದಲ್ಲದೆ ಪೋಲೀಸ್ ಬಂದೋಬಸ್ತನ್ನು ಫ್ರೀ ಆಗಿ ಕೊಡುತ್ತಿದ್ದೇವೆ.

ಇನ್ನು ಫುಟ್‌ಬಾಲ್ ಸ್ಟೇಡಿಯಂನಲ್ಲಿ ಫೈನಲ್ ಮ್ಯಾಚ್ ಬಂದರೆ ಅದೇ ಸೀಟಿಗೆ 2 ರೂಪಾಯಿ 3 ರೂಪಾಯಿ ಹಾಕುತ್ತಾರೆ. ಈ ತರಹ ಮಾಡಿದರೆ ಸಂಬಂಧಪಟ್ಟ ಮಂತ್ರಿಗಳು ಗ್ರಾಂಟ್ ಕೊಡುವುದಿಲ್ಲ ಎಂದು ಹೇಳಬೇಕು. ಆದುದರಿಂದ ಟಿಕೆಟ್ ದರವನ್ನು ನಾಳೆಯಿಂದಲೇ ಕಡಿಮೆ ಮಾಡಿಸಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಫುಟ್‌ಬಾಲ್ ಅಸೋಷಿಯೇಷನ್‌ನಲ್ಲಿ ಪಾಲಿಟಿಕ್ಸ್ ಬಹಳವಾಗಿದೆ. ಅದರ ವಿಚಾರ ಹೇಳುವುದು ಬಹಳ ಇದೆ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರಿಗೆ ಕೊಟ್ಟಿದ್ದ ವೇಳೆ ಮುಗಿಯಿತು. ಆದ್ದರಿಂದ ಅವರ ಭಾಷಣ ಮುಗಿಸಬೇಕು.

ಶ್ರೀ ಎ. ನಂಜಪ್ಪ.—ಇವರಿಗೆ ಪೋಲೀಸ್ ಬಂದೋಬಸ್ತು ಎಲ್ಲ ಅನುಕೂಲಗಳನ್ನು ಕೊಟ್ಟು ಸರ್ಕಾರ ಹೇಳಿದಹಾಗೆ ಕೇಳದೇ ಹೋದರೆ ಅವರಿಗೆ ಗ್ರಾಂಟ್ ಕೊಡಬಾರದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಲೋಕಯ್ಯನಾಯಕ್.—ಅಧ್ಯಕ್ಷರೇ, ನನಗೆ ಒಂದು ಲಗ್ನಪತ್ರಿಕೆ ಆಮಂತ್ರಣ 27ನೇ ತಾರೀಕು ಬಂದಿದೆ. ಅದು ಕರ್ನಾಟಕ ಯುವಕ ಸಂಘದ ಅಧ್ಯಕ್ಷರಿಂದ. ಶ್ರೀಮಾನ್ ಎಸ್. ಎಂ. ಬಸವಯ್ಯ, ಬಿ.ಎ., ಬಿ.ಎಲ್. ಅವರು ಸುಖಾಗಮನವನ್ನು ಬಯಸುವರು. ಅದರಲ್ಲಿ ಶ್ರೀಮಾನ್ ಕೊರಾವಳೆ, ವಿಧಾನಸಭಾಧ್ಯಕ್ಷರು, ರಾಜ್ಯದ ಮುಖ್ಯಮಂತ್ರಿಗಳು ಮತ್ತು ಅನೇಕ ಮಾನ್ಯ ಮಂತ್ರಿಗಳು, ಉಪಮಂತ್ರಿಗಳು ಮತ್ತು ಲೆಫ್ಟಿನೆಂಟ್ ಗೌರ್ನರ್ ಶ್ರೀ ಬಿ. ಡಿ. ಜತ್ತಿಯವರು ಮತ್ತು ನಮ್ಮ ಸರ್ಕಾರದ ಅನೇಕ ದೊಡ್ಡ ಹುದ್ದೆಯಲ್ಲಿರತಕ್ಕ ಅಧಿಕಾರಿಗಳ ಹೆಸರನ್ನು ಅದರಲ್ಲಿ ಪ್ರಿಂಟ್ ಮಾಡಿಸಿದ್ದಾರೆ. ಈ ರೀತಿ ಸಾಧಾರಣವಾದ ಮದುವೆ ಸಮಾರಂಭಕ್ಕೆ ಇಂತಹ ದೊಡ್ಡ ಹುದ್ದೆಯಲ್ಲಿರತಕ್ಕಂಥ ಜನರನ್ನು ಅಚ್ಚು ಹಾಕಿಸುವುದಕ್ಕೆ ಅನುಮತಿ ಕೊಟ್ಟಿದ್ದೀರಾ ಮತ್ತು ಅಚ್ಚು ಹಾಕಿಸುವ ಔಚಿತ್ಯವೇನು ? ಇದರಿಂದ ದೊಡ್ಡವರ ಹೆಸರನ್ನು ದುರುಪಯೋಗಪಡಿಸಿಕೊಳ್ಳುವ ಸಂದರ್ಭ ಇದೆ. ಅವರು ಅನುಮತಿ ಕೊಟ್ಟಿಲ್ಲವೆಂದರೆ ಈ ವಿಚಾರದಲ್ಲಿ ತಮ್ಮ ಪ್ರತಿಕ್ರಿಯೆ ಏನು ಎಂದು ತಿಳಿಸಬೇಕು. ಈ ಬಗ್ಗೆ ತಾವು ರೂಲಿಂಗ್ ಕೊಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಇದರಲ್ಲಿ ಸರ್ಕಾರದವರ ಜವಾಬ್ದಾರಿ ಏನೂ ಇಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಸ್ವಾಮಿ, ಇದು ತೀರ ಹೊಸದಾಗಿ ಕಾಣುತ್ತದೆ. ಯಾವ ಕಾಲದಲ್ಲಿಯೂ ಒಂದು ಸಂಸಾರಕ್ಕೆ ಸಂಬಂಧಪಟ್ಟ ವ್ಯವಹಾರ, ಸಮಾರಂಭ ಆದರೆ ಈ ಸಭೆಯಲ್ಲಿ ಪ್ರಸ್ತಾಪ ಮಾಡುವಂಥದ್ದು ಯಾವತ್ತೂ ನಾನು ಕೇಳಿರಲಿಲ್ಲ. ಈಗ ಶ್ರೀಮಾನ್ ಮಾದೇವಯ್ಯನವರು ಕಳುಹಿಸಿರುವ ಮದುವೆ ಆಹ್ವಾನ ಪತ್ರಿಕೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಯಾವ ಕಾನ್‌ಸ್ಟಿಟ್ಯೂಷನ್ ಮೂಲಕ, ಅಥವಾ ರೂಲ್ ಮೂಲಕ ಅಥವಾ ಸಂಪ್ರದಾಯದ ಮೂಲಕ

(ಶ್ರೀ ಕೆ. ಪುಟ್ಟಸ್ವಾಮಿ)

ಪ್ರಸ್ತಾಪ ಮಾಡಿದ್ದಾರೆನ್ನುವುದು ನನಗೆ ಅರ್ಥವಾಗಿಲ್ಲ. ಇದು ಸರ್ಕಾರದ ವ್ಯವಹಾರಕ್ಕೆ ಸಂಬಂಧಪಟ್ಟ ವಿಷಯವಲ್ಲ ಎಂದು ತಾವು ಆಗಲೇ ಹೇಳಿದಿರಿ. ಅದು ಕೇವಲ ಸಾಮಾಜಿಕ ವ್ಯವಹಾರ. ಸಾಮಾಜಿಕ ವ್ಯವಹಾರಕ್ಕೆ ಅವರಿಗೆ ಬೇಕಾದವರೆಲ್ಲರಿಗೂ ಸುಖಾಗಮನವನ್ನು ಬಯಸುತ್ತಾರೆಂದು ಹಾಕಿಕೊಳ್ಳುತ್ತಾರೆ. ಇಲ್ಲಿ ಬಹಳ ಜನಗಳ ಹೆಸರನ್ನು ಹಾಕಿದ್ದಾರೆ. ಬಹುಶಃ ಅವರನ್ನು ಕೇಳಿರಬಹುದು ಅಥವಾ ಅವರನ್ನು ಕೇಳದೆ ಅವರ ಹೆಸರನ್ನು ಉಪಯೋಗಿಸಿಕೊಂಡಿದ್ದರೆ, ಸಂಬಂಧಪಟ್ಟವರು ಆ ವಿಚಾರದಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದು, ಹೀಗೆ ಮಾಡಬಾರದು ಎಂದು ಹೇಳಬಹುದು. ಇಂಥದನ್ನು ಚರ್ಚೆ ಮಾಡುವುದು ಸರಿಯಲ್ಲ ಎಂದು ನನ್ನ ಭಾವನೆ. ಅಧ್ಯಕ್ಷರು ಇದಕ್ಕೆ ಅವಕಾಶ ಕೊಟ್ಟಿದ್ದಾರೆ. ಅವರು ಅವಕಾಶ ಕೊಟ್ಟಿದ್ದರ ಮೇಲೆ ನಾನು ಏನೂ ಟೀಕೆ ಮಾಡುವುದಿಲ್ಲ. ಆದರೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಂಥ ಅನುಮತಿಯನ್ನು ಕೊಡದೆ ಇದ್ದರೆ ಒಳ್ಳೆಯದು.

Mr. DEPUTY SPEAKER.—Now the House stands adjourned to meet tomorrow at 12 NOON.

The House adjourned at Fifteen Minutes past Seven of the Clock to meet again at Twelve of the Clock on Tuesday the 4th March 1969.

WD 12550—GPB—600—20-6-1969